ಕನ್ನಡನುಡಿ

ಸಂಪುಟ ೧೬ ಆಗಸ್ಟ್ ಸಂಚಿಕೆ ೮

ವಾರ್ಷಿಕ ಚಂದಾ : ಅಂಚೆ ವೆಚ್ಚ ಸೇರಿ ರೂ. ೬

ಸಂಪಾದಕರು :
ಎಂ. ಆರ್. ಶ್ರೀನಿವಾಸಮೂರ್ತಿಗಳು

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು
೧೯೫೬

ವಿಷಯಸೂಚಿಕೆ

ಕನ್ನಡನುಡಿ



ಸಂಪುಟ ೧೭ | ಆಗಸ್ಟ್ ೧೯೫೪ | ಸಂಚಿಕೆ ೮

ಭಕ್ತಗೀತ

ಭಾವವೆಂತಿಹುದೋ ಪ್ರಭಾವವಂತಹುದಂತೆ
ದೇವ ನಿನ್ನೊಲವಹುದು ಸೇವೆಯಂತೆ।
ಭುಕ್ತಿ ಹಿತಮಾಗೆ ತನುಶಕ್ತಿ ವರ್ಧಿಸುವಂತೆ।
ಭಕ್ತಿ ಪರಿಪಾಕದಿಂ ಮುಕ್ತಿಯಹುದು॥

ಜ್ಞಾನವಿಲ್ಲದೆ ಸದಾ ಸ್ನಾನಮಾಡಿದರೇನು।
ಮೀನು ಮುಳುಗಲು ಜಲದಿ ಮ್ಮೇಲ್ಮೆಯೇನು॥
ನಾನಾವಿಧಾಶೆಯಿಂ ಮಾನಸದೆ ಮಾಡುವಾ।
ಧ್ಯಾನದಿಂ ಲಭಿಸುವಾ ಜ್ಞಾನವೇನು ?॥

ಅದರಿಂದೆ ಶುಷ್ಕಕರ್ಮದ ನಟನೆಯುಳಿದು।
ಪುದಿದ ಭಕ್ತಿಯೊಳಿಯ್ದೆ ಕುದಿವೆ ಮಾನಸದಿ॥
ಸದಯ, ನೋಡುತೆ ನಿನ್ನ ಸದಮಲಾಕೃತಿಯ।
ಮುದಮಾಂಪ ಪುಣ್ಯವೆಂದೊದಗುವುದೊ ನನಗೆ॥

ಭುವನಕರ್ತೃವು ನೀನೆ ಭುವನಪಾಲನು ನೀನೆ॥
ಭುವನಶಾಸನಕಾಲ ಪುರುಷ ನೀನೆ॥
ಭುವನತ್ರಯದೊಳಿರ್ಪ ಭೂತಜಾಲವು ನೀನೆ।
ಭುವನಂಗಳವು ನೀನೆ ಭೂತಿ ನೀನೆ॥

ಪೂಜ್ಯವಸ್ತುವು ನೀನೆ ಪುಣ್ಯಕಾರಣ ನೀನೆ।
ಪೂಜಕಾತ್ಮನುನೀನೇ ಪೂತ ನೀನೆ॥
ತೇಜೋಮಯಾಗ್ನಿಶಶಿದಿನನಾಥರುಂ ನೀನೆ।
ರಾಜಿಸುವ ವಸ್ತುಗಳ ರಾಶಿ ನೀನೆ॥

ಇಂತಾದೊಡಂ ನೀನದೆಂತಿಹೆಯೊ ದೇವ।
ಎಂತೆಂತು ದಿನದಿನದೆ ಚಿಂತಿಸಿದೊಡಿನ್ನು।
ಸ್ವಾಂತದೊಳು ನಿನ್ನತುಳಶಾಂತರೂಪವನು।
ಸಂತಸದೆ ಕಾಣದಿನ್ನೆಂತು ಸೈರಿಪೆನು॥

—ವಿದ್ಯಾಧರ

ಸೂಕ್ತಿಸುಧೆ

ಕಾವ್ಯಸಮಯ

ಆವುದಶೇಷ ಲೋಕವಿಷಯ ಸ್ಥಿತಿಯಲ್ತಖಿಲಾಗಮಾರ್ಥಮುಂ
ಭಾವಿಪೊಡಲ್ತು ಸತ್ಕವಿಪರಂಪರೆಯಿಂ ಪರಿಗೀತಮಾಗಿನಿ
ಷ್ಕೇವಳಮಾದ ರೂಢಿವಶದಿಂ ಸಲೆ ಸಲ್ವುದಲ್ತೆ ಶಿಷ್ಟ ಸಂ
ಭಾವಿತಮಪ್ಪ ಕಾವ್ಯಸಮಯಂ ಭುವನತ್ರಯವಸ್ತುಗೋಚರಂ ||

—ನಾಗವರ್ಮ

ಪಗಲೊಳ್ ಚಿತ್ರಂ

ಕಂ|| ಗಿರಿಜೆ ಶಶಿವದನೆಕೊಳನಂ
ಭರದಿಂ ಪುಗೆ ನೆಯ್ದಲೆಯ್ದಿದವು ವಿಕಸನಮಂ ||
ವಿರಹಮನಾಂತುವು ಕೋಕಂ
ಸರಸಿರುಹಂ ಮುಗಿದುವರರೆ ಪಗಲೊಳ್ ಚಿತ್ರಂ ||

—ಗಿರಿಜಾಕಲ್ಯಾಣಂ

ಸಿರಿ ಬೆಳ್ದಿಂಗಳ್

ಇಂಗಡಲೆ ಕಡಲ್ಗಳ್ ಸೌ
ಧಂಗಳೆ ಸದನಂಗಳಿಂದುಕಾಂತವೆ ಕಲ್ಗಳ್ ।
ಗಂಗೆಯೆ ತೊರೆಗಳೆನಲ್ ಬೆ
ಳ್ಪಂಗೆಡದುದು ಕುಮುದವನದ ಸಿರಿ ಬೆಳ್ದಿಂಗಳ್ ||

—ಪಂಪರಾಮಾಯಣ

ಸುಭಾಷಿತ

ಹರಿನಾಮ ಹೇಮ ಸುಲಭಂ, ಸುಪ್ರೇಮೋತ್ತಮುತಮಂ ರತ್ನಂ ।
ಸುಲಭೋ ಮಾನಸ ಶಿಲ್ಪೀ, ಕಂಠಾಭರಣಂ ಕುತೋ ನ ಕುರುಷೇ ತತ್ ।

—ಚಂದ್ರಚೂಡ

ಹರಿನಾಮ ಎಂಬ ಚಿನ್ನ ಸುಲಭ ; ಒಳ್ಳೆಯ ಪ್ರೇಮ ಎಂಬ ಉತ್ತಮ ರತ್ನ ಸುಲಭ; ಮನಸ್ಸೆಂಬ ಶಿಲ್ಪಿ ಸುಲಭ; ಹೀಗಿರುವಾಗ ಆ ಚಿನ್ನವನ್ನು ಕಂಠಾಭರಣವನ್ನಾಗಿ ಮಾಡಿ ಕೊಳ್ಳೆಯೇಕೆ ?

ಶಾಂಕರ ಸಿದ್ಧಾಂತ
(ಪ್ರಕರಣ ಪೂರ್ವಕ)

ಶ್ರೀ ದೇವುಡು ನರಸಿಂಹಶಾಸ್ತ್ರಿ

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರೇವ ಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರುವೇ ನಮಃ ॥

ಶ್ರೀಮದಾಚಾರ್ಯರ ವಿಚಾರ ಹೇಳುವುದಕ್ಕೂ ಕೇಳುವುದಕ್ಕೂ ಮುಂಚೆ ನಾವು ನಮ್ಮ ಮನಸ್ಸಿನಲ್ಲಿರುವ ಪೂರ್ವಗ್ರಹಗಳನ್ನು ಬಿಟ್ಟು ಶುದ್ಧರಾಗಬೇಕಾದುದು ಅಗತ್ಯ. ಏಕೆಂದರೆ ಆಚಾರ್ಯರ ಉಪದೇಶಗಳನ್ನು ಕೇಳುವುದೂ ಹೇಳುವುದೂ ಏಕೆ ? ಜನನಮರಣರೂಪವಾದ ಸಂಸಾರ ವ್ಯಾಧಿಗೆ ಆಚಾರ್ಯರ ವಾಕ್ಯಗಳು ಭೇಷಜವಾಗಲಿ ಎಂದು. ಆದರೆ ನಮಗೆ ಈ ಸಂಸಾರವು ವ್ಯಾಧಿಯೆಂದು ನಂಬಿಕೆಯಿದೆಯೇನು ? ಸಂಸಾರವು ಸುಖವೆಂದು ತಿಳಿದಿರುವವರ ಮಾತೇನು ? ಅದರಿಂದ "ಸಂಸಾರ, ಜಗತ್ತು, ಇವುಗಳ ರೂಪವೇನು ? ಇವು ವ್ಯಾಧಿ ಹೇಗೆ? ಇವಕ್ಕೆ ಚಿಕಿತ್ಸೆಯುಂಟೇ ? ಇದ್ದರೆ ಅದೇನು ? ಎಲ್ಲಿದೆ ? " ಮೊದಲಾದವುಗಳನ್ನು ತಿಳಿಯುವುದೇ ಪೂರ್ವಗ್ರಹಗಳ ನಿವೃತ್ತಿ. ಅದು ಆಗಬೇಕಾದರೆ ಆಚಾರ್ಯರ ಪ್ರಕರಣಗಳಿಂದ ಆಗುವಷ್ಟು ಸುಲಭವಾಗಿ ಇನ್ನು ಯಾವ ಗ್ರಂಥಗಳಿಂದಲೂ ಸಾಧ್ಯವಿಲ್ಲ. ಪ್ರಕರಣಗಳಲ್ಲಿ ಹೇಳಿರುವುದನ್ನು ತಿಳಿದರೆ, ತಿಳಿದುಕೊಂಡರೆ, ಅದನ್ನು ಆಚರಣಕ್ಕೆ ತಂದರೆ, ಆಗ ಅದ್ವೈತವು ಲಭಿಸುವುದು.

ಸ್ವತಂತ್ರ ವೇದಾಂತಾಧ್ಯಯನ

ಮೊದಲನೆಯ ಪೂರ್ವಗ್ರಹ "ಸ್ವತಂತ್ರವಾಗಿ ನಾವು ವೇದಾಂತವನ್ನು ತಿಳಿದುಕೊಳ್ಳಬಲ್ಲೆವು. ಸಾಧಿಸಬಲ್ಲೆವು" ಎಂಬುದು. ತರ್ಕಾದಿಶಾಸ್ತ್ರಗಳ ವಿಚಾರವಾಗಿ ಅದು ನಿಜವಾದರೂ ವೇದಾಂತದಲ್ಲಿ—ಅದರಲ್ಲೂ ಅದ್ವೈತ ವೇದಾಂತದಲ್ಲಿ ಅದು ಸಾಧ್ಯವಿಲ್ಲ. ಆಚಾರ್ಯರು—ಉಪನಿಷತ್ತುಗಳ ಪಂಥವನ್ನೇ ಹಿಡಿದು ಗೀತಾಭಾಷ್ಯದಲ್ಲಿ "ಸರ್ವಶಾಸ್ತ್ರವಿದಪಿ ಅಸಂಪ್ರದಾಯವಿಚ್ಛೇತ್ ಮೂಢವತ್ ಪರಿತ್ಯಾಜಃ" ಎಂದು ಹೇಳಿದರು. ಇನ್ನೊಂದೆಡೆ "ಏವಂ ಸಂಪ್ರದಾಯವಿದ್ಭಿರುಚ್ಯತೇ" ಎಂದರು. ಪ್ರಕರಣಗಳಲ್ಲಂತೂ 'ಗುರುವನ್ನು ಸಮಾಶ್ರಯಣಮಾಡು' ಎಂದು ಮುಕ್ತಕಂಠವಾಗಿ ಹೇಳಿದರು.*

ಅದ್ವೈತದಲ್ಲಿ ಸಂಪ್ರದಾಯ ಬಹುಮುಖ್ಯ. ಸಂಪ್ರದಾಯವೆಂದರೆ ಗುರುಶಿಷ್ಯಪರಂಪರಾ ಪ್ರಾಪ್ತವಾಗಿ ಬಂದಿರುವ ಜ್ಞಾನಾನಂದವಾಹಿನಿ. ಇದು ಹಿಂದಿನಿಂದ ಅವ್ಯಾಹತವಾಗಿ ಬಂದಿದೆ. ಈಗಲೂ ಇದೆ. ಇನ್ನು ಮುಂದೆಯೂ ಇರುತ್ತದೆ. ಇದನ್ನು ಹಿಡಿದ ಕೃತಾರ್ಥನಿಗೆ ಅದ್ವೈತವೇ ಹೊರತು ಸ್ವಪ್ರಯತ್ನದಿಂದ, ತಾನಾಗಿ, ದುರ್ಗವನ್ನು ಗೆಲ್ಲುವಂತೆ, ಗೆಲ್ಲುವೆನೆಂಬ ಸಾಹಸ ಇಲ್ಲಿ ನಡೆಯುವುದಿಲ್ಲ. ಸಾಹಸ "ನಾನು ನಾನು" ಎಂದಾಗ ಮಾಡುವ ಪ್ರಯತ್ನ. ಅದ್ವೈತ, ಆ "ನಾನು ನಾನು" ಎನ್ನುವುದು ಇರುವವರೆಗೆ ಸಿಕ್ಕುವುದಿಲ್ಲ.

ಪಿಂಡಗ್ರಹನಿವೃತ್ತಿ

ನಾನು ಎಂದು ನಾವು ಈಗ ಹೇಳಿಕೊಳ್ಳುತ್ತಿರುವುದು ಸಣ್ಣನಾನು. ಅದರಿಂದ ಈ ಮಾತು ಹೇಳಬೇಕು. ನಾನು ಎನ್ನುವಾಗ ಖಚಿತವಾಗಿ ಈ ದೇಹವೇ ನಾನು ಎಂಬ ಅರ್ಥದಲ್ಲಿಯೇ ಮಾತಾಡುತ್ತೇವೆ. ನಾವು ಮಾಡಿದ, ಮಾಡುವ, ಮಾಡುತ್ತಿರುವ ಕೆಲಸಗಳಲ್ಲಿ, ದೇಹ ಒಂದು ಕರಣವಾಗಿದೆ: ಅದರ ಅಶಕ್ತಿ

---

*ವಿದ್ಯಯಾ ತಾರಿತಾಃ ಸ್ಮೋ ಯೈರ್ಜನ್ಮಮೃತ್ಯುಮಹೋದಧಿಂ ।
ಸರ್ವಜ್ಞೇಭ್ಯೋ ನಮಸ್ತೇಭ್ಯೋ ಗುರುಭ್ಯೋಽಜ್ಞಾನಸಂಕುಲಂ ॥
ಉಪದೇಶಸಾಹಸ್ರಿ: ಪ್ರ. ೧೭. ಶ್ಲೋ. ೮೯.

ವೇದಾಂತವಾಕ್ಯ ಪುಷ್ಪೇಭ್ಯೋ ಜ್ಞಾನಾಮೃತಮಧೂತ್ತಮಂ ।
ಉಜ್ಜಹಾರಾಲಿವದ್ಯೋ ನಸ್ತಸ್ಮೈ ಸದ್ಗುರುವೇ ನಮಃ ॥
ಉ. ಸಾ. ಪ್ರ. ೧೮. ಶ್ಲೋ. ೮೯.

ತಮಾರಾಧ್ಯ ಗುರುಂ ಭಕ್ತ್ಯಾ ಪ್ರಹ್ವಪ್ರಶ್ರಯ ಸೇವನೈಃ ॥
ಪ್ರಸನ್ನಂ ತಮನುಪ್ರಾಪ್ಯ ಪೃಚ್ಛೇ ಜ್ಜ್ಞಾತವ್ಯಮಾತ್ಮನಃ ॥
ವಿವೇಕಚೂಡಾಮಣಿ—ಶ್ಲೋಕ ೩೪.

ಯಿಂದ ನಮಗೆ ಅಡ್ಡಿಯಾಗಿದೆ. ಅದನ್ನು ಮೀರಿದಲ್ಲದೆ ನಾವು ಬದುಕುವಂತಿಲ್ಲ ಎಂಬುದು ನಮಗೆ ಅನುಭವಕ್ಕೆ ಬರುತ್ತಿದ್ದರೂ, ದೇಹವು ನಾವಲ್ಲ ಎಂಬುದು ಗೊತ್ತಾದರೂ, ಅದನ್ನು ಒತ್ತಿ ಅತ್ತಿಟ್ಟು, ನಾನು ಎನ್ನುವಾಗೆಲ್ಲಾ ಈ ದೇಹ ಎನ್ನುವರ್ಥದಲ್ಲಿಯೇ ನಿಂತು ನುಡಿಯುತ್ತೇವೆ. ಇದು ಎರಡನೆಯ ಪೂರ್ವಗ್ರಹ. ನಾನು ಎನ್ನುವುದು ದೇಶಕಾಲಗಳ ಪರಿಚ್ಛೇದಕ್ಕೆ ಸಿಕ್ಕಿ ಅಲ್ಪವಾಗಿರುವ ವಸ್ತು ಎಂದು ನಮ್ಮ ಭಾವನೆ ದೃಢವಾಗಿದೆ. ಇದು ಹೋಗಬೇಕು. ಇದು ಅಳಿಯಬೇಕು. ನಾನು ಎಂಬುದರ ವಿಸ್ತೃತ ಅರ್ಥ ನಮ್ಮ ಮನಸ್ಸಿನಲ್ಲಿ ಮೂಡಬೇಕು. ಮಂತ್ರಶಾಸ್ತ್ರಜ್ಞರು ' ಅಹಂ ' ಎಂದರೆ ಅಕಾರದಿಂದ ಹಿಡಿದು ಹಕಾರದವರೆಗೆ ಇರುವ ಸಮಸ್ತ ವರ್ಣಮಾಲೆಯ ಪ್ರತ್ಯಾಹಾರ ಎನ್ನುತ್ತಾರೆ. ಎಂದರೆ, ನುಡಿಯುವುದು ವರ್ಣಗಳ ಮೂಲಕ. ಆ ವರ್ಣಗಳು ಹೇಗೆಹೇಗೆ ಸೇರಿ ಯಾವಯಾವ ಅರ್ಥದಲ್ಲಿ ಏನೇನು ನುಡಿದರೂ ಆ ವಾಕ್ಕು ಆ ಅರ್ಥ ಎರಡೂ ಸೇರಿ ಅದೆಲ್ಲ ' ಅಹಂ '. ಈ ಮಾತಿಗೆ ಒಪ್ಪಿಗೆಕೊಟ್ಟರೆ ಅಹಂ ಎಷ್ಟು ದೊಡ್ಡದಾಯಿತು! ಅಂತಹ ' ಅಹಂ ' ತಿಳಿಯುವುದು ಅದ್ವೈತ. ಅದ್ವೈತ ಹೇಳುವ ಅಹಂ ಅದು. ಈ ಸಾಸುವೆಗಿಂತ ಸಣ್ಣ ಅಹಂ ಎಂದುಕೊಳ್ಳುವ ಮಾನವ ಎಂದು ಗಿರಿಗಿಂತ ಹಿರಿಯದಾದ ಈ ಅಹಂ ನಾನು ಎಂದುಕೊಳ್ಳುವನೋ ಅಂದು ಅದ್ವೈತ.*

ಅಹಂ ನಿತ್ಯತ್ವ

ಜಗತ್ತು ಹುಟ್ಟಿದಂದಿನಿಂದ ಯಾರನ್ನು ಕೇಳಿದರೂ ನಾನು ನಾನು ಎನ್ನುತ್ತಲೇ ಇದ್ದಾರೆ. ಅವರಲ್ಲಿ ಹುಟ್ಟಿದವರೆಲ್ಲ ಈಗ ಇಲ್ಲ. ಆದರೆ ಅವರು ಹೇಳುತ್ತಿದ್ದ ನಾನು ನಾನು ಅವರ ಜೊತೆಯಲ್ಲಿಯೇ ಹೋಯಿತೇ ಅಥವಾ ಇದೆಯೇ ? ಇರುವುದಾದರೆ ಯಾವ ರೂಪದಲ್ಲಿ ಹೇಗೆ ಇದೆ? ಇದು ಅದ್ವೈತದ ಮೊದಲನೆಯ ಪ್ರಶ್ನೆ. ಇದು ನಮಗೆ ಅರ್ಥವಾಗದಂತೆ ಗೋಡೆಯಾಗಿ ನಿಂತಿದೆ ಈ ನಾನು ಎಂದರೆ ದೇಹ ಎಂಬ ದೃಢವಿಶ್ವಾಸ. ಅದರಿಂದ ಇದು ಪೂರ್ವಗ್ರಹ.

ಇದು ವ್ಯಾಧಿ. ಅರಮನೆಯ ತೊಲೆಯ ತುಂಡಿನಂತೆ ಇದ್ದವನು ಬಡವರ ಮನೆಯ ಬಾಗಿಲ ಅಗಳಿಯ ತುಂಡಾದರೆ ಅದು ವ್ಯಾಧಿಯಲ್ಲವೇನು ?

ಈ " ನಾನು ನಾನು " ಸರ್ವಕಾಲದಲ್ಲೂ ಇದೆ. ಇತ್ತು. ಇರುತ್ತದೆ. ಇದನ್ನು ಇಲ್ಲವೆನ್ನುವವರೂ ಇದ್ದಾರೆ. ಅವರಲ್ಲಿ ಬೌದ್ಧರು ಮುಖ್ಯರು. ಅವರು 'ನಾನು ಎನ್ನುವುದು ಇಲ್ಲ : ಇರುವುದೆಲ್ಲ ಶೂನ್ಯ' ಎನ್ನುತ್ತಾರೆ. ನಾವೂ (ಅದ್ವೈತಿಗಳು) ಶೂನ್ಯ ಎನ್ನುತ್ತೇವೆ. ನಮ್ಮ ಶೂನ್ಯ ಆಕಾಶದಂತೆ ಶೂನ್ಯ. ಅವರ ಶೂನ್ಯ ಶುದ್ಧಶೂನ್ಯ : ನಮ್ಮ ಶೂನ್ಯ ಪೂರ್ಣದಲ್ಲಿ ಕಾಣುವ ಅನ್ಯಾಭಾವದ ಶೂನ್ಯ. ಈ ವ್ಯತ್ಯಾಸವನ್ನು ಗಮನಿಸದವರು ಅದ್ವೈತವನ್ನು ಪ್ರಚ್ಛನ್ನ ಬೌದ್ಧವಾದ ಎಂದರು. ತಪ್ಪೇನು? ಆದರೆ ಬೌದ್ಧರ ಶೂನ್ಯ ಖಾಲಿ ಎನ್ನುವರ್ಥದಲ್ಲಿ : ಅಷ್ಟೇ ವ್ಯತ್ಯಾಸ

ಭವಭೂತಿಯು ಉತ್ತರ ರಾಮಚರಿತದಲ್ಲಿ 'ಸೀತಾರಾಮರು ಮಾತನಾಡುತ್ತಿದ್ದರು ಆಗ ' ರಾತ್ರಿರೇವಂ ವ್ಯರಂಸೀತ್ ' ರಾತ್ರಿಯು ಹೀಗೆ ಕಳೆಯಿತು" ಎಂದು ಬರೆದನಂತೆ. ಅದನ್ನು ಕೇಳಿದ ಕಾಳಿದಾಸನು ಒಂದು ಸೊನ್ನೆ ಹೆಚ್ಚು ಎಂದನಂತೆ. ಎಂದರೆ ರಾತ್ರಿರೇವ ವ್ಯರಂಸೀತ್ ಎಂದಿರಬೇಕು ಆತನಭಿಪ್ರಾಯದಲ್ಲಿ. ಸೊನ್ನೆ ತೆಗೆದರೆ ಛಂದಸ್ಸು ಕೆಡಲಿಲ್ಲ: ಆದರೆ ಅರ್ಥ ಎಷ್ಟು ವ್ಯತ್ಯಾಸವಾಯಿತು ! ರಾತ್ರಿಯು ಕಳೆಯಿತೇ ಹೊರತು ಸೀತಾರಾಮರ ಮಾತು ಮುಗಿಯಲಿಲ್ಲ ಎಂದು ಆಗುವುದು. ಹಾಗೆ ಬೌದ್ಧರ ಶೂನ್ಯಕ್ಕೂ ಅದ್ವೈತದ ಶೂನ್ಯಕ್ಕೂ ಒಂದೇ ಸೊನ್ನೆ. ಸೊನ್ನೆಗೆ ಬೆಲೆಯುಂಟು : ಬೆಲೆಯಿಲ್ಲ. ಒಂದರ ಮಗ್ಗುಲಲ್ಲಿ ಇದ್ದರೆ ಅದಕ್ಕೆ ಬೆಲೆ : ಇಲ್ಲದಿದ್ದರೆ ಬೆಲೆಯೇ ಇಲ್ಲ. ಹಾಗೆ ಅದ್ವೈತ ಒಂದಿಟ್ಟು ಹಾಕಿದ ಸೊನ್ನೆ.

ಈ ಅದ್ವೈತದಲ್ಲಿ ಮೊದಲೇ ಹೇಳಿದ ಹಾಗೆ ನಾನು all inclusive ಆದರೂ ಹಾನಿಯಿಲ್ಲ, all exclusive ಆದರೂ ಹಾನಿಯಿಲ್ಲ. ಅದಷ್ಟು ಇದಷ್ಟು ಆಗಿದ್ದರೆ ಅದು ಹಾನಿ : ಅದು ರೋಗ! ಆ ರೋಗ ತಪ್ಪಬೇಕು. 'ನಾನು' ಎನ್ನುವುದು ಇದೆ ಎನ್ನುವುದಾದರೆ ಅದರಲ್ಲಿ ಎಲ್ಲಾ ಇದೆಯೆಂದಾಗಬೇಕು. ಅಷ್ಟು ಬೆಳೆಯಬೇಕು. ಇನ್ನು ಯಾವುದಕ್ಕೂ ಎಡೆಯಿಲ್ಲ ಎನ್ನುವಂತೆ ಬೆಳೆದು ತುಂಬಬೇಕು : ಇಲ್ಲವೆನ್ನುವುದಾದರೂ ತಾನೂ ಇಲ್ಲವೆನ್ನುವಮಟ್ಟಿಗೆ ಇಲ್ಲವಾಗಬೇಕು. ಈ ಎರಡರಲ್ಲಿ ಯಾವುದಾದರೂ ಚಿಂತೆಯಿಲ್ಲ.

---

*ಅಹಂ ಭಾವಸ್ಯ ದೇಹೇಽಸ್ಮಿನ್ ನಿಃಶೇಷ ವಿಲಯಾವಧಿ ।
ಸಾವಧಾನೇನ ಯುಕ್ತಾತ್ಮಾ ಸ್ವಾಧ್ಯಾಸಾಪನಯಂ ಕುರು ॥
ವಿ. ಚೂ. ೨೯೪

ಅತೋಽಭಿಮಾನಂ ತ್ಯಜ ಮಾಂಸಪಿಂಡೇ—೨೯೬
ತ್ಯಕ್ತಾ ಭವಾಖಂಡ ಸುಖಸ್ವರೂಪಃ—೨೯೭

ಆಗ ಬಾಳ ಬದುಕಿತು: ಪೂರ್ಣವಾಯಿತು. ಇಲ್ಲವೆಂದ ಶೂನ್ಯವೂ ಇದೆಯೆಂಬ ಪೂರ್ಣವೂ ಒಂದೇ ಆದಾವು. ಇದು ಮೊದಲನೆಯ ಮೆಟ್ಟಿಲು *

ಇಲ್ಲಿಗೆ ಮತ್ತೆ ಬರೋಣ. ಸದ್ಯಕ್ಕೆ ಇದನ್ನು ಬಿಟ್ಟು ಎರಡನೆಯ ಮೆಟ್ಟಿಲಿಗೆ ಹೋಗೋಣ.

ಓದಿದುದು ಅರ್ಥವಾಗಬೇಕು

ಆಚಾರ್ಯರು ಉಪದೇಶಸಾಹಸ್ರಿ ಎಂಬೊಂದು ಪ್ರಕರಣಗ್ರಂಥ ಬರೆದಿದ್ದಾರೆ. ಅದರಲ್ಲಿ "ವಾಕ್ಯಾರ್ಥಜ್ಞಾನ ಆಗಬೇಕು"† ಅಂದರು. ಹಾಗೆಂದರೇನು? ನಾವು ಆಡಿದ ಮಾತು, ನಾವು ಓದಿದ ಮಾತು ನಮಗೆ ಅರ್ಥವಾಗುವುದಿಲ್ಲವೆ? ಎಂದರೆ, ಹೌದು. ಅದ್ವೈತದ ಮಹಾವಾಕ್ಯಗಳ ಜ್ಞಾನ ಯಾರಿಗೂ ಆಗುವುದಿಲ್ಲ. ಮತ್ತೊಂದು ಕಡೆ, "ಒಂದು ಬುದ್ಧಿ ಇನ್ನೊಂದು ಬುದ್ಧಿಯನ್ನು ದೂಡಿ ಅದರ ಸ್ಥಳದಲ್ಲಿ ನಿಲ್ಲುತ್ತದೆ"‡ ಎಂದರು. ಕಾಲಿದಾಸನು "ಭಾವೋ ಭಾವಂ ನುದತಿ ರಾಗಬಂಧಸ್ಸ ಏವ" ಎಂದ ಹಾಗೆ, ಆಚಾರ್ಯರ ಮಾತೂ ಗೂಢವಾಗಿದೆ. ಭಾವ ಒಂದು ಬಂದು ಹಿಂದಿನ ಭಾವವನ್ನು ತಿಂದು ಮುಂದೆ ಬರುವ ಭಾವಕ್ಕೆ ತಾನು ಅನ್ನವಾದರೆ, ಆಗ ಬಂದ ಭಾವ, ಇರುವ ಭಾವ, ಮುಂದೆ ಬರುವ ಭಾವ, ಮೂರೂ ಸೇರಿ ರಸವಾಗುವುದು. ಇದನ್ನೇ ಆಚಾರ್ಯರು 'ಜ್ಞಾನದಲ್ಲಿ ಚೋದನಾ § ಇದೆ' ಎನ್ನುವುದು. ಅದು ಅರ್ಥವಾದರೆ, ಆಗ ನಮ್ಮ ಅನುಭವಕ್ಕೆ ಬರಬೇಕು. ನಮ್ಮ ಅನುಭವಕ್ಕೆ ಬಂದರೆ ಅದು ಕಾರ್ಯರೂಪವಾಗಬೇಕು. ಅನುಭವಕ್ಕೆ ಬಂದ ವಾಕ್ಯಾರ್ಥ ಜ್ಞಾನ ಪೂರ್ಣವಾಯಿತು. ಬರದಿದ್ದರೆ ನಾಟಕದ ಮಾತು. ಶೂನ್ಯ. ಅದ್ವೈತ ಅನುಭವಕ್ಕೆ ಬಂದರೆ ಆಗ ಸುಖದುಃಖಗಳಿಗೆ ಬೇರೆ ಸ್ವರೂಪವಿಲ್ಲ. ಅಂತಹ ಸ್ಥಿತಿಯಲ್ಲಿ ಉಂಟೋ ಇಲ್ಲವೋ ಅದೂ ಹೇಳುವುದಕ್ಕಾಗುವುದಿಲ್ಲ. ಉಂಟು ಎಂದರೆ ಉಂಟು ಇಲ್ಲವೆಂದರೆ ಇಲ್ಲ. ಆದರೆ ಉಪನಿಷತ್ತು ಹೇಳಿತು ಅಂತಹ ಸ್ಥಿತಿಯಲ್ಲಿ 'ಅಸ್ತೀತ್ಯೇವ ಉಪಲಬ್ಧವ್ಯಃ' ಎಚ್ಚರಿಕೆ—ಇಲ್ಲ ಎನ್ನಬೇಡ. ಉಂಟು ಎನ್ನು. ಎಂದಿತು.

ಪ್ರಕರಣಗಳೂ ಪ್ರಸ್ಥಾನಗಳೂ

ಇವುಗಳನ್ನೆಲ್ಲಾ ಆಚಾರ್ಯರು ಪ್ರಕರಣಗಳಲ್ಲಿ ಹೇಳಿರುವಷ್ಟು ಸುಲಭವಾಗಿ ಪ್ರಸ್ಥಾನಗಳಲ್ಲಿ ಹೇಳುವುದು ಸಾಧ್ಯವಿಲ್ಲ. ಪ್ರಸ್ಥಾನತ್ರಯದಲ್ಲಿ ಉಪನಿಷತ್ತುಗಳು—ರಹಸ್ಯವಿದ್ಯೆಗಳು. ಗಂಡಹೆಂಡಿರ ಮಾತಿನಂತೆ. ಗುರುತು ತಿಳಿದಿದ್ದರೆ ಆ ಮಾತು. ಇಲ್ಲದಿದ್ದರೆ ಇಲ್ಲ. ಬ್ರಹ್ಮಸೂತ್ರಗಳಲ್ಲಿ—ಪೂರ್ವಪಕ್ಷ, ಸಮಾಧಾನ, ಖಂಡನ ಮಂಡನಗಳು, ನಿರ್ಣಯ. ಅಲ್ಲಿ ಹಾಲು ಹೇಗಿರುತ್ತದೆಂದು ಕುರುಡನು ಕೇಳಿಕೇಳಿ ಕೊನೆಗೆ ಹಾಲು ಕೊಕ್ಕರೆಯ ಹಾಗೆ ಡೊಂಕಡೊಂಕಾಗಿದೆ ಎಂದುಕೊಂಡಂತೆ ಆಗಬಹುದು. ಇನ್ನು ಗೀತೆ. ಅದು ಸುಲಭವಾಗಿದೆಯಲ್ಲಾ! ಎಂದರೆ, ನಿಜ. ಅದು ಸುಲಭವಾಗಿದೆ—ಅದರಿಂದಲೇ ಅದು ಅರ್ಥವಾಗುವುದಿಲ್ಲ. ಆ ವಿಚಾರ ಮತ್ತೆ ಹೇಳೋಣ. ಅಂತೂ ಪ್ರಸ್ಥಾನತ್ರಯದ ಸಿದ್ಧಾಂತಕ್ಕಿಂತ, ಪ್ರಕರಣದ ಸಿದ್ಧಾಂತಗಳು ಸುಲಭ. ಶಿಷ್ಯಾನುಗ್ರಹಕ್ಕಾಗಿ ಆಚಾರ್ಯರು ತುಂಬಿಟ್ಟಿರುವ ಅಮೃತ ಕುಂಭಗಳಿವು.* ಪ್ರಸ್ಥಾನತ್ರಯಗಳು ರಣರಂಗದಲ್ಲಿ ಹೊಡೆದ ಗುಂಡುಗಳು. ಯಾವುದು ಸುಲಭ?

ಇದರಿಂದಲೇ, ಪ್ರಸ್ಥಾನತ್ರಯವನ್ನು ಅರ್ಥ ಮಾಡಿಕೊಳ್ಳಲಾರದೆ, ಅದ್ವೈತ ಸಿದ್ಧಾಂತವನ್ನು ಹಿಡಿಯಲಾರದೆ ವಾದಿಗಳು ಬಯ್ದರು! ನಾವು ಅವರನ್ನು ಭ್ರಾಂತರು ಎನ್ನುತ್ತೇವೆ. ಅದರಿಂದ ಅವರ ವಿಚಾರದಲ್ಲಿ ನಾವು ನಗಬಹುದು: ಅಷ್ಟೇ! ಕೋಪಗೊಳ್ಳಬಾರದು.

ಹಿಂದಿನ "ವಾಕ್ಯಾರ್ಥಜ್ಞಾನವಾಯಿತು." ಮಾತು ತೆಗೆದುಕೊಳ್ಳೋಣ. ಅದ್ವೈತ ಅರ್ಥವಾದರೆ, 'ಸತ್ಯಂ ಜ್ಞಾನಮನಂತಂ ಬ್ರಹ್ಮ'. ಅದು ನಾವಾದೆವು ಎಂದರ್ಥ. ಬ್ರಹ್ಮವು ಇಲ್ಲದ ಎಡೆಯಿಲ್ಲ. ಅದಲ್ಲದ ವಸ್ತುವಿಲ್ಲ ಎಂದು ಹೇಳುವ ಅದ್ವೈತ ಅರ್ಥವಾದರೆ,

---

*ಉಪದೇಶ ಸಾಹಸ್ರಿ ಗದ್ಯದಲ್ಲಿ ಪರಿಸಂಖ್ಯಾನ ಪ್ರಕರಣವನ್ನು ನೋಡಿ.

† ಉಪದೇಶಸಾಹಸ್ರಿ—೧೮ನೆಯ ಪ್ರಕರಣ ನೋಡಿ.

‡ ಪೂರ್ವಬುದ್ಧಿಮಬಾಧಿತ್ವಾ ನೋತ್ತರಾ ಜಾಯತೇ ಮತಿಃ ॥
ಉ. ಸಾ. ಪ್ರ. ೨. ಶ್ಲೋ. ೩.

§ ಚೋದನಾ ಎಂದರೆ ಕಾರ್ಯದಲ್ಲಿ ಪ್ರವರ್ತಿಸುವಂತೆ ಮಾಡುವ ಶಕ್ತಿ. ಅರ್ಥವಾದ ಪ್ರತಿಯೊಂದು ಮಾತಿಗೂ ಈ ಶಕ್ತಿಯಿದೆ. ಮಾತು ಅರ್ಥವಾದುದಕ್ಕೆ ಗುರುತು ಇದು. ಈ ಶಕ್ತಿಯಿಲ್ಲದಿದ್ದರೆ ಮಾತು ಅರ್ಥವಾಗಿಲ್ಲ ಎಂದು ಅರ್ಥ.

*ರಹಸ್ಯಂ ಸರ್ವವೇದಾನಾಂ ದೇವಾನಾಂ ಚಾಪಿಯತ್ಪರಂ ॥
ಪವಿತ್ರಂ ಪರಮಂ ಹ್ಯೇತತ್ ತದೇತತ್ ಸಂಪ್ರಕಾಶಿತಂ ॥
ಉ. ಸಾ. ಪ್ರ. ೧೭. ಶ್ಲೋ. ೮೫.

ನಾವು ಬ್ರಹ್ಮನಾದರೆ, ಅಲ್ಲಿ ನಾವು—ನೀವು ವ್ಯವಹಾರವೇ ಮುಗಿಯಿತಲ್ಲ! ಅಲ್ಲಿಂತು ಇನ್ನೊಬ್ಬರನ್ನು ಬಯ್ಯುವುದು? ಯಾರು ಬಯ್ಯುವುದು? ಯಾರು ಬಯ್ಯಿಸಿಕೊಳ್ಳುವುದು? ಅಲ್ಲಿರುವುದು ಆನಂದಮಾತ್ರ. ಆದರಿಂದ ಮಾತಿಗೇ ಅವಕಾಶವಿಲ್ಲ.

ಫಲವೇನು?

ಆಯಿತು. ಅದೂ ಇರಲಿ. ಅನದ್ವೈತಿಗಳ ಮಾತು ಇರಲಿ. "ನಮಗೇ ನೀವು ಹೇಳುವ ವಾಕ್ಯಾರ್ಥ ಜ್ಞಾನವಾಯಿತು. ಅದ್ವೈತ ಸಿದ್ಧಿಸಿತು ಎನ್ನೋಣ ಆದರಿಂದ ಉಪಯೋಗವೇನು?" ಎಂದು ಕೇಳಿದರೆ ಅದಕ್ಕೆ ಉತ್ತರಕೊಡುವುದು ಕಷ್ಟ. ಜ್ಞಾನ ಎಂದರೆ ನಾವು ಏನು ತಿಳಿದುಕೊಂಡಿದ್ದೇವೆಯೋ ಅದರಮೇಲೆ ಆ ಉತ್ತರ ಅವಲಂಬಿಸಬೇಕು. ಜ್ಞಾನ ಹೊರಗಿನದು ಎನ್ನುವವರು ಕೆಲವರು. ಅವರನ್ನು ಸಾಂಖ್ಯರು ಎನ್ನುತ್ತಾರೆ. ಅವರ ಹಾಗೆಯೇ ಇತರರು. ಅವರಿಗೆ ಜ್ಞಾನ ಎನ್ನುವುದು ಒಂದು ಚಿನ್ನದ ತುಂಡು ಇದ್ದ ಹಾಗೆ. ಆದರೆ ಅದ್ವೈತಿಗೆ ಹಾಗಲ್ಲ: ಜ್ಞಾನವು ಆತ್ಮ ಸ್ವರೂಪ. ನಾಮರೂಪಗಳಿಂದ ಕೂಡಿದ ಪದಾರ್ಥಗಳನ್ನು ತುಂಬಿಟ್ಟುಕೊಂಡಹಾಗೆ ಇತರ ಜ್ಞಾನ. "ನನ್ನ ಸ್ವರೂಪವನ್ನೇ ಜ್ಞಾನವು ಬೆಳಿಸುವುದು, ನಾನೇ ಜ್ಞಾನವಾಗುವುದು" ಎಂದು ನಮ್ಮ ಮತ. ಸಣ್ಣ ರೂಮಿನಲ್ಲಿ ಕುಳಿತವನು ಇಕ್ಕಟ್ಟು ಎನ್ನುತ್ತಾನೆ. ದೊಡ್ಡಹಾಲಿನಲ್ಲಿ ಕುಳಿತವನು "ಅಬ್ಬಾ! ಹಾಯಾಗಿದೆ" ಎನ್ನುತ್ತಾನೆ. ಅದೇ ಅವನೇ ಈ ಭೂಮಿಯೆಲ್ಲ, ಈ ಆಕಾಶವೆಲ್ಲ, ಈ ಬ್ರಹ್ಮಾಂಡವೆಲ್ಲ, ಇದ್ದುಬದ್ದುದ್ದೆಲ್ಲ ತಾನೇ ಎಂದು ಖಚಿತವಾಗಿ ತಿಳಿದಾಗ, ತನ್ನ ಬಿಟ್ಟು ಇನ್ನೊಂದಿಲ್ಲ ಎಂದು ಅನುಭವಕ್ಕೆ ಬಂದಾಗ ಪಡುವ 'ಹಾಯ್' ಎಂಥದು! ಅದು ವಾಕ್ಯಾರ್ಥಜ್ಞಾನದಿಂದ ಆಗುವ ಲಾಭ.

ಅದು ಅದ್ವೈತಾನುಭವ. ಅಂತಹ ಅನುಭವವನ್ನು ತುಂಬಿಟ್ಟಿರುವ, "ನಿಮಗೆಲ್ಲಾ ಸುಲಭವಾಗಿ ತಿಳಿಯಲೆಂದು ನಿಮ್ಮ ಉದ್ಧಾರಕ್ಕಾಗಿ, ನಿಮಗೆ ಬೇಕಾದುದನ್ನೆಲ್ಲಾ ನಿಮ್ಮ ಮುಂದೆ ಇಡುತ್ತೇನೆ" ಎಂದು ಆಚಾರ್ಯರು ನಮಗೆ ಕೊಟ್ಟಿರುವ ವರಗಳು ಪ್ರಕರಣಗಳು* ಒಟ್ಟಿನಲ್ಲಿ ಇಷ್ಟೇಮಾತು. ನೀವು ಅದ್ವೈತವನ್ನು ಬೇಕೆನ್ನುವುದು ಉದ್ಧಾರಕ್ಕೋ? ವಾದಕ್ಕೋ? ಉದ್ಧಾರಕ್ಕಾದರೆ ಪ್ರಕರಣಗಳನ್ನು ಓದಿ. ವಾದವಿವಾದ ಮಾಡಬೇಕು, ಪಂಡಿತರೆಂಬ ಖ್ಯಾತಿ ಸಂಪಾದಿಸಬೇಕು ಎನ್ನುವುದಾದರೆ ಪ್ರಸ್ಥಾನಗಳನ್ನು ಓದಿ. ಆದರಿಂದ ನಾವು ಮುಖ್ಯವಾಗಿ ತಿಳಿದುಕೊಳ್ಳಬೇಕಾದುದು ನೆನೆಪಿನಲ್ಲಿಡಬೇಕಾದುದು ಎರಡಂಶ. ನಾನು—ವಾಕ್ಯಾರ್ಥಜ್ಞಾನ. ಈ ಎರಡೂ ಒಟ್ಟಿಗೆ ಸೇರಿಸಿ ನೋಡಿದಾಗ ತೇಲುವುದು ಒಂದು ಅಂಶ. ಅದು "ನಾನು ಎನ್ನುವುದು ಅಹಂಕಾರ: ಅದರ ಹಿಂದೆ ಇರುವುದು ಸಾಕ್ಷಿ. ಸಾಕ್ಷಿ ಎಂಬ ಬೆಳಕಿನ ನೆರಳು ಅಹಂಕಾರ. ಇದು ನಮ್ಮನ್ನು ಇಷ್ಟು ಗೋಳುಗಟ್ಟಿಸುತ್ತಿರುವುದು." ಈ ವಿಚಾರಕ್ಕೆ ಸಾಕ್ಷಿ ಗೀತೆ.

ಗೀತೆಯು ಸುಲಭವೇ?

ಆಗಲೇ ಗೀತೆಯ ಮಾತು ಎತ್ತಿದ್ದೆವು. ಗೀತೆ ಸುಲಭ ಎಂದುಕೊಳ್ಳುವವರಿಗೆ ವಾಕ್ಯಾರ್ಥಜ್ಞಾನವಾಗಲಿಲ್ಲ ಎಂದರೆ ತಪ್ಪಿಲ್ಲ. ಗೀತಾ ಎನ್ನುವುದು ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ। ಪಾರ್ಥೋ ವತ್ಸಸ್ಸುಧೀ ಭೋಕ್ತಾ ದುಗ್ಧಂ ಗೀತಾಮೃತಂ ಮಹತ್॥ ಎಂಬಂತೆ ಹಾಲು. ಅದನ್ನು ತಿಳಿದುಕೊಂಡರೆ, ಹಾಲು ಕುಡಿದಷ್ಟು ಸುಲಭ. ನಿಜ. ಆದರೆ ಅನುಸಂಧಾನ ಬಹಳ ಬೇಕು. ಉದಾಹರಣೆಗೆ "ಶನೈಶ್ಶನೈರುಪರಮೇತ್ ಬುದ್ಧ್ಯಾ ಧೃತಿ ಗೃಹೀತಯಾ॥ ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್" ಎನ್ನುವ ಶ್ಲೋಕ ನೋಡಿ. ಮೊದಲನೆಯ ಪಾದದಲ್ಲಿ ಪ್ರತ್ಯಾಹಾರವನ್ನು ಹೇಳಿದರು: ಎರಡನೆಯದರಲ್ಲಿ ಧಾರಣ ನಿಧಿಧ್ಯಾಸನಗಳನ್ನು ಹೇಳಿದರು: ಮೂರನೆಯದರಲ್ಲಿ ಸಮಾಧಿಯನ್ನು ಹೇಳಿದರು. ನಾಲ್ಕನೆಯದರಲ್ಲಿ ಆ ಸಮಾಧಿಯಲ್ಲಿರುವವನ ಲಕ್ಷಣವನ್ನು ಹೇಳಿದರು. ಹೀಗೆ ಪಾದಪಾದಕ್ಕೂ ಒಂದೊಂದು ರಹಸ್ಯವನ್ನು ಹೇಳುವ ಗೀತೆ ಸುಲಭವೇನು? (ಹೀಗೆಯೇ, ಸರ್ವಸ್ಯ ಚಾಹಂ ಹೃದಿಸನ್ನಿವಿಷ್ಟಃ, ನಿರ್ಮಾನಮೋಹಾ ಜಿತಸಂಗದೋಷಾಃ, ಯೋಯಚ್ಛ್ರದ್ಧಸ್ಸ ಏವಸಃ, ಯತಃ

---

*ಬ್ರಹ್ಮಾನಂದ ರಸಾನುಭೂತಿ ಕಲಿತೈಃ ಪೂತೈಃ ಸುಶೀತೈರ್ಯುತೈಃ।
ಯುಷ್ಮದ್ವಾಕ್ಕಲಶೋಜ್ಝಿತೈಃ ಶ್ರುತಿಸುಖೈರ್ವಾಕ್ಯಾಮೃತೈಸ್ಸೇಚಯ
ಸಂತಪ್ತಂ ಭವತಾಪದಹನ ಜ್ವಾಲಾಭಿರೇನಂ ಪ್ರಭೋ।

ವಿ. ಚೂ. ೩೯

ಇದು ಆಚಾರ್ಯೋಕ್ತಿಗಳಿಗೆ ಎಷ್ಟು ಹೊಂದುತ್ತದೆ ನೋಡಿ.

ಪ್ರವೃತ್ತಿಭೂತಾನಾಂ, ಈ ಶ್ಲೋಕಗಳೂ ಅರ್ಥವಾಗುವುದು ಎಷ್ಟು ಕಷ್ಟ—ವಿಚಾರಮಾಡಿ ನೋಡಿ.)

ಪ್ರಸ್ಥಾನವೂ ಪ್ರಕರಣಗಳೂ

ಹಿಂತಿರುಗಿ, ನಾನು, ವಾಕ್ಯಾರ್ಥಜ್ಞಾನ, ಸಾಕ್ಷಿ, ಅಲ್ಲಿಗೆ ಬರೋಣ. ಆಯಿತು—"ಆತ್ಮ, ಆತ್ಮ, ಎನ್ನುವುದು ಒಂದೇತಾನೇ ನಿಮ್ಮ ಸಿದ್ಧಾಂತದಲ್ಲಿ? ಹಾಗಿದ್ದರೆ ಬೇರೆಬೇರೆಯಾಗಿ ಕಾಣುತ್ತಿರುವುದೇಕೆ?" ಎಂದು ಪ್ರಶ್ನೆ. ಅದನ್ನು ಹಾರಿಸುವುದೇ ಈ ಶಾಸ್ತ್ರದ ಉದ್ದೇಶ. ಇದನ್ನೇ ಈ ಭೇದನಿರಾಸವನ್ನೇ ಬ್ರಹ್ಮಸೂತ್ರಗಳ ಪೀಠಿಕೆಯಾದ ಅಧ್ಯಾಸ ಭಾಷ್ಯದಲ್ಲಿ ಹೇಳಿರುವುದು. ಆದರೆ ಅದು ಅಲ್ಲಿ ಉಕ್ಕಿನ ಕಡಲೆ. ನೋಡುವುದಕ್ಕೆ ಸುಲಭ. ಆದರೆ ಅರ್ಥವಾಗುವುದಿಲ್ಲ. "ಬೆಳಕು ನೆರಳುಗಳಂತೆ, ಬೇರೆಬೇರೆಯಾಗಿರುವ ನಾನು ನೀನು ಎಂಬುದು ಬೇರೆಬೇರೆಯಲ್ಲ. ಎರಡೂ ಒಂದೇ!" ಎಂದರೆ ಅರ್ಥವಾಗುವುದೇನು? ಅದರಿಂದಲೇ, ಅದು ಅರ್ಥವಾಗಲಿ ಎಂದೇ ಪ್ರಕರಣಗಳನ್ನು ನಾವು ಹಿಡಿಯುವುದು. ಪ್ರಕರಣ ತಾಯಿಯ ಹಾಗೆ! ಪ್ರಸ್ಥಾನ ತಂದೆಯ ಹಾಗೆ. ಮಗುವಿಗೆ ತಾಯಿಯಲ್ಲಿ ಹೆಚ್ಚು ಸಲಿಗೆ: ಹಾಗೆ ನಮಗೆ ಪ್ರಕರಣದಲ್ಲಿ ಹೆಚ್ಚು ಸೌಲಭ್ಯ—

ಹೀಗೆ ಆಚಾರ್ಯರು ಬರೆದಿರುವ ಪ್ರಕರಣಗಳಲ್ಲಿ ಮುಖ್ಯವಾದವು ಎರಡು. ವಿವೇಕಚೂಡಾಮಣಿ ಮತ್ತು ಉಪದೇಶಸಾಹಸ್ರಿ. ಇವುಗಳಲ್ಲಿ ವಿಷಯಗಳನ್ನು ಬಹು ಗಂಭೀರವಾಗಿ ಅತ್ಯಂತ ಸುಲಭವಾದ ರೀತಿಯಲ್ಲಿ ತಿಳಿಸಿದ್ದಾರೆ. ಅವೆರಡು ಓದಿ ತಿಳಿದುಕೊಂಡರೆ ಸಾಕು. ಜೊತೆಗೆ ಬೇಕಾದ್ದು ಗುರುಕೃಪೆಯೊಂದೇ!

ವಿವೇಕಚೂಡಾಮಣಿಯಲ್ಲಿ "ಜಂತೂನಾಂ ನರಜನ್ಮದುರ್ಲಭಂ" ಎಂಬದೊಂದು ಶ್ಲೋಕವಿದೆ. ಅದರಲ್ಲಿರುವ ವಿಷಯ ಎಲ್ಲರೂ ಒಪ್ಪಿಕೊಳ್ಳುವಂತಿದೆ—ಬೇಕೆಂದರೆ, ನೆನೆಪಿನಲ್ಲಿರಲಿ—ಧ್ಯಾನಬಿಂದೂಪನಿಷತ್ತಿನಲ್ಲಿ ವಿವರವಾಗಿ ಹೇಳಿರುವುದನ್ನೂ ನೋಡಿ. ಹಾಗೆಯೇ ಕಠೋಪನಿಷತ್ತಿನಲ್ಲಿ "ಶತಾಚ ಏಕಾನಾಡ್ಯಃ" ಎಂದು ಹೇಳಿರುವುದನ್ನೂ ಗಮನಿಸಿ. ದೇಹದಲ್ಲಿ ನಾಡಿಗಳು ತುಂಬಿಕೊಂಡಿವೆ. ಅವು ಕುಂಬಳದ ಲತಾ ಬಾಹುಗಳಂತೆ ಸುರುಳಿಸುತ್ತಿಕೊಂಡಿರುವುದು ಬಿಚ್ಚಬೇಕು, ಆಗ ಅವುಗಳಲ್ಲಿ ಆನಂದವು ತುಂಬುವುದು. ಆಗ ಸುಖ: ಅವು ಕುಗ್ಗಿದರೆ ದುಃಖ. ಅವುಗಳಲ್ಲಿ ಮುಖ್ಯವಾದುದು ಬ್ರಹ್ಮನಾಡಿ. ಅದು ಬೆಳೆದಿದ್ದರೆ ಮನಸ್ಸು ವೇದಾಂತದ ಕಡೆಗೆ ಹೋಗುವುದು. ಅದನ್ನು ಬಳಸುವುದು, ಬೆಳೆಸುವುದು ಮನುಷ್ಯನಿಗೆ ಮಾತ್ರ ಸಾಧ್ಯ. ಈ ವಿಷಯ ಕೂಲಂಕಷವಾಗಿ ತಿಳಿದು ಹೇಳಿರುವವರು ಆಚಾರ್ಯರು. ಉಳಿದವರೂ ಉಳಿದ ಶಾಸ್ತ್ರಗಳೂ ಒಂದೊಂದು ಒಂದೊಂದು ಭಾಗವನ್ನು ಹೇಳಿವೆ. ಆದರಿಂದ ಎಲ್ಲವನ್ನೂ ಸಮನ್ವಯಮಾಡಿ, ಪೂರ್ಣವಾಗಿ ಹೇಳುವುದು ಅದ್ವೈತ. ಅದರಿಂದ, ಅದ್ವೈತ ಪೂರ್ಣವಾದ.

ಅವಸ್ಥಾತ್ರಯ

ಇದಕ್ಕೆ ಸಾಕ್ಷಿ ಅವಸ್ಥಾತ್ರಯ ಪರೀಕ್ಷಣ.* ಈಗ ನಾವು ಜಾಗ್ರತ್ತು, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳನ್ನು ಬಲ್ಲೆವು. ಇಂದ್ರಿಯಗಳಿಂದ ವ್ಯಾಪಾರಮಾಡುತ್ತ ಬಹಿಃಪ್ರಜ್ಞನಾಗಿ, ಬಾಹ್ಯ ಭೋಗವುಳ್ಳವನು ವಿಶ್ವ. ಇದನ್ನೇ ನಾವು ಈಗ ನಾನು ನಾನು ಎನ್ನುವುದು. ಇದೇ ಜಾಗ್ರತ್ತು. ಜಾಗ್ರತ್ತಿನಲ್ಲಿ ಕಂಡುದನ್ನೂ ಕಾಣದ್ದನ್ನೂ, ಬಾಹ್ಯ ಪ್ರಪಂಚವನ್ನು ಬಿಟ್ಟು ಮನಸ್ಸಿನಲ್ಲಿ, ಅಂತಃಪ್ರಜ್ಞನಾಗಿ, ಜ್ಞಾನೇಂದ್ರಿಯಗಳಿಂದ ವ್ಯಾಪಾರ ಮಾಡುತ್ತಾ ಇರುವವನು ತೈಜಸ—ಅವನನ್ನೂ ನಾನು ಎನ್ನುವುದರಲ್ಲಿ ಸೇರಿಸಿಕೊಂಡಿದ್ದೇವೆ. ಆ ಕನಸು ಕಂಡವನೂ ಈಗ ಜಾಗ್ರತ್ತಿನಲ್ಲಿರುವವನೂ ನಾನೇ ಎನ್ನುವುದು ನಮಗೆ ಗೊತ್ತಿದೆ. ಮೂರನೆಯದು ಯಾವುದರ ಅರಿವೂ ಇಲ್ಲದೆ ತೊಲೆಯ ತುಂಡಿನ ಹಾಗೆ ಬಿದ್ದು ನಿದ್ದೆಮಾಡಿ ಏಳುವುದು. ಆಗಲೂ ಈ ನಾನು ಇತ್ತು: ಏಕೆಂದರೆ 'ನಾನು ಚೆನ್ನಾಗಿ ನಿದ್ದೆಮಾಡಿದೆ: ಆನಂದವಾಗಿತ್ತು' ಎನ್ನುತ್ತೇವೆ. ಆಗ ಆ ನಾನು ಹೆಸರು ಪ್ರಾಜ್ಞ. ಈ ಮೂರು ಹೆಸರಿನ ನಾನು ನಾವು ಬಲ್ಲೆವು. ಆದರೆ ಇವರಲ್ಲಿ ಯಾರು ಮೊದಲು? ಯಾವ ಅವಸ್ಥೆ ಮೊದಲು?

ಆಚಾರ್ಯರು "ಸುಷುಪ್ತಿಯೇ ಸ್ವಪ್ನಪ್ರಬೋಧಗಳ ಬೀಜ†" ಎಂದರು. ನಮಗೆ ಅದನ್ನು ನಂಬುವುದು ಸಾಧ್ಯವೇನು? ಇಲ್ಲಿ ಬರುತ್ತದೆ ವಾಕ್ಯಾರ್ಥಜ್ಞಾನದ ಪ್ರಯೋಜನ. ಈಗ ನಾವು ಜಾಗ್ರತ್ತನ್ನೇ ಸತ್ಯ ಎಂದು

---

* ಉಪದೇಶಸಾಹಸ್ರಿ—ಪ್ರಕರಣ ೧೭. ಶ್ಲೋ. ೨೫ ಮುಂದಕ್ಕೆ ನೋಡಿ.

† ಸುಷುಪ್ತಾಖ್ಯಂ ತಮೋಜ್ಞಾನಂ ಬೀಜಂ ಸ್ವಪ್ನಪ್ರಬೋಧಯೋಃ ।
ಉ. ಸಾ. ಪ್ರ. ೧೭. ಶ್ಲೋ. ೨೬.

ನಂಬಿದ್ದೇವೆ. ಜಾಗ್ರತ್ತಿನಲ್ಲಿ ಜ್ಞಾನ ಖಂಡ ಖಂಡವಾಗಿ ದೊರೆಯುವುದು ಎಂಬುದನ್ನು ನಾವು ಮನಗಂಡಿದ್ದೇವೇನು? ಜಾಗ್ರತ್ಪ್ರಪಂಚವೆಲ್ಲಪೂ ಬಹಿರಿಂದ್ರಿಯಗಳದು ಎಂಬುದನ್ನು ಬಲ್ಲವೇನು? ಇದು ನಿಜವಾದರೇನು ಗತಿ? ಹಾಗೆಯೇ ಕನಸಿನ ಅನುಭವ ನೋಡಿ. ಅಲ್ಲಿ ಬರಿಯ ಜ್ಞಾನೇಂದ್ರಿಯ ವ್ಯವಹಾರ. ನಿದ್ದೆಯಲ್ಲಿ ಕರ್ಮೇಂದ್ರಿಯ ಜ್ಞಾನೇಂದ್ರಿಯ ಎರಡೂ ಇಲ್ಲ. ಆದರೂ ನಾನು ಇದೆ. ಆ ನಾನು ತಿಳಿಯುವುದೇ ಅದ್ವೈತದ ಗುರಿ. ಆ ನಾನು ಎನ್ನುವುದು ಒಂದು ಅನುಭವ ಅನಿರ್ವಚನೀಯವಾದರೂ ಸತ್ಯವಾದ ಅನುಭವ. ಅದು ಈಗ ನಮಗೆ ಸಣ್ಣದಾಗಿದೆ. ಅದು ದೊಡ್ಡದಾಗಬೇಕು.

ಸಣ್ಣದು ದೊಡ್ಡದಾಗಬೇಕು

ಹಿಂದೆ ಭಾವೋ ಭಾವಂ ನುದತಿ ರಾಗ ಬಂಧಸ್ಯ ಏವ ಎಂದು ಒಂದು ಮಾತು ಕಾಲಿದಾಸನಿಂದ ಹೇಳಲಾಗಿತ್ತು. ಅದನ್ನು ತೆಗೆದುಕೊಳ್ಳಿ. ಅದನ್ನೇ ನದಿಗೆ ಹೋಲಿಸಿ. ನಮ್ಮ ಮನೆಯ ಹಿಂದಿನ ಜೌಗು, ಅಲ್ಲಿ ಇಲ್ಲಿ ಇದ್ದುದುದು ಎಲ್ಲಾ ಸೇರಿ ಮುಂದೆ ಹೋಯಿತು. ಅದು ಹಳ್ಳವಾಗಿ ಹರಿದು ನದಿಗೆ ಹೋಗಿ ಸೇರಿತು. ಆಗ ಅದು ಜೌಗಲ್ಲ: ನದಿ. ಅದು ಮುಂದೆ ಮುಂದೆ ಹೋಗಿ ಕೊನೆಗೆ ನದಿ ಸಮುದ್ರವನ್ನು ಸೇರಿತು. ಅದನ್ನು ಆಗ ಯಾರೂ ನದಿಯೆನ್ನಲಿಲ್ಲ: ಸಮುದ್ರ ಎಂದರು. ಆಗ ನದಿಯೇನಾಯಿತು? ಸಮುದ್ರವಾಯಿತು. ಚಿಕ್ಕದು ದೊಡ್ಡದರಲ್ಲಿ ಸೇರಿತು. ದೊಡ್ಡದಾಯಿತು. ಹಾಗೆ ನಮ್ಮ ಅನುಭವದ ಮೂಟೆಯಾದ 'ನಾನು' ಅರಳುತ್ತಾ ಬರುತ್ತದೆ. ಅರಳಿ, ಅರಳಿ, ಕೊನೆಗೆ ವಿಶ್ವವ್ಯಾಪಿಯಾಯಿತು. ಅಲ್ಲಿ ಹರಿಯುವುದು ತಪ್ಪಿ ನಿಂತಿತು. ಹಾಗೆ ಅನುಭವ ಇಲ್ಲಿ ವ್ಯವಹಾರಾತ್ಮಕವಾಗಿ, ತ್ರಿಪುಟೀರೂಪವಾಗಿ ಕಾಣಿಸಿಕೊಳ್ಳುತ್ತಿದ್ದುದು ವ್ಯವಹಾರವಿಲ್ಲದೆ, ತ್ರಿಪುಟೀ ಇಲ್ಲದೆ, ಶುದ್ಧ ಅನುಭವ ಮಾತ್ರವಾಗಿ ನಿಂತಿತು. ಹಾಗೆಯೇ, 'ನಾನು' ವ್ಯವಹಾರದಲ್ಲಿದ್ದಾಗ ತ್ರಿಪುಟೀ ಬೆರೆತಿದ್ದಾಗ, ಅದು ಅಹಂಕಾರ, ಅದು ತಪ್ಪಿ, ಕೇವಲ-ಅನುಭವವಾಗಿ ನಿಂತಾಗ- ಆ 'ನಾನೇ' ಸಾಕ್ಷಿ-ಅವಸ್ಥಾತ್ರಯ ಸಾಕ್ಷಿ-ಅವನು ನಿಜ: ಸಹಜ. ಅವಸ್ಥೆಗಳಲ್ಲಿ ತಿರುಗುತ್ತಿರುವ 'ನಾನು' ಅಸಹಜ: ಅದರಿಂದ ಸುಳ್ಳು. ಈ ಮಾತು ಒಪ್ಪುವುದಕ್ಕೂ ನಮಗೆ ಪಿಂಡಗ್ರಹ ನಿವೃತ್ತಿಯಾಗಬೇಕು. ಪಿಂಡಗ್ರಹವೆಂದರೆ "ಬಾಹ್ಯಪದಾರ್ಥಗಳು ಉಂಟು: ನಾನು ಬೇರೆ: ಅವು ಬೇರೆ" ಎನ್ನುವುದು. ಇದೇ ಹೃದಯಗ್ರಂಥಿ ಇದು ಇರುವವರೆಗೆ ಸಂಶಯ ತಪ್ಪಿದ್ದಲ್ಲ. ಕರ್ಮ ಬಿಟ್ಟಿದ್ದಲ್ಲ. ಭೇದ ಅಳಿಯುವುದಿಲ್ಲ.

ಆಗಲಿ, ಹೃದಯಗ್ರಂಥಿ ಇದ್ದರೆ ನಷ್ಟವೇನು? ಎಂದರೆ ಅದಕ್ಕೆ ಉತ್ತರವನ್ನು ಆಗಲೇ ಹೇಳಿದೆ. ಆದರೂ ಇನ್ನೂ ಒಮ್ಮೆ ಹೇಳೋಣ. ಈ ದೇಹ ಎನ್ನುವುದು, ನಾನು ಎನ್ನಿಸಿಕೊಳ್ಳುವ ಈ ಘಟ, ಈ ಪಿಂಡ, ಮಡಕೆಯ ಹಾಗೆ ಒಂದೇ ಒಂದಲ್ಲ. ಐದು ಚೀಲಗಳ ಒಂದು ಗುಂಪು. ಅದರಲ್ಲಿ ಹೊರಗಿನದು ಅನ್ನಮಯ ಕೋಶ. ಇದೇ ರಕ್ತ ಮಾಂಸ ಅಸ್ಥಿ ಮಜ್ಜಾ ಮೊದಲಾದವುಗಳ ಗುಂಪು. ಇದು ಜಡ. ಹಿಗ್ಗಬೇಕು: ಇಲ್ಲದಿದ್ದರೆ ಕುಗ್ಗಬೇಕು. ಅಂತೂ ಗಳಿಗೆಗಳಿಗೆಗೂ ಬದಲಾಗುತ್ತಿರಬೇಕು. ಇದರೊಳಗೆ ಇನ್ನು ನಾಲ್ಕು ಕೋಶಗಳಿವೆ. ಪ್ರಾಣಮಯ, ಮನೋಮಯ, ವಿಜ್ಞಾನಮಯ ಎಂದು ತಿನ್ನುವುದು, ಕುಡಿಯುವುದು, ನುಡಿಯುವುದು, ನಡೆಯುವುದು ಮೊದಲಾಗಿ ಸರ್ವ ಕರ್ಮಗಳನ್ನೂ ಮಾಡಿಸುವುದು: ಉಸಿರಾಡಿಸುವುದು ಇದು. ಪ್ರಾಣವು ಐದು ಪಾಲಾಗಿ ದೇಹವನ್ನು ಹಿಡಿದು ಆಡಿಸುತ್ತದೆ. ಇದರ ಅಣ್ಣ ತಮ್ಮ- ಏಕೋದರ ಎನ್ನಿ - ಮನೋಮಯ ಕೋಶ. ಅದರ ಆಚೆ ವಿಜ್ಞಾನಮಯ ಕೋಶ-ಅದರಪ್ಪ ಆನಂದಮಯ ಕೋಶ. ಈ ಐದು ಕೋಶಗಳನ್ನೂ ದಾಟಬೇಕು: ಕಳೆಯಬೇಕು. ಅದುವರೆಗೆ ಹೃದಯ ಗ್ರಂಥಿ ಅಳಿಯಲಿಲ್ಲ. ಹೃದಯ ಗ್ರಂಥಿಯೇ ಅಜ್ಞಾನ. ಅವಿದ್ಯೆ. ಕಾಮ- ಮೊದಲಾದವೆಲ್ಲ. ಇದನ್ನು ಅಳಿಸಿದರೆ, ಈ ಐದೂ ಕಳೆದರೆ- ಆತ್ಮನು ತಾನೇ ತಾನಾಗಿ ಬೆಳಗುವನು. *

---

* ಪಂಚಕೋಶಗಳ ವಿಚಾರವಾಗಿ ವಿವೇಕಚೂಡಾಮಣಿಯಲ್ಲಿ ೧೪೯ ರಿಂದ ಮುಂದೆ ನೋಡಿ.

ಪಂಚನಾಮಪಿ ಕೋಶನಾಮಪವಾದೇ ವಿಭಾತ್ಯಯಂ ಶುದ್ಧಃ।
ನಿತ್ಯಾನಂದೈಕರಸಃ ಪ್ರತ್ಯಗ್ರೂಪಃ ಪರಂಸ್ವಯಂ ಜ್ಯೋತಿಃ -
ವಿ. ಚೂ. ೧೫೦.

(ಮುಂದುವರಿಯುವುದು)

ಸಂಸ್ಕೃತಿ ಪ್ರಸಾರ

ಶ್ರೀ ಸಿ. ಕೆ. ನಾಗರಾಜರಾಯರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ನಮಗೂ ಪಾಶ್ಚಿಮಾತ್ಯರಿಗೂ ಇರುವ ಮುಖ್ಯ ವ್ಯತ್ಯಾಸ ಇಷ್ಟು. ಅವರ ಮನಸ್ಸು ಕೇವಲ ನಾಗರೀಕತೆಯ ಕಡೆ ಕೇಂದ್ರೀಕೃತವಾಗಿದೆ. ನಮ್ಮ ಮನಸ್ಸು ಸಂಸ್ಕೃತಿಯ ಬೆಂಬಲದಲ್ಲಿ ಬಲಗೊಂಡಿದೆ, ಸಾಮಾಜಿಕ ಜೀವನ ಸುಖಮಯವೂ ನಿರ್ಭಯವೂ ಆಗಿರಲೆಂದು ಸರ್ಕಾರದ ಕಾನೂನುಗಳು. ಆ ಕಾನೂನುಗಳ ಭಯದಿಂದ ಜನರ ನಡವಳಿಕೆ ಸಾಮಾಜಿಕ ಜೀವನಕ್ಕೆ ಸಹಕಾರಿಯಾದಂತೆ ಕಂಡುಬರಬಹುದು. ಬಾಳು ಹಸನಾಗಲು, ಸಾಮಾಜಿಕ ಜೀವನ ಸುಖಮಯವಾಗಿರಲು ಈ ಸಂಸ್ಕೃತಿಯ ಸುಪ್ರಭಾವದ ಮಧುರವಾದ ಪ್ರೇರಣೆ ಕಾನೂನು ಕಟ್ಟಳೆಗಳಿಗಿಂತ ಹೆಚ್ಚು ಸಹಾಯಕಾರಿ. ಇತರರು ನಮ್ಮ ಮೇಲೆ ಹೇರಿಸುವ ಕಟ್ಟು ಕಟ್ಟಳೆಗಳ ಆಚರಣೆಗಿಂತ, ತನಗೆ ತಾನೆ, ಈ ಸಂಸ್ಕೃತಿಯ ಪ್ರಭಾವದಿಂದ ಹಾಕಿಕೊಂಡ ಉನ್ನತಮಟ್ಟದ ಕಟ್ಟು ಕಟ್ಟಳೆಯ ಆಚರಣೆ ಸುಲಭವಷ್ಟೇ ಅಲ್ಲ, ಹೆಚ್ಚು ಪ್ರಯೋಜನಕಾರಿಯೂ ಹೌದು. ಈ ದೃಷ್ಟಿಯಿಂದ ಸಹ ಸಂಸ್ಕೃತಿಯ ಪ್ರಸಾರದಿಂದ ಸ್ವಂತಕ್ಕೂ, ಸಾಮಾಜಿಕ ಜೀವನಕ್ಕೂ ಮತ್ತು ದೇಶಕ್ಕೂ ಒಳ್ಳೆಯದು.

ನಾನು ಪ್ರಾರಂಭದಲ್ಲಿಯೇ ತಿಳಿಸಿದೆ, ಸಂಸ್ಕೃತಿಯು ಸಾಹಿತ್ಯ, ಕಲೆಯನ್ನು ಮೈಗೂಡಿಸಿಕೊಂಡುಬಂದಿದೆಯೆಂದು. ಜ್ಞಾನಪ್ರಸಾರಕ್ಕೆ ಸಾಹಿತ್ಯ ಆವಶ್ಯಕವಾದ ವಸ್ತು. ಸಾಹಿತ್ಯದ ಅಭ್ಯಾಸದಿಂದ ಜ್ಞಾನವೃದ್ಧಿಯಾಗುತ್ತದೆ. ಆದರೆ ಆ ಜ್ಞಾನದ ಪ್ರಸಾರ ಸಾಮೂಹಿಕವಾಗಿ, ಹೆಚ್ಚು ಪ್ರಯೋಜನಕಾರಿಯಾಗಿ ಆಗಬೇಕಾದರೆ ಕಲೆಯೇ ಸಾಧನ ಮಾರ್ಗ. ಏಕೆಂದರೆ ಕಲೆಗೆ ಎರಡು ಮುಖ್ಯ ಗುಣಗಳಿವೆ. ಒಂದು ಆಕರ್ಷಣ; ಇನ್ನೊಂದು ಉಲ್ಲಾಸ. ಈ ಎರಡು ಸುಖದಾಯಿ ಸಮ್ಮೋಹನ ಅಸ್ತ್ರಗಳ ಪ್ರಭಾವದಲ್ಲಿ ಹದಗೊಂಡ, ಒಲವುಗೊಂಡ ಹೃದಯದಲ್ಲಿ ಜ್ಞಾನಬೀಜದ ಬಿತ್ತನೆ ಬಹಳ ಸುಲಭ. ನನ್ನ ಒಂದು ಸಣ್ಣ ಅನುಭವವನ್ನು ಇಲ್ಲಿ ತಿಳಿಸುವುದು ಅಪ್ರಕೃತವಾಗಲಾರದು.

ಎಂದೂ ವಿಮಾನ ಸಂಚಾರ ಮಾಡದವರಿಗೆ ಮೊದಲ ಬಾರಿ ಭಯವಾಗುತ್ತದೆ. ಏಕೆಂದರೆ ಅವರ ಮನಸ್ಸಿನಲ್ಲಿ ವಿಮಾನ ಬಿದ್ದರೆ ಏನು ಗತಿ ಎಂಬುದೇ ಕೊರೆಯುತ್ತಿರುತ್ತದೆ. ಈ ಭಯದಲ್ಲಿದ್ದವನಿಗೆ, ವಿಮಾನ ಬಿದ್ದು ಅದರ ಪರಿಣಾಮವಾಗಿ ಒಳಗಿದ್ದವರೆಲ್ಲ ಸುಟ್ಟು ಭಸ್ಮವಾದ ಕತೆಯನ್ನು ವರ್ಣಿಸಿ ವಿಮಾನ ಏರು ಎಂದು, ಅದೂ ಮಧ್ಯರಾತ್ರಿಯ ಕಗ್ಗತ್ತಲೆಯಲ್ಲಿ ಎಂದರೆ ಅವನ ಸ್ಥಿತಿ ಏನಾಗಬೇಡ? ಅಂತಹ ಸ್ಥಿತಿಯಲ್ಲಿ ನನ್ನ ಮೊದಲನೆಯ ಆಕಾಶಯಾನ. ಅಮಾವಾಸ್ಯೆಯ ಸಮೀಪದ ದಿನದ ಕಗ್ಗತ್ತಲು ಪ್ರಪಂಚವನ್ನೆಲ್ಲಾ ಅವರಿಸಿದೆ. ವಿಮಾನ ಏರಲು ಕಾಲೇ ಏಳದು. ಎದೆ ಧಡಧಡ ಎಂದು ಹೊಡೆದುಕೊಳ್ಳುತ್ತಿದೆ. ಏರದೆ ವಿಧಿಯಿಲ್ಲ. ಅಂತೂ ಏರಿ ಆಸನದಲ್ಲಿ ಕುಳಿತೆ. ವಿಮಾನ ಚಾಲು ಆಯಿತು. ಕಿವಿ ತೂತು ಬಿದ್ದುಹೋಗುವಂತಹ ಆ ಯಂತ್ರದ ಶಬ್ದ ನನ್ನ ಹೃದಯ ಹೊಡೆದುಕೊಳ್ಳುತ್ತಿದ್ದ ಶಬ್ದಕ್ಕೆ ಯಾವ ಸಾಟಿಯೂ ಅಲ್ಲ. ವಿಮಾನ ಹೊರಟಿತು. ಏರಿತು, ಏರಿತು ಭಯ ಇತ್ತ ಏರಿತು. ಕಣ್ಣು ಮುಚ್ಚಿ ಕುಳಿತೆ. ಭಯದಲ್ಲಿ ನಿದ್ದೆಯೆಲ್ಲಿಯದು? ಹೊದ್ದಿಕೆ ಮೊಣಕಾಲವರೆಗೆ ಇತ್ತು. ಈ ಭಯದಲ್ಲಿಯೂ ನಡುವೊಮ್ಮೆ ಚಪಲ. ಹೊರಗೆ ಹೇಗೆ ಕಾಣಿಸುತ್ತದೆಯೆಂಬುದನ್ನು ತಿಳಿಯಬೇಕೆಂಬ ಕುತೂಹಲ. ಆರೆಂಟು ಸಾವಿರ ಅಡಿ ಮೇಲಕ್ಕೆ ಹೋಗಿರಬೇಕು. ಹಾಗೆಯೇ ಮೆಲ್ಲಗೆ ಪಕ್ಕದ ಗಾಜಿನಿಂದ ನೋಡಿದೆ. ಅಬ್ಬ! ಎಂತಹ ಅದ್ಭುತ ರಮ್ಯ ದೃಶ್ಯ. ಆ ಕಾರ್ಗತ್ತಲೆಯಲ್ಲಿ ವಿಶಾಲವಾಗಿ ಹರಡಿದ ಭೂಮಂಡಲದಲ್ಲಿನ ಪಟ್ಟಣ, ಊರು, ಹಳ್ಳಿ, ಕೇರಿಗಳ ದೀಪಮಾಲೆಗಳ ತಂಡ ಒಂದು ಕಡೆ. ಇನ್ನೊಂದು ಕಡೆ ಆ ಭೂಮಂಡಲವನ್ನು ದಿಗಂತದಿಂದ ದಿಗಂತದ ವರೆಗೆ ವರ್ತುಲಾಕಾರವಾಗಿ ಆಚ್ಛಾದಿತವಾದ, ನಕ್ಷತ್ರಕೋಟಿಯಿಂದ ತುಂಬ ರಾರಾಜಿಸುತ್ತಿರುವ ನಭೋಮಂಡಲ. ಆಗ ನನಗೆ ಭಾಸವಾಯಿತು. ಈ ಬ್ರಹ್ಮಾಂಡವೇ ಒಂದು ನಕ್ಷತ್ರ ಮಂಡಲವಾಗಿ ಅದರ ಮಧ್ಯಪ್ರದೇಶದಲ್ಲಿ ಈ ವಿಮಾನವೆಂಬ ಉಯ್ಯಾಲೆಯಲ್ಲಿ ತೂಗಾಡುತ್ತಿದ್ದೇನೋ ಎಂದು. ಆಗ ಆ ವಾಯುಮಂಡಲದಲ್ಲಿ ತೇಲುತ್ತಿದ್ದ ನನಗೆ ನಿಜವಾಗಿ ರೋಮಾಂಚವಾಯಿತು. ಆ ದೃಶ್ಯದ ವೈಖರಿ, ವೈಚಿತ್ರ್ಯ ನನ್ನನ್ನು ಪ್ರಶಾಂತನನ್ನಾಗಿ ಮಾಡಿತು. ಯಾವಾಗ ಭಯ ಹೋಗಿ ಪ್ರಶಾಂತತೆ ಮೂಡಿತೋ ಆಗ

ಆ ತೇಲುಯ್ಯಾಲೆಯಲ್ಲಿ, ವಿಮಾನ ಶಬ್ದ ಇಡೀ ಜಗತ್ತಿಗೆ ಲಾಲಿಪದವೇನೋ ಅನ್ನಿಸಿರಬೇಕು. ನಿದ್ದೆ ಯಾವಾಗ ಬಂತೋ ಗೊತ್ತಿಲ್ಲ. ಎಚ್ಚರವಾದಾಗ ಅರುಣೋದಯದ ಚಿಹ್ನೆಗಳು ಕಂಡುಬರುತ್ತಿವೆ. ನಕ್ಷತ್ರಗಳಿಲ್ಲ. ಊರು ಕೇರಿಗಳ ದೀಪಮಾಲೆ ಇಲ್ಲ. ಎಲ್ಲಿ? ಎಲ್ಲಿ? ಆಹಿಂದಿನ ರಾತ್ರಿಯ ಆ ರುದ್ರರಮಣೀಯ ದೃಶ್ಯ. ಕಣ್ಣು ಮಂಜಾದಂತೆ ತೋರಿತು. ಉಜ್ಜಿಕೊಂಡು ಮತ್ತೆ ನೋಡಿದೆ. ಆಹಾ! ಇದೇನು ಈ ಸೊಗಸು ಎನ್ನಿಸಿತು. ಹತ್ತಿರದ ಗಾಜಿನಲ್ಲಿ ನೋಡಿದೆ. ದೂರದ ಗಾಜಿನಲ್ಲಿ ಇನ್ನೊಂದು ಪಕ್ಕದಲ್ಲಿ ನೋಡಿದೆ· ದಿಗ್ದಿಗಂತವೆಲ್ಲ ಒಂದು ಸುಂದರವಾದ ಕಾಮನಬಿಲ್ಲಿನ ಸುರಂಗದೊಳಗೆ ನಾವು ಸುಯ್ ಗಾಳಿಯಂತೆ ತೇಲಿಹೋಗುತ್ತಿದ್ದೇವೆ ಎಂಬಂತೆ ಭಾಸವಾಯಿತು. ಎಂತಹ ಸೃಷ್ಟಿ ವೈಚಿತ್ರ್ಯ. ನೋಡುವುದಕ್ಕೆ, ಆನಂದಪಡುವುದಕ್ಕೆ ಕಣ್ಣಿರಬೇಕು ಅಷ್ಟೆ! ಎಷ್ಟು ಹೊತ್ತು ಈ ಬಣ್ಣ ಬಣ್ಣಗಳ ಆಟ? ನೋಡುತ್ತಿದ್ದ ಹಾಗೆಯೇ ಸೂರ್ಯದರ್ಶನ. ಬೆಳಕಿನ ಕಿರಣಗಳ ಪ್ರಸರಣ. ಅಖಂಡ ಭೂಮಂಡಲವೆಲ್ಲ ಬೆಳಕು ಕಂಡಿತು. ಈ ಅನುಭವವನ್ನು ನೋಡಿದರೆ ಗಹನವಾದ ವಿಚಾರಗಳು ಅಡಗಿರುವುದು ತಿಳಿದು ಬರುತ್ತದೆ. ಮತ್ತೊಮ್ಮೆ ಇಂತಹ ದೃಶ್ಯಗಳನ್ನು ನೋಡುವೆನೋ ಇಲ್ಲವೋ, ಅಂದಿನ ಅನುಭವ ಮಾತ್ರ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

ರಾತ್ರಿಯ ಅಂಧಕಾರ, ಮನಸ್ಸಿನಲ್ಲಿ ಹುಟ್ಟಿದ ಭಯ, ನಂತರ ಬಂದ ಪ್ರಶಾಂತತೆ ಇಂದಿನವರೆಗೆ ನಾವು ಅನುಭವಿಸಿದ ದಾಸ್ಯದ ಅಂಧಕಾರ, ತನ್ಮೂಲಕ ಉತ್ಪತ್ತಿಯಾದ ಹೃದಯ ದೌರ್ಬಲ್ಯ, ನಿದ್ರಾವಸ್ಥೆಯಲ್ಲಿ ನಾವು ಕಳೆದ ಸ್ವಾತಂತ್ರ್ಯದ ಐದು ವರ್ಷಗಳ ಸ್ಥಿತಿಗಳನ್ನು ಮನಸ್ಸಿಗೆ ತರುತ್ತವೆ. ಕಾಮನಬಿಲ್ಲಿನ ಬಣ್ಣ ಬಣ್ಣಗಳ ಆಟ, ಸೂರ್ಯದೇವನ ಕಿರಣಗಳ ಪ್ರಸರಣ, ತತ್ಪರಿಣಾಮವಾಗಿ ಹರಡಿದ ಬೆಳಕು ಇವು ನಮ್ಮ ಇಂದಿನ ಸಂಸ್ಕೃತಿ ಪ್ರಾರಂಭೋತ್ಸವದ ಸಂತೋಷವೋ ಎಂಬಂತೆ ನನ್ನ ಮನಸ್ಸಿಗೆ ಭಾಸವಾಗುತ್ತಿದೆ. ಈ ಮೊದಲೇ ನಾನು ತಮ್ಮಲ್ಲಿ ವಿಜ್ಞಾಪಿಸಿಕೊಂಡಂತೆ ಸಂಸ್ಕೃತಿ ಪ್ರಸಾರಕ್ಕೆ ಪ್ರಧಾನ ಸಾಧನೆ ಕಲೆಯೆಂದು.

ಹೇಗೆ ಭಗವಾನ್ ಸೂರ್ಯದೇವ ಘನೀಭೂತವಾದ ಮಂಜನ್ನು—ಅಂಧಕಾರದ ತಮಸ್ಸನ್ನು—ಭೇದಿಸಿಕೊಂಡು ತನ್ನ ಬೆಳಕಿನ ಕಿರಣಗಳನ್ನು ಜಗತ್ತಿಗೆ ಬೀರುವಾಗ ಕಾಮನಬಿಲ್ಲಿನ ಲೀಲಾವಿಲಾಸ, ಬಣ್ಣಬಣ್ಣಗಳ ಆಟ ಹೂಡಿದನೋ ಹಾಗೆಯೇ ಕಲೆಗಾರನೂ ಸಹ ತನ್ನ ಕಲೆಯ ಸಾಧನದಿಂದ ಜನಗಳನ್ನು ಆಕರ್ಷಿಸಿ ಅವರನ್ನು ಉಲ್ಲಾಸಗೊಳಿಸಿ ಜೊತೆಗೆ ತಿಳಿವನ್ನೂ, ಜ್ಞಾನವನ್ನೂ, ವಿವೇಚನಾಶಕ್ತಿಯನ್ನೂ, ಸಹೃದಯತೆಯನ್ನೂ ಹೆಚ್ಚಿಸಲು ಸಾಧಕನಾಗುತ್ತಾನೆ.

ಇಂತಹ ಉತ್ಕೃಷ್ಟವಾದ ಕೆಲಸವನ್ನು ಮಾಡುವ ನಾಡಶಿಲ್ಪಿಗಳು ಈ ಸಾಹಿತಿಗಳು, ಕಲೆಗಾರರು. ಈ ನಾಡಶಿಲ್ಪಿಗಳಿಗೆ ಪ್ರೋತ್ಸಾಹವಿಲ್ಲದೆ ಸಂಸ್ಕೃತಿ ಪ್ರಸಾರವೇ ಇಲ್ಲ. ಅಂದಮೇಲೆ ಈ ಸಂಸ್ಕೃತಿ ಪ್ರಸಾರ ಯೋಜನೆಯಲ್ಲಿ ಜನತೆಯನ್ನು ಉನ್ನತಮಟ್ಟಕ್ಕೆ ಒಯ್ಯುವುದರ ಜೊತೆಗೆ ಸಮಸಮವಾಗಿ ನಾಡಿನ ಸಾಹಿತಿಗಳ, ಕಲೆಗಾರರ ಪ್ರೋತ್ಸಾಹವು ಹೆಣೆದುಕೊಂಡುಬಂದಿರುವುದು ಸಹಜವೇ ಆಗಿದೆ. ಆದರಿಂದ ಈ ದಿವಸ ನಮಗೆ ಶುಭದಿವಸ.

ಹೊಸಬೆಳಕನ್ನು ನಮ್ಮ ಜೀವನದ ಮೇಲೆ ಚೆಲ್ಲಿ, ಜೀವನ ಹಸನಾಗಿ, ನಾವೆಲ್ಲ ಆದರ್ಶ ಜನಾಂಗವಾಗಿ ಬಾಳಬಹುದೆಂಬ ಆಶಾಕಿರಣ ಮೂಡಿಸುವ ಈ ಉತ್ಸವದಲ್ಲಿ ಭಾಗವಹಿಸುವುದಕ್ಕೆ ಅವಕಾಶ ದೊರೆತುದಕ್ಕೆ ನನಗುಂಟಾಗಿರುವ ಆನಂದವೆಷ್ಟೆಂದು ನಾನು ವ್ಯಕ್ತಪಡಿಸಲಾರದವನಾಗಿದ್ದೇನೆ. ಮೈಸೂರು ಸರ್ಕಾರದವರು ಇಂತಹ ಮಹತ್ಕಾರ್ಯವನ್ನು ಆರಂಭಿಸಿ ಜನಾನುರಾಗವನ್ನು ಸಂಪಾದಿಸುವುದರಲ್ಲಿ ಸಂಶಯವಿಲ್ಲ. ಅದರಲ್ಲೂ, ಇದೇ ಸಂಸ್ಕೃತಿ ಪ್ರಸಾರಕ್ಕೇ ಕಂಕಣ ಕಟ್ಟಿ, ಕನ್ನಡ ಬಾಂಧವರಲ್ಲೆಲ್ಲ ಒಂದುತನವನ್ನು ಕಾಣಲು, ಅವರ ಸಾಹಿತ್ಯಾಭಿರುಚಿಯನ್ನೂ, ಕಲಾಭಿಮಾನವನ್ನೂ ಹೆಚ್ಚಿಸಲು ಈಗ ಮುವ್ವತ್ತೇಳು ವರ್ಷಗಳಿಂದಲೂ ಸತತವಾಗಿ ದುಡಿಯುತ್ತ ಬಂದಿರುವ "ಕನ್ನಡ ಸಾಹಿತ್ಯ ಪರಿಷತ್ತಿನ" ಸಹಕಾರವನ್ನು ಕೋರಿ ಈ ಕಾರ್ಯಕ್ರಮ ಪ್ರಾರಂಭ ಮಾಡಿರುವುದು, ಸಂಸ್ಥೆಯು ಇದುವರೆಗೆ ನಡಸಿಕೊಂಡು ಬಂದಿರುವ ಕೆಲಸಕ್ಕೆ ಮೆಚ್ಚಿಕೆಯ ಗೌರವ ಸಲ್ಲಿಸಿದಂತೆ ಎಂದು ನಾನು ಭಾವಿಸುತ್ತೇನೆ. ಆ ಹಿರಿಯ ಸಂಸ್ಥೆಯ ಗೌರವ ಕಾರ್ಯದರ್ಶಿಯಾದ ನನಗೆ ಈ ಸಮಾರಂಭದಲ್ಲಿ ಭಾಗವಹಿಸಲು ಅವಕಾಶ ದೊರೆತುದು ನನಗೂ ಒಂದು ಗೌರವವೆಂದೇ ಭಾವಿಸುತ್ತೇನೆ. ಇಂತಹ ಶುಭ ಸಂದರ್ಭವನ್ನು ಒದಗಿಸಿಕೊಟ್ಟ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರಿಗೂ, ಅವರ ಮಂತ್ರಿ ಸಂಪುಟಕ್ಕೂ, ಇಲ್ಲಿನ ಸುವ್ಯವಸ್ಥಿತ ಏರ್ಪಾಟುಗಳಿಗೆ ಕಾರಣರಾದ

ಅಸಗನ ಕನ್ನಡ ಕುಮಾರ ಸಂಭವ

ಲೇಖಾಂಕ :

ಶ್ರೀ ವೆಂ. ಬಿ. ಲೋಕಾಪೂರ, ಬಿ.ಎ.,ಬಿ.ಟಿ,ಡಿ.ಬಿ.ಇ, ಹುಬ್ಬಳ್ಳಿ

ಅಸಗನು ಕಾಲಿದಾಸನ ಕುಮಾರ ಸಂಭವವೆಂಬ ಸಂಸ್ಕೃತ ಕಾವ್ಯವನ್ನು ಕನ್ನಡದಲ್ಲಿ ಅನುವಾದ ಮಾಡಿರ ಬಹುದೆಂದು ಹಿಂದೆ ನಾನು ಹೇಳಿದ್ದೆನು. (ಕನ್ನಡ ನುಡಿ, ಡಿಸೆಂಬರ ೧೯೫೨ ಪು. ೩೭೨) ಆದರೆ ನಾಗ ವರ್ಮನ ಕಾವ್ಯವಲೋಕನದಲ್ಲಿ ಅಸಗನ ಕುಮಾರ ಸಂಭವದಲ್ಲಿರಬಹುದಾದ ಕೆಲವು ಪದ್ಯಗಳನ್ನೂ ಕಾಲಿ ದಾಸನ ಕುಮಾರ ಸಂಭವದಲ್ಲಿ ಆ ಆ ಸಂದರ್ಭ ದಲ್ಲಿಯ ಪದ್ಯಗಳನ್ನೂ ನೋಡಲಾಗಿ ಅಸಗನು ಕಾಲಿ ದಾಸನ ಕುಮಾರ ಸಂಭವದ ಅನುವಾದವನ್ನು ಮಾಡದೆ ಆ ಕಾವ್ಯದ ಕಥೆಯ ಆಧಾರದಿಂದ ಒಂದು ಸ್ವತಂತ್ರ ವಾದ ಕಾವ್ಯವನ್ನೇ ರಚಿಸಿರಬೇಕೆಂದು ತೋರುತ್ತದೆ.

ಇನ್ನು ಅಸಗನ ಕುಮಾರ ಸಂಭವದಲ್ಲಿರ ಬಹುದಾದ ಕೆಲವು ಪದ್ಯಗಳನ್ನು ಕೆಳಗೆ ಕಾಣಿಸಿ ಅವುಗಳ ಸಂದರ್ಭಗಳನ್ನಾದರೂ ವಿವೇಚಿಸಲಿರುವೆನು. ಈ ಎಲ್ಲ ಪದ್ಯಗಳನ್ನು ನಾನು ನಾಗವರ್ಮನ ಕಾವ್ಯಾವ ಲೋಕನದಿಂದ ಆರಿಸಿದ್ದೇನೆ ಕಾವ್ಯಾವಲೋಕನ ದಲ್ಲಿಯ ೮೦೪ ಮತ್ತು ೮೦೮ ಈ ಎರಡು ಪದ್ಯಗಳನ್ನು ತೋರಿಸಿ ನಾನು ಕೈಕೊಂಡ ವಿಷಯದಲ್ಲಿ ಮುಂದುವರೆ ಯುವದಕ್ಕಾಗಿ ಆಸ್ಪದವನ್ನುಂಟುಮಾಡಿದ್ದಕ್ಕಾಗಿ ನಾನು ಪ್ರೊ.ತೀ. ನಂ. ಶ್ರೀಕಂಠಯ್ಯ ಇವರಿಗೆ ಚಿರಋಣಿಯಾಗಿ ದ್ದೇನೆ.

ಜಗತ್ತಿಗೆ ಕಂಟಕನಾದ ತಾರಕಾಸುರನನ್ನು ಜಯಿ ಸಲು ದೇವತೆಗಳು ಅಸಮರ್ಥರಾಗಲು ಅವರೆಲ್ಲರು ಒತ್ತಟ್ಟಿಗೆ ಕುಳಿತು ವಿಚಾರಮಾಡಿ ಕುಮಾರ ಸ್ವಾಮಿಯ ಸಹಾಯವಿಲ್ಲದೆ ತಾರಕಾಸುರನ ಸಂಹಾರವಾಗದೆಂದು ನಿಶ್ಚೈಸುತ್ತಾರೆ. ಹಿಮಾಲಯದಲ್ಲಿ ತಪಸ್ಸಿನಲ್ಲಿ ಮಗ್ನ ನಾದ ಶಿವನನ್ನು ಪಾರ್ವತಿಯ ಕಡೆಗೆ ಒಲಿಸಲು ಕಾಮ ನನ್ನು ಕಳಿಸುವರು. ಆಗ ಕಾಮನು ವಸಂತಋತು ವನ್ನುಂಟುಮಾಡಿ ಪಾರ್ವತಿಯು ಶಿವನ ಸೇವೆಗೆ ಬಂದ ವೇಳೆಯನ್ನು ಸಾಧಿಸಿ ಆತನಮೇಲೆ ಹೂಬಾಣಗಳನ್ನು ಬಿಡುವನು. ಶಿವನ ಮನಸ್ಸು ಚಂಚಲವಾಗಿ ಪಾರ್ವತಿ ಯತ್ತ ನೋಡುವನು. ತನ್ನ ತಪಸ್ಸಿನ ಭಂಗಕ್ಕೆ ಕಾರಣರಾರೆಂದು ಸುತ್ತುಮುತ್ತು ನೋಡಲು ಕಾಮ ದೇವನು ಕಣ್ಣಿಗೆ ಬೀಳುವನು. ಸಿಟ್ಟಿನಿಂದ ತನ್ನ ಹಣೆಗಣ್ಣಿನಿಂದ ಕಾಮನನ್ನು ಸುಟ್ಟುಬಿಡುವನು. ಇದನ್ನು ನೋಡಿ ಪಾರ್ವತಿಗೆ ಕೆಡಕೆನಿಸುವದು. ಶಿವನನ್ನು ಒಲಿಸಿಕೊಳ್ಳಲು ತನ್ನ ರೂಪು ಸಮರ್ಥವಾಗ ಲಿಲ್ಲವೆಂದು ಬಗೆದು ಆತನನ್ನು ತಪಸ್ಸಿನಿಂದಲೇ ಒಲಿಸಿ ಕೊಳ್ಳುವೆನೆಂದು ನಿರ್ಧರಿಸುವಳು. ನಂತರ ತಾಯಿ ತಂದೆಗಳ ಅನುಮತಿಯಿಂದ ಯೋಗ್ಯವಾದ ಸ್ಥಳವನ್ನು ಆರಿಸಿಕೊಂಡು ತಪಸ್ಸಿಗಾಗಿ ಕುಳಿತುಕೊಳ್ಳುವಳು. ಆಕೆಯ ತಪಃಪ್ರಭಾವದಿಂದ ಕೆಲವು ಅದ್ಭುತ ಸಂಗತಿ ಗಳು ಜರುಗಿದವು. ಅವುಗಳನ್ನು ಕೆಳಗಿನ ಪದ್ಯದಲ್ಲಿ ಕೊಟ್ಟಿದೆ.

ಪಯುವುಲಿಗಳ್ ಮೊಲೆಯೂಡಿದುವಾ ಹರಿಣಂಗಳಂ.....
ನಯದೊಳೆ ನೋಡಿದುವಾನೆಗಳಂ ಹರಿಗಳ್ ನಿಜೋಜ್ವಲ ಕೇಸರಾ
ಳಿಯನಗಿಯುತ್ತಿರೆಯುಂ ಕುಟಿಲಾಹಿಗಳುಂ ನವಿಲ್ಗಳನೆತ್ತಮಾ
ಶ್ರಯಿಸಿದು ವಿಂತಿನಿತದ್ಭುತಮಾಯ್ತು ತಪೋಮಹತ್ವದಿನಾಕೆಯಾ ॥

ಕಾವ್ಯಾವಲೋಕನ ॥ ೮೨೬ ॥

ಪಾರ್ವತಿಯು ತಪಸ್ಸಿಗೆ ಕುಳಿತಾಗ್ಗೆ ಭಕ್ತಿಯನ್ನು ಪರೀಕ್ಷಿಸಬೇಕೆಂದು ಶಿವನು ವಟುವೇಷದಿಂದ ಬಂದು ಅವಳ ಗೆಳತಿಯರಿಂದ ಆತಿಥ್ಯ ಹೊಂದುವನು. ಪಾರ್ವತಿಯ ತಪಶ್ಚರ್ಯದ ಕಾರಣವನ್ನು ಕೇಳಿ

ಸಂಸ್ಕೃತಿ ಪ್ರಸಾರ

ಜಿಲ್ಲಾಧಿಕಾರಿಗಳು ಶ್ರೀ ಎಸ್. ದಾರಾಷಾ ಅವರಿಗೂ ಹಾಗು ಇದರ ಏರ್ಪಾಟಿನಲ್ಲಿ ಸಹಕರಿಸಿದ ಎಲ್ಲ ಮಹ ನೀಯರಿಗೂ ನನ್ನ ಪರವಾಗಿಯೂ, ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿಯೂ ವಂದನೆಗಳನ್ನು ಸಮರ್ಪಿ ಸುತ್ತಾ, ಈ ಕೆಲಸ ಸಾಂಗವಾಗಿ, ಸಂತತವಾಗಿ ನಡೆದು ನಮ್ಮ ಬಾಳುವೆ ಹಸನಾಗಲಿ, ನೀತಿಯುತವಾಗಿರಲಿ, ಸತ್ಯಮಯವಾಗಿರಲಿ, ಶಾಂತಿದಾಯಕವಾಗಿರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಸಿರಿಗನ್ನಡಂಗೆಲ್ಗೆ! ಬಾಳ್ಗೆ!

ಕೋಮಲವಾದ ಅವಳ ಶರೀರವು ಇಂಥ ಕಠೋರವಾದ ತಪಶ್ಚರ್ಯಕ್ಕೆ ಅಯೋಗ್ಯವಾದದ್ದೆಂದು ಕೆಳಗಿನ ಪದ್ಯದಲ್ಲಿ ಹೇಳುವನು.

ವ್ರತಕೆಂತಾಯ್ತೀಗಳಿಂತೀ ತನು ತನುಲತೆಯೀ ಮಾಗಿಯೆಂದೀ ಹಿಮಾನೀ
ಪತನಕ್ಕೆಂತಾರ್ತೆ ಮೈಯ್ಯಂ ವನಜವದನೆ ಕೇಳ್ ಗ್ರೀಷ್ಮದೊಳ್ ನಿಚ್ಚಮೆತ್ತಂ
ಸತತಟ್ಟುತ್ತಿರ್ಪ ಕಾಯ್ಪಿಂದುರಿವ ಬಿಸಿಲೊಳಾ ಮೇಘವಿಸ್ಫೂರ್ಜಿತಾರ್ಣಃ
ಪತಧಾರಾಭೀಕರಾಡಂಬರ ಜಳಸಮಯಂ ಬಂದೊಡೆಂ ತಳ್ಕದಿರ್ಪಯರ್

ಕಾವ್ಯಾವಲೋಕನ ॥ ೮೦೮ ॥

ಪಾರ್ವತಿಯ ಗೆಳತಿಯರು ಅವಳು ಶಿವನ ಸಲುವಾಗಿ ತಪಸ್ಸನ್ನು ಮಾಡುತ್ತಿದ್ದಾಳೆಂದು ಹೇಳುವರು. ಆಗ ಪಾರ್ವತಿಯ ಪ್ರೇಮವು ತನ್ನ ಮೇಲೆ ಎಷ್ಟರ ಮಟ್ಟಿಗೆ ಇದೆ ಎಂದು ನೋಡುವದಕ್ಕಾಗಿ ಶಿವನು ತನ್ನನ್ನೇ ಮೂದಲಿಸಲು ಕೆಳಗಿನಂತೆ ಪ್ರಾರಂಭಿಸುತ್ತಾನೆ

ಅಂತಂತೆನೆ ಪರಿಚಾರಿಕಿ
ಗಿಂತೆಂದಂ ಬ್ರಹ್ಮಚಾರಿ ಕಳೆಕಳೆ ಸಿತಗಂ ।
ಗಿಂತು ಕಿಡಿಸುವುದೆ ತಪಮನ
ದೆಂತುಂ ಗಿರಿಸುತೆಯ ಬಯಸಲಾತಂ ದೊರೆಯೇ ॥

ಕಾವ್ಯಾವಲೋಕನ ॥ ೯೨೫ ॥

ವಟುವೇಷದಿಂದ ಶಿವನು ಪಾರ್ವತಿಯನ್ನು ಪರೀಕ್ಷಿಸಿ ಅವಳ ಭಕ್ತಿಗೆಮೆಚ್ಚಿ ತನ್ನ ರೂಪವನ್ನು ಪ್ರಕಟಿಸಿ ಪಾರ್ವತಿಯ ಕೈಹಿಡಿಯುವನು. ಆಗ ಪಾರ್ವತಿಗೆ ಬಹಳ ಆನಂದವಾಗುವದು. ನಂತರ ಶಿವನು ಕೈಲಾಸಕ್ಕೆ ಹೋಗಿ ಸಪ್ತಋಷಿಗಳ ಮುಖಾಂತರ ತಾನು ಪಾರ್ವತಿಯನ್ನು ಮದುವೆಯಾಗುವೆನೆಂದು ಪರ್ವತರಾಜನಿಗೆ ತಿಳಿಸುವನು. ಆತನು ಆನಂದದಿಂದ ಪಾರ್ವತಿಯನ್ನು ಶಿವನಿಗೆ ಕೊಟ್ಟು ವಿವಾಹಮಾಡಲು ಒಪ್ಪುವನು. ಪಾರ್ವತೀ ಪರಮೇಶ್ವರರ ವಿವಾಹ ಅತ್ಯಂತ ಸಡಗರದಿಂದ ಜರಗುವದು. ಆ ವೇಳೆಯಲ್ಲಿ ಯಾರು ಏನೇನು ಮಾಡಿದರೆಂಬುದನ್ನು ಕೆಳಗಿನ ಪದ್ಯದಲ್ಲಿ ಕೊಟ್ಟಿದೆ.

ಆಡಿದನಿಂದ್ರ ನಿಂದ್ರಗಣಿತಾಗಣಮಟ್ಟಿಜೊಳೊಲ್ದು ಮಂಗಳಂ
ಬಾಡಿದುದಬ್ಜಜಂ ಪರಸಿ ಸೇಸೆಯ ನಿಕ್ಕಿದನದ್ರಿ ತಾನೆ ಮುಂ
ಡಾಡಿ ವಿಭೂತಿಯಿನೊಸಗೆ ಮಾಡಿದನಂಗಜನಂಗ ಲಕ್ಷ್ಮಿಯೊಳ್
ಕೂಡಿದನೆಂದೊಡೇವೊಗಟ್ಟುದೋ ಭವಶೈಲಭವಾ ವಿವಾಹಮಂ॥

ಕಾವ್ಯಾವಲೋಕನ ॥ ೩೮೬ ॥

ಮದುವೆಯಾದನಂತರ ಆಭರಣಗಳಿಂದ ಅಲಂಕರಿಸಿಕೊಂಡಂಥ ಪಾರ್ವತಿಯ ಕೊರಳಿನ ವರ್ಣನೆಯು ಕೆಳಗಿನಂತಿದೆ.

ಸರಿಗೆಗೆ ಕೊರಲ್ ಕೊರಲ್ಗಂ
ಸರಿಗೆಯಲಂಕರಿಸೆ ಸರಿಗೆವಂದುದು ಮುಯ್__ಮು
ಟ್ಟಿರಡಜ ಬೆಡಂಗು ಮೆಂಬಂ
ತಿರೆ ಕರವೊಪ್ಪಿದುದು ಕೊರಲಗೇಂದ್ರಾತ್ಮಜೆಯಾ ॥

ಕಾವ್ಯಾವಲೋಕನ ॥ ೬೫೯ ॥

ಲಗ್ನವಾದಮೇಲೆ ಶಿವನು ಪಾರ್ವತಿಯನ್ನು ತನ್ನ ಸಂಗಡ ಕರಕೊಂಡು ಕೈಲಾಸಕ್ಕೆ ಹೋಗಿ ಅಲ್ಲಿಯ ರಮ್ಯವಾದ ಸ್ಥಳಗಳನ್ನು ತೋರಿಸಿದ ಸಂಗತಿ ಕೆಳಗಿನ ಪದ್ಯದಲ್ಲಿ ಹೇಳಿದೆ.

ಮೃಡನುಡುರಾಜ ಪನ್ನಗ ವಿರಾಜಿ ಜಟಾಮುಕುಟಂ ಕಪರ್ದಿ ನೂ
ರ್ಮಡಿ ಧವಳಂ ಸುರಾಸುರ ಕದಂಬಕ ಸೇವ್ಯ ಪದಾಂಬುಜದ್ವಯಂ
ಅಡರೆ ಮೃಡಾನಿಗನ್ಯಕುಳ ಶೈಳಕುಳಂಗಳ ನಾಡೆ ರಮ್ಯಮ
ಪ್ಪೆಡೆಗಳನೆಲ್ಲಮಂ ನೆಟ್ಟೆಯೆ ತೋರ್ಪುದು ಬೇಟ್ಕೆಯೆ ಬಂದನೀಶ್ವರಂ

ಕಾವ್ಯಾವಲೋಕನ ॥ ೯೩೬ ॥

ಪಾರ್ವತಿ ಪರಮೇಶ್ವರ ಸುರತ ಪ್ರಸಂಗದಲ್ಲಿಯ ಒಂದು ಸನ್ನಿವೇಶದ ವರ್ಣನೆ ಕೆಳಗಿನ ಪದ್ಯದಲ್ಲಿದೆ,

ಪಿಂಗೆ ಪೂಸಿದ ಭಸ್ಮಪರಾಗಂ ಪೊಣ್ಮುವ ಘರ್ಮಜಲಂಗಳಾ
ಪಾಂಗು ಗಂಗೆಯ ಶೀಕರವೆಂಬಂತಾಗಿರೆ ಕಂಡುಮೆ ಶಂಭುಃವಂ
ಗಂಗೆದಲ್ ಜಿಗಿದಪ್ಪಿದಳೆಂಬಾಶಂಕೆಗೆ ಭೋಂಕನೆ ಮೋದೆ ಮು
ದ್ದಿಂಗೊಜಿಲ್ದಮರ್ದಪ್ಪಿದನೀಶಂ ನಲ್ಲಳನಲ್ಲಿ ರತಾಂತದೊಳ್ ॥

ಕಾವ್ಯಾವಲೋಕನ ॥ ೮೦೪ ॥

ಮೇಲೆ ಕಾಣಿಸಿದ ಪದ್ಯಗಳು ನಾಗವರ್ಮನ ಕಾವ್ಯಾವಲೋಕನದಲ್ಲಿಯವೆಂದು ಹಿಂದೆ ಹೇಳಿದ್ದೇನೆ. ಇವೆಲ್ಲವೂ ಶಿವ ಪಾರ್ವತಿಯರ ವಿವಾಹಕ್ಕೆ ಸಂಬಂಧಿಸಿದವುಗಳು. ಪಾರ್ವತೀ ಪರಮೇಶ್ವರರ ವಿವಾಹಕ್ಕೆ ಸಂಬಂಧಿಸಿದ ಕಾವ್ಯವಾದ ಹರಿಹರನ ಗಿರಿಜಾಕಲ್ಯಾಣದಲ್ಲಿ ಇವು ಇಲ್ಲ. ಆದ್ದರಿಂದ ಹರಿಹರನಿಗಿಂತ ಮೊದಲೇ ಶಿವ ಪಾರ್ವತಿಯರ ಮದುವೆಯ ಉಲ್ಲೇಖವಿದ್ದ ಒಂದು ಕಾವ್ಯ ಕನ್ನಡ ಸಾಹಿತ್ಯದಲ್ಲಿರಕ್ಕೆ ಬೇಕು. ಜಯಕೀರ್ತಿಯ ಛಂದೋನುಶಾಸನದಿಂದ ಅಸಗನು 'ಕುಮಾರ ಸಂಭವ'ವೆಂಬ ಒಂದು ಕನ್ನಡಕಾವ್ಯ ಬರೆದಿರಬೇಕು ಮತ್ತು ಅದರಲ್ಲಿ ಕನ್ನಡ ಛಂದಸ್ಸಿನ ವೃತ್ತಗಳಾದ ದೊರೆಯಕ್ಕರ ಹಾಗೂ ಛಂದೋವತಂಸಗಳನ್ನು ಸಾಕಷ್ಟು ಉಪಯೋಗಿಸಿರಬೇಕೆಂದು ತಿಳಿಯುತ್ತದೆ. ಆದ್ದರಿಂದ ಶಿವ ಪಾರ್ವತಿಯರ ವಿವಾಹದ

ಬಗ್ಗೆ ಇದ್ದ ಈ ಪದ್ಯಗಳು ಅಸಗ ಕವಿಯಿಂದ ಬರೆಯಲ್ಪಟ್ಟ ಕನ್ನಡ ಕುಮಾರ ಸಂಭವದಲ್ಲಿಯವೇ ಇರಬೇಕೆಂದು ನನ್ನ ಊಹೆ.

'ಸೂಕ್ತಿಸುಧಾರ್ಣವದಲ್ಲಿ . . . . . ಹರಿಹರನ 'ಗಿರಿಜಾಕಲ್ಯಾಣ'ಕ್ಕೆ ಸಂಬಂಧಪಡದ ಶಿವ ಪಾರ್ವತಿಯರ ವಿಷಯಕವಾದ ಕೆಲವು ಪದ್ಯಗಳು ಇವೆ.' ಎಂದು ಶ್ರೀ ಎನ್. ಅನಂತರಂಗಾಚಾರ್ಯರು ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದ ಮುನ್ನುಡಿಯಲ್ಲಿ ಹೇಳಿದ್ದಾರೆ. (ಸುಕ್ತಿಸುಧಾರ್ಣವ ಮುನ್ನುಡಿ ಪು. ೨೬) ನಾಗವರ್ಮನ ಕರ್ಣಾಟಕ ಭಾಷಾಭೂಷಣದಲ್ಲಿ ಹಾಗೂ ನೃಪತುಂಗನ ಕವಿರಾಜ ಮಾರ್ಗದಲ್ಲಿ ಕನ್ನಡ ಪೂರ್ವ ಕವಿಗಳ ಗ್ರಂಥಗಳಲ್ಲಿಯ ಪದ್ಯಗಳು ಲಕ್ಷ್ಯಗಳಾಗಿ ಉಪಯೋಗಿಸಲ್ಪಟ್ಟಿರುತ್ತವೆ. ಈ ಪದ್ಯಗಳಲ್ಲಿ ಶಿವ ಪಾರ್ವತಿಯರಿಗೆ ಸಂಬಂಧಿಸಿದ ಪದ್ಯಗಳನ್ನು ಕೂಲಂಕಷವಾಗಿ ಅವಲೋಕಿಸಿದಲ್ಲಿ ಅಸಗನ ಕನ್ನಡ ಕುಮಾರ ಸಂಭವದ ಮೇಲೆ ಹೆಚ್ಚು ಬೆಳಕು ಬೀಳಬಹುದಾಗಿದೆ.

ಅಸಗನು ವರ್ಧಮಾನ ಚರಿತೆ, ಶಾಂತಿಪುರಾಣ ಮೊದಲಾದ ಹತ್ತು ಸಂಸ್ಕೃತ ಮತೀಯ ಕಾವ್ಯಗಳನ್ನೂ ಕುಮಾರ ಸಂಭವವೆಂಬ ಒಂದು ಮಾತ್ರ ಕನ್ನಡ ಲೌಕಿಕ ಕಾವ್ಯವನ್ನೂ ಬರೆದದ್ದು ಕಂಡುಬರುತ್ತದೆ. ಈತನು ಕನ್ನಡ ಕುಮಾರ ಸಂಭವವೆಂಬ ಲೌಕಿಕ ಕಾವ್ಯವನ್ನು ಬರೆದದ್ದನ್ನು ನೋಡಿದರೆ ಹತ್ತನೆಯ ಶತಮಾನದ ಪಂಪ, ಪೊನ್ನ, ರನ್ನರಂತೆ ಒಂಬತ್ತನೆಯ ಶತಮಾನದಲ್ಲಿಯೂ ಜೈನಕವಿಗಳು ತಮ್ಮ ಮತಪ್ರಚಾರಕ್ಕಾಗಿ ಮತೀಯ ಕಾವ್ಯಗಳನ್ನು ಹಾಗೂ ಉಳಿದ ಜನತೆಯ ಸಲುವಾಗಿ ಲೌಕಿಕ ಕಾವ್ಯಗಳನ್ನು ಬರೆದಿರಬಹುದೆಂದು ತೋರುತ್ತದೆ. ಅಸಗನು ತನ್ನ ಕುಮಾರ ಸಂಭವವೆಂಬ ಕಾವ್ಯವನ್ನು ಸುಮಾರು ಕ್ರಿ.ಶ. ೮೬೦ರಿಂದ ಕ್ರಿ.ಶ. ೮೮೦ರೊಳಗಾಗಿ ಬರೆದದ್ದರಿಂದ ಕನ್ನಡ ಸಾಹಿತ್ಯದಲ್ಲಿ ನಮಗೆ ತಿಳಿದಮಟ್ಟಿಗೆ ಲೌಕಿಕ ಕಾವ್ಯಗಳನ್ನು ಬರೆದ ಜೈನ ಕವಿಗಳಲ್ಲಿ ಈತನೇ ಮೊದಲಿಗನೆಂದು ಹೇಳಬಹುದು.

ಕುಮಾರ ಸಂಭವವೆಂಬ ಒಂದು ತೆಲಗು ಚಂಪೂ ಕಾವ್ಯವನ್ನು ನನ್ನೆ ಚೋಡ(ಳ)ನೆಂಬ ಒಬ್ಬ ಆಂಧ್ರ ಕವಿಯು ಬರೆದಿದ್ದಾನೆ. ಈತನ ಕಾಲ ೧೦ನೆಯ ಶತಮಾನದಿಂದ ೧೨ನೆಯ ಶತಮಾನದವರೆಗೆ ಹೊಯ್ದಾಡುತ್ತಿದೆ. 'ಈತನ ಕುಮಾರ ಸಂಭವ ಕಾವ್ಯದಲ್ಲಿ ನೂರಾರು ಕನ್ನಡ ಶಬ್ದಗಳು ಬಂದಿರುವದರಿಂದ ನನ್ನೆ ಚೋಡನು ಕನ್ನಡ ಭಾಷೆಯನ್ನು ಚೆನ್ನಾಗಿ ಬಲ್ಲವನೆಂದು ಸುಲಭವಾಗಿ ನಿರ್ಣಯಿಸಬಹುದೆಂದು ಶ್ರೀ ಡಿ. ಕೆ. ಭೀಮಸೇನರಾವ ಇವರು ಅಭಿಪ್ರಾಯಪಟ್ಟಿದ್ದಾರೆ. (ಹದಿಮೂರನೆಯ ಶತಮಾನದ ಕರ್ಣಾಟಾಂಧ್ರ ಮಹಾರಾಷ್ಟ್ರ ಸಾಹಿತ್ಯಾವಲೋಕನ. ಪು. ೫೭) ಕನ್ನಡ ಕವಿಗಳ ಗ್ರಂಥಗಳಿಂದಲೇ ನನ್ನೆ ಚೋಡನು ಭಾವಾನುಕರಣ ಮಾಡಿರಬಹುದೆಂದು ಶ್ರೀ ವೀರೇಶಲಿಂಗಪಂತಲು ಅವರು ಊಹಿಸಿದ್ದಾರೆ. (ಕವಿಚರಿತೆ ನನ್ನೆ ಚೋಡ. ಪು. ೧೮೩–೨೧೬) ಆಂಧ್ರ ಸಾಹಿತ್ಯದಲ್ಲಿ ಪ್ರಸಿದ್ಧ ಕವಿಯಾದ ನನ್ನಯಭಟ್ಟನು ತನ್ನ ಮಹಾಭಾರತವನ್ನು ಬರೆಯುವಲ್ಲಿ ನಾರಾಯಣಭಟ್ಟನೆಂಬ ಕನ್ನಡ ಕವಿಯ ಸಹಾಯ ತೆಗೆದುಕೊಂಡಂತೆ ನನ್ನೆ ಚೋಡನು ತನ್ನ ತೆಲಗು ಕುಮಾರ ಸಂಭವವೆಂಬ ಕಾವ್ಯವನ್ನು ಬರೆಯುವಂದು ಅಸಗನ ಕರ್ಣಾಟ ಕುಮಾರ ಸಂಭವ ಕಾವ್ಯದ ಸಹಾಯವನ್ನು ಪಡೆದಿರಬಹುದಾಗಿ ತೋರುತ್ತದೆ.

ಸನ್ಮಾನ್ಯ ಲೇಖಕರಲ್ಲಿ ಮನವಿ.

ಕನ್ನಡ ಸಾಹಿತ್ಯ ಮತ್ತು ಸೋದರ ಭಾಷಾ ಸಾಹಿತ್ಯಗಳಿಗೆ ಸಂಬಂಧಪಟ್ಟ ವಿವಿಧ ವಿಷಯಗಳನ್ನು ಕುರಿತ ಲೇಖನಗಳನ್ನೂ, ಕಲೆ, ವಿದ್ಯಾಭ್ಯಾಸ, ಪ್ರಾಚೀನ ಮತ್ತು ಆಧುನಿಕ ಸಾಹಿತ್ಯಕ ಗ್ರಂಥಗಳ ಪರಿಚಯ ಲೇಖನಗಳನ್ನೂ ಪ್ರಬಂಧ, ಕಥೆ, ಏಕಾಂಕ ನಾಟಕ, ಕವಿತೆಗಳನ್ನೂ 'ಕನ್ನಡ ನುಡಿ' ಕೃತಜ್ಞತೆಯಿಂದ ಸ್ವೀಕರಿಸಿ ಉಚಿತವರಿತು ಪ್ರಕಟಿಸುತ್ತದೆ. ಸಂಶೋಧನಾತ್ಮಕವಾದ ಪ್ರೌಢ ಲೇಖನಗಳನ್ನು 'ಪರಿಷತ್ಪತ್ರಿಕೆ' ಯಲ್ಲಿ ಪ್ರಕಟಿಸಲಾಗುವುದು.

ಲೇಖನಗಳನ್ನು ಹಾಲು ಹಾಳೆಯ ಒಂದೇ ಕಡೆ ಶಾಯಿಯಲ್ಲಿ ಸ್ಫುಟವಾಗಿ ಬರೆದು ಕಳಿಸುವ ಉಪಕಾರ ಮಾಡಬೇಕೆಂದು ಪ್ರಾರ್ಥನೆ.

ಸನ್ಮಾನ್ಯ ಲೇಖಕರು 'ಕನ್ನಡ ನುಡಿ' ಗೆ ತಮ್ಮ ಅಮೂಲ್ಯ ಲೇಖನ ದಾನದ ಮೂಲಕ 'ಪರಿಷತ್ತಿನ' ಸಾಹಿತ್ಯಪ್ರಚಾರದ ಧ್ಯೇಯಸಾಧನೆಯಲ್ಲಿ ಸಹಭಾಗಿಗಳಾಗಬೇಕೆಂದು ವಿನಯದಿಂದ ಸಂಪ್ರಾರ್ಥಿಸುತ್ತೇವೆ.

ಸಂಪಾದಕ.

ಶುಭ್ರಶೀಲೆ ಅಹಲ್ಯೆ

(ಏಕಾಂಕ ನಾಟಕ)

(ಕಳೆದ ಸಂಚಿಕೆಯಿಂದ ಮುದುವರಿದುದು)

ಶ್ರೀ ಸಮೇತನಹಳ್ಳಿ ರಾಮರಾಯ

ಕಲಂಕೋತ್ಪಾದನ

[ಅದೇ ಬನದ ಬೇರೊಂದು ಭಾಗ. ಉದಯದ ರಾಗ ಹಸಲೆಯಲ್ಲಿ ಸೊಗಸಾಗಿ ಮಲಗಿದೆ. ವನ್ಯ ಶಾಂತಿಯ ಸುಂದರ ಸುಖ ಮನೆ ಮಾಡಿದೆ. ತೆರೆ ಮೇಲಕ್ಕೆ ಏಳುವಾಗ ಅಹಲ್ಯೆಯನ್ನು ಹಿಂಬಾಲಿಸಿ ಬಳ್ಳಿ ಮನೆಯೊಂದರಿಂದ ಅವಳನ್ನು ಸೋಕಿದಂತೆ ದೇವ ರಾಜನು ಬರುತ್ತಿದ್ದಾನೆ. ಅವನು ಗೆಯ್ದ ಸಲ್ಲದ ಗೆಯ್ಮೆಯಿಂದ ಅವನ ಮಹತ್ತು ಕಳಚಿಹೋಗಿದೆ. ಗೌತಮನಾಗಿದ್ದವನು ಮತ್ತೆ ವಾಸವನಾಗಿಯೇ ಕಾಣುತ್ತಿದ್ದಾನೆ. ಅದನ್ನರಿಯದ ಅವನು ಹಿಂದಿನಂತೆಯೇ ನಡೆಯುತ್ತಾನೆ; ನುಡಿಯುತ್ತಾನೆ].

ದೇವರಾಜ— ಏನೆಂಥ ಸಮ್ಮೋದ! ಏನು ಆನಂದ! ವಿಶ್ವಸೃಷ್ಟಿಯ ಒಂದೊಂದೂ ಕಣ ಅರಳುತ್ತಿದೆ. ಹೊಸ ಚೇತನ ಉಕ್ಕುಕ್ಕಿ ಅರಳುತ್ತಿದೆ. ಬಗೆ ತಣಿಯಿತು ಅಹಲ್ಯೆ. ನಿನ್ನುಪಕಾರಕ್ಕೆ ನಾನು ಎಷ್ಟು ಋಣಿ!

ಅಹಲ್ಯೆ— ಅದೇ ಹಾಲ್ಗಡಲಲ್ಲಿ, ನೀನು ಹರಡಿದ ಜೇನು ಹರಿಗೋಲನ್ನೇರಿ ನಾನೂ ಹಾಯ್ದೆನಲ್ಲಾ! ಸುಖವನ್ನುಂಡೆನಲ್ಲಾ! ನನ್ನ ಉಪಕೃತಿ ಏನು ಬಂತು?

ದೇವರಾಜ— ಉಂಟು ಉಂಟು. ಮನಸ್ಸು ಮನಸ್ಸಿನಲ್ಲಿ ಬೆರೆತಿತ್ತಲ್ಲಾ! ನೀನು ನನ್ನವಳಾಗಿದ್ದೆಯಲ್ಲಾ!

ಅಹಲ್ಯೆ— ಆಗದೇನು? ಅಂದೂ, ಇಂದೂ, ಎಂದೆಂದೂ ನಿನ್ನವಳೇ.

ದೇವರಾಜ— ಸುಖದ ಇದೇ ಒರತೆ ಯಾವಾಗಲೂ ಚಿಮ್ಮಲಿ; ಇದೇ ಒಲವಿನಲ್ಲಿ ನಲವಿನಲ್ಲಿ ದಿವಸಗಳನ್ನು ಕಳೆಯೋಣ.

ಅಹಲ್ಯೆ—(ತನ್ನಲ್ಲಿ) ಏನು ರಾಗೋನ್ಮಾದ ಇಂದು! ಹಿಂದೆ ಕಾಣದ ರೀತಿ! ನೋಡಬಾರದ ನೀತಿ! (ಹಿಂತಿರುಗಿ ನೋಡುತ್ತ) ಆದರೂ ಸ್ವಾಮಿ— (ಮಿಂಚು ಮುಟ್ಟಿದವಳಂತೆ ದಿಗ್ಭ್ರಾಂತಿಗೊಂಡು ನೋಡುವಳು. ಮನಸ್ಸಿನ ಅತೀವ ವೇದನೆ ನೂರುಮುಖವಾಗಿ ಮೊಗದಲ್ಲಿ ಕಾಣುವುದು. ಎಲ್ಲವನ್ನೂ ನುಂಗಿ) ಯಾರು ನೀನು?

ದೇವರಾಜ—(ಗಾಬರಿಗೊಂಡು) ನಾನು! ನಾನೇ!—

ಅಹಲ್ಯೆ—(ಕಿಸುಗಣ್ಣಿ ನೋಡುವಳು)

ದೇವರಾಜ—(ತನ್ನನ್ನು ತಾನೆ ನೋಡಿಕೊಂಡು ಅರಿತು) ಹೇಳಬೇಕೇ ಅದನ್ನು? ಇಷ್ಟು ಹೊತ್ತಿನ ಸಂಗವನ್ನು ಉಂಡೂ ನಾನು ಮತ್ತೆ ಹೇಳಬೇಕೆ?

ಅಹಲ್ಯೆ—(ಕೆಡುಕನ್ನು ಊಹಿಸಿ) ಏನು ಹೊಲೆ ಮೋಸ! (ಮನಸ್ಸಿನ ಉದ್ರೇಕವನ್ನು ತಗ್ಗಿಸಿಕೊಂಡು) ಇನ್ನಾದರೂ ಹೇಳು, ನೀನಾರು?

ದೇವರಾಜ— ನನ್ನನ್ನು ದಿವೌಕಸರು ದೇವೇಂದ್ರನೆನ್ನುವರು. ಇಳೆಯವರು ಮಳೆರಾಯನೆಂದು ಬೆಳೆರಾಯನೆಂದು ಆಡುವರು.

ಅಹಲ್ಯೆ— ಶತಕ್ರತುವು ನೀನು! ಯಾಗಾಧಿಪನು ನೀನು.! ಮೂರು ಲೋಕವನ್ನೂ ನಿಯಮಿಸಬೇಕಾದವನು ನೀನು!

ದೇವರಾಜ—(ತಲೆದೂಗುವನು)

ಅಹಲ್ಯೆ—(ಔಡುಗಚ್ಚಿ) ಹೌದು! ಆ ಉತ್ತಮೋತ್ತಮ ಸ್ಥಾನಕ್ಕೆ, ಅಧಿಕಾರಕ್ಕೆ, ಪಾಪವನ್ನು ಲೇಪಿಸುವ ಎಲೆ ಸೊಕ್ಕೆ! ಓ ತಿಳಿಗೇಡಿತನವೇ!

ದೇವರಾಜ— ನನ್ನ ಪ್ರಭುತ್ವವನ್ನು ಲೋಕ ಒಪ್ಪಿಕೊಂಡಿಲ್ಲವೇ?

ಅಹಲ್ಯೆ— ಒಪ್ಪಿಕೊಳ್ಳುತ್ತದೆ, ಆ ದೊಡ್ಡತನ ನಿನ್ನಲ್ಲಿರುವುದಾದರೆ.

ದೇವರಾಜ— ಇಲ್ಲವೆಂದೆನ್ನುವೆಯೇನು?

ಅಹಲ್ಯೆ—(ಕೆರಳಿ) ನಾನು ಹೇಳಬೇಕೆ ಅದನ್ನು? ನಿನ್ನ ಕೇವಲ ತುಚ್ಛ ಇಚ್ಛೆಗಾಗಿ ದಾರಿದಪ್ಪಿ ನಡೆದು, ಅರಳುವಲರನ್ನು ಕಾವಿನೊಡನೆ ಕಿತ್ತು, ಕಳಂಕವನ್ನು ಬಳಿವ ಕೈಯಿಂದ ಎತ್ತಿ ಹಿಡಿದು, ಎದೆಯ ಹಲಾಹಲ ಬೆರೆತ ಬಿಸಿಯುಸಿರನ್ನು ಊದಿ, ಬಾಡಿಸಿ, ಮಸಿಯುಂಡೆ

ಯನ್ನಾಗಿ ಮಾಡುವ ಈ ಹೇಯವೃತ್ತಿಯೇ ಅದನ್ನು ಲೋಕಕ್ಕೆ ಸಾರಿ ಹೇಳುತ್ತಿದೆ. ಸಾರ್ಥಕವಾಯಿತು! ಪ್ರಪಂಚದ ಬಾಳುವೆಯನ್ನು ಹಸನಾಗಿಸುವ ಮಹೋದ್ದೇಶದಿಂದ ಅಧಿಕಾರವನ್ನು ನಿನ್ನ ಕೈಗಿತ್ತ ಹಿರಿಯರು ಎಷ್ಟು ನೊಂದಾರು! ಬೆಂದಾರು!

ದೇವರಾಜ—(ಕೆಳದನಿಯಲ್ಲಿ) ನಾ ನೇ ನು ಮಾಡಲಿ ಅಹಲ್ಯೆ? ನನ್ನ ಅಪರಾಧ ಅಕ್ಷಮ್ಯವಾಗುವುದೆಂದು ಅರಿತಿದ್ದೆನಾದರೂ ಹೆಣ್ಣಿನ ಈ ಅನಂತವಾದ ಚೆಲುವನ್ನು ಕಂಡು ಮನಸ್ಸು ಬಿಗಿ ತಪ್ಪಿತು; ಸಲ್ಲದುದನ್ನು ಆಚರಿಸಿದೆ.

ಅಹಲ್ಯೆ—ಅಗ್ನಿ, ವಾಯು, ವಾಸವರು ಬ್ರಹ್ಮವನ್ನು ಅತಿ ನಿಕಟವಾಗಿ ಕಂಡರಾದ್ದರಿಂದ ದೊಡ್ಡವರು ಎಂಬ ಮಾತು ಉಂಟು. ಅದರಲ್ಲಿಯೂ ನೀನು ಅವರಿಬ್ಬರೂ ಅರಿಯಲಾರದುದನ್ನು ಅರಿತೆಯಾದ್ದರಿಂದ ಶ್ರೇಷ್ಠನು ಎಂದು ಜಗತ್ತು ಒಪ್ಪಿಕೊಂಡಿತು. ಆ ಹಿರಿಯ ಸ್ಥಾನದ ಗೌರವಕ್ಕಾಗಿಯಾದರೂ ನೀನು ಮನ್ನಣೆ ಕೊಡಬಾರದಾಗಿತ್ತೆ?

ದೇವರಾಜ—ಭೋಗದಲ್ಲಿಯೇ ಬಳೆದೊಡಲು ಅಂಕೆಮೀರಿತು.

ಅಹಲ್ಯೆ—ಬೆಸೆದ ಎರಡು ಉಸಿರುಗಳಲ್ಲಿ ಒಂದನ್ನು ಕಳಚಿದೆಯಲ್ಲಾ! ಒಂದು ಸಂಸಾರದ ಆಂದವನ್ನು ಹಾಳುಗೆಡಿಸಿದೆಯಲ್ಲಾ! ಮತ್ತೆಷ್ಟು ಮಂದಿ ಹೆಣ್ಣುಗಳ ಸತೀತ್ವವನ್ನು ಅಪಹರಿಸಿರುವಿಯೋ!

ದೇವರಾಜ—ಮರೆತುಬಿಡು ಅಹಲ್ಯೆ. ಇದು ದೇವರಹಸ್ಯವಾಗಿ ಉಳಿಯಲಿ. ನಾನು ಇಡೀ ಪ್ರಕೃತಿಗೆ ಆಜ್ಞೆ ಮಾಡುತ್ತೇನೆ, ಇದು ಗೋಪ್ಯವಾಗಿರಲಿ ಎಂದು. ತಪಸ್ವಿಗಳ ತಪೋಲೋಕದ ಸುತ್ತ ಭದ್ರತರ ಮಾಯೆಯನ್ನು ಹರಡಿ ಈ ರಹಸ್ಯವನ್ನು ಅವರು ಭೇದಿಸಿ ಕಾಣದಂತೆ ಮಾಡುವೆನು. ಅಂದಮೇಲೆ ನಿನ್ನ ಸತೀತ್ವಕ್ಕೆ ಮಂದಿಯಿಂದ ಕಳಂಕವೇನು ಬಂತು?

ಅಹಲ್ಯೆ—ಮಹಾತಪಸ್ವಿ ಗೌತಮನ ಪುಣ್ಯದಲ್ಲಿ ಬಳೆದವಳು ಅಹಲ್ಯೆ ಎಂಬುದನ್ನು ಮರೆಯಬೇಡ. ನೀನು ಪ್ರಕೃತಿಯನ್ನು ನಿಯಮಿಸಬಹುದು. ಆದರೆ ನನ್ನ ಒಳಗಣಾತ್ಮವನ್ನು ಯಾವುದೇ ದೈವಿಕ ಶಕ್ತಿಯೂ ವಂಚಿಸಲಾರದು. ನನ್ನ ನಡತೆ ನನ್ನ ಬಾಳಿನ ನೇರಕ್ಕೆ; ಮಂದಿಯ ಮೆಚ್ಚುಗೆಗಾಗಿಯಲ್ಲ. ನಿನ್ನ ಯಾವುದೇ ಮೋಸಕ್ಕೆ ಇಲ್ಲಿ ಜಾಗವಿಲ್ಲ. ಈ ನಿನ್ನ ಹೇಯ ವರ್ತನೆಗೆ ತಕ್ಕ ದಂಡವನ್ನು ನಾನೇ ಮಾಡಬಲ್ಲೆನಾದರೂ ಸ್ವತಂತ್ರಳಲ್ಲ. ಮಹರ್ಷಿಯೇ ಬರಲಿ; ಯಾವುದು ಹೇಗಾಗಬೇಕೋ ನಿರ್ಣಯಿಸಲಿ.

ದೇವರಾಜ—ಇನ್ನೇನು! ನನ್ನ ಬಾಳೇ ಹಾಳು! (ಕಾಲನ್ನು ಕೀಳುವನು).

ಅಹಲ್ಯೆ—(ದಿಟ್ಟತನದಿಂದ) ನೀನಿಲ್ಲಿಂದ ಕದಲಲಾರೆ ದೇವರಾಜ. ಒಂದುವೇಳೆ ನುಸುಳಿಹೋದೆಯಾದರೂ ಮಹರ್ಷಿಗಳಿಗೆ ನಿನ್ನನ್ನು ಹಿಡಿತರಿಸುವುದು ಕಷ್ಟವೇನೂ ಇಲ್ಲ. ತಪಸ್ಸಿನ ಪ್ರಭಾವದಿಂದ ಲೋಕಲೋಕಗಳನ್ನೇ ಸೃಜಿಸಬಹುದಾದರೆ ಒಂದು ವ್ಯಕ್ತಿಯನ್ನು ಸೆಳೆದು ತರುವುದು ಏನು ದೊಡ್ಡಮಾತು! (ನೇಪಥ್ಯದತ್ತ ತಿರುಗಿ) ವೇದವತಿ, ಓ ವೇದವತಿ!

ವೇದವತಿ—(ಒಳಗಿನಿಂದಲೇ) ಬಂದೆನಕ್ಕಾ! (ಪ್ರವೇಶಿಸುವಳು)

ಅಹಲ್ಯೆ—ಒಡೆಯನು ಧ್ಯಾನದಿಂದ ಎಚ್ಚರವಾಗುವ ಹೊತ್ತಾಯಿತಲ್ಲಾ?

ವೇದವತಿ—ಈಗಾಗಲೇ ಬಹಿರ್ಮುಖರಾಗಿರಬಹುದು.

ಅಹಲ್ಯೆ—ಹಾಗಿದ್ದರೆ ಬಾ ಇಲ್ಲಿ (ಕಿವಿಯಲ್ಲಿ ಹೇಳುವಳು)

ವೇದವತಿ—(ಕೇಳಕೇಳುತ್ತ ಅವಳ ಮುಖ ಬಣ್ಣಗುಂದುವುದು. ಉತ್ತೇಜಿತ ಕಂಠದಲ್ಲಿ) ಅಹಲ್ಯೆ! ಅಹಲ್ಯೆ!

ಅಹಲ್ಯೆ—ತಾಳಿಕೋ, ತುಳಿದುಕೋ ತಂಗಿ. ನಾಥನಿಗೆ 'ಏನೋ ವಿರಸವಾಯಿತು. ಒಡನೆಯೇ ದಯಮಾಡಿಸಬೇಕು' ಎಂದು ಮಾತ್ರ ತಿಳಿಸು ಹೋಗು.

ವೇದವತಿ—(ನಿಟ್ಟುಸಿರಿನಲ್ಲಿ ತಲೆತಗ್ಗಿಸಿ ಹೋಗುವಳು)

ದೇವರಾಜ—ಅಹಲ್ಯೆ, ನೀನು ಕ್ಷಮಾಶೀಲಳು, ಸ್ನೇಹಮಯಿ, ಎಂದು ಕೇಳಿದ್ದೆ. ಅದು ಈಗ ಸುಳ್ಳಾಗುವಂತಾಯಿತೆ?

ಅಹಲ್ಯೆ—ಕೆಟ್ಟ ಬಾಳನ್ನು ಬಾಳುವ ನಿನ್ನಂತಹವರನ್ನು ಶಿಕ್ಷಿಸುವಾಗ ಹೆಣ್ಣು ಕಾಳಿಯಾಗಬೇಕು; ಕರಾಳಿಯಾಗಬೇಕು.

ದೇವರಾಜ—ಹಾಗಾದರೆ ನಿನ್ನ ಉಜ್ವಲವಾದ ಚೆಲುವಿನಲ್ಲಿಯೂ ಅಂತಹ ಕ್ರೌರ್ಯವೇ?

ಅಹಲ್ಯೆ—ಕೆಡಕನ್ನು ನಿರೀಕ್ಷಿಸುವ ನೀನು ಅದನ್ನು ಕ್ರೌರ್ಯವೆಂದು ಬೇಕಾದರೆ ಕರೆದುಕೋ. ಮಾತ್ಸರ್ಯವೆಂದರೂ ಅನ್ನು. ಆದರೆ ದೇವರಾಜ, ನಾಡಿಗಧಿಪನು

ಎಂದು ಅನ್ನಿಸಿಕೊಂಡಮಾತ್ರಕ್ಕೆ ಪ್ರಕೃತಿಯ ನಿಯಮವನ್ನು, ಸಮಾಜದ ಕಟ್ಟನ್ನು ಮುರಿಯಬೇಕು ಅಂದಲ್ಲ. ಅವನೂ ದಂಡಾರ್ಹನು ಎಂಬುದನ್ನು ಲೋಕವಿಂದು ಅರಿಯಲಿ.

ಗೌತಮ—(ತಪಸ್ಸು ತುಂಬಿದ ತುಂಬುಗಣ್ಣುಗಳಲ್ಲಿ ವಿಶ್ವರಹಸ್ಯವನ್ನು ಭೇದಿಸಬಲ್ಲ ದೃಷ್ಟಿಯಿಂದ ಅಭೀಕ್ಷಿಸುತ್ತ ಪ್ರವೇಶಿಸಿ) ಯಾರು ದಂಡಾರ್ಹರು? ಏಕೆ ದಂಡನೆ?

ದೇವರಾಜ—(ಮತ್ತಷ್ಟು ಕಂಪನದಿಂದ ಹಿಂಜರಿಯುವನು).

ಅಹಲ್ಯೆ—(ಮುಖ ತಗ್ಗಿಸಿ ನಿಲ್ಲುವಳು)

ಗೌತಮ—(ಸಸ್ನೇಹವಾಣಿಯಿಂದ) ಏನಾಯಿತು ಅಹಲ್ಯೆ? ನನ್ನ ಬರವೇಕೆ ಬೇಕಾಗಿತ್ತು? (ನೋಡಿ) ಬಾನೊಡೆಯನು ನೀನು! ಇಲ್ಲೇಕೆ ವಾಸವ? ನನ್ನನ್ನು, ನನ್ನ ಮಡದಿ ಮಕ್ಕಳನ್ನು ಅನುಗ್ರಹಿಸಲು ಇಳಿದು ಬಂದೆಯಾ? (ಸುಮ್ಮನಿದ್ದು) ಯಾರೂ ಮಾತನಾಡರೇಕೆ? (ಅಭೀಕ್ಷಿಸಿ) ಹಾವನ್ನು ತುಳಿದ ಎರಳೆಯಂತೆ ಹೀಗೆ ನಡುಗುತ್ತಿರುವೆಯೇಕೆ ಇಂದ್ರ?

ದೇವರಾಜ—(ದೀರ್ಘದೇಹಿಯಾಗಿ ನಮಸ್ಕರಿಸಿ ನುಡಿಯದೆ ನಿಲ್ಲುವನು)

ಗೌತಮ—ನಿನ್ನ ಈ ಮೌನ ನನಗೆ ಉತ್ತರ ಕೊಟ್ಟಂತಾಯಿತೇ?

ದೇವರಾಜ—(ಕೈಮುಗಿದು) ನಾನು ಅಪರಾಧಿ. ನೀನು ಅಭಯಕೊಡುವುದಾದರೆ ಹೇಳುತ್ತೇನೆ.

ಗೌತಮ—ಹೇಳು, ಹೇಳು ದೇವರಾಜ. ಅಭಯವಿತ್ತ ಮಾತ್ರಕ್ಕೆ ನಿನ್ನ ಅಪರಾಧದ ಹೊರೆ ಕಡಮೆಯಾಗದು ಹೇಳು.

ದೇವರಾಜ— ನಿನ್ನಂತಸ್ಸತ್ತ್ವವನ್ನು ಪರೀಕ್ಷಿಸುವ ಸಲುವಾಗಿ ಕಾಮನೊಡನೆ ಹೆಣ್ಣು ಪಡೆಯೊಡನೆ ಬಂದಾಗ—

ಗೌತಮ—ಬಂದಾಗ ಏನಾಯಿತು? ನನ್ನ ಮೇಲೆ ನಿಮ್ಮಲ್ಲಿ ಯಾರೂ ಧಾಳಿಮಾಡಲಿಲ್ಲ. ಮಾಡಿದ್ದರೂ ಅಪರಾಧವೆಂತಾದೀತು?

ದೇವರಾಜ—ಹೂ ಬಾಣಕ್ಕೆ ನಿನ್ನನ್ನು ತುತ್ತಾಗಿಸುವುದು ಹೋಗಿ ನಾನೆ ಸಿಕ್ಕಿದೆನು. ನಿನ್ನಡಿಗಳಿಗೆ ದ್ರೋಹ ಮಾಡಿದೆನು.

ಗೌತಮ—ಅದೇ ನಿನ್ನ ಹೆಣ್ಣುಗಳನ್ನು ಕೂಡಿ ಹೇಮಕೂಟಕ್ಕೋ ಗಂಧಮಾದನದ ರಮ್ಯಪ್ರದೇಶಕ್ಕೋ ಹೋಗಬಹುದಾಗಿದ್ದಿತಲ್ಲವೇ?

ದೇವರಾಜ—ಇಲ್ಲ, ಹೋಗಲಿಲ್ಲ. ಆ ಉನ್ಮಾದದಲ್ಲಿ ಮನಸ್ಸು ಮುಗ್ಗರಿಸಿ ಬಿಟ್ಟಿತು. (ಋಷಿಯ ಕಾಲುಗಳಲ್ಲಿ ಕಳಚಿಕೊಂಡು) ನಿನ್ನ ಜ್ಞಾನ ಚಕ್ಷುಸ್ಸಿಗೆ ಮರೆಯಾಗದ ಮಾತು ಏನುಂಟು! ಮಹರ್ಷಿ, ನೀನು ಕಾಪಾಡಿದರುಂಟು ನನ್ನ ಬಾಳು!

ಗೌತಮ—(ಕೇಳ ಕೇಳುತ್ತಿದ್ದಂತೆ ಅವನ ಮುಖದಲ್ಲಿ ಬಣ್ಣಗಳ ಮಿಂಚುಗಳು ಮೂಡುವುವು. "ಓ, ಹೀಗಾಯಿತೇ ಬದುಕು!" ಎಂದು ನೊಂದು, ಇಂದ್ರನನ್ನು ನಟ್ಟಕಣ್ಣಿಂದ ನೋಡಿ, ಏನೋ ಹೊಳೆಯಲು ಮೊಗವನ್ನತ್ತ ತಿರುಗಿಸಿ ಮತ್ತೆ ಮೆಲ್ಲನೆ ತೆರೆದು ಅದೇ ಇನಿದನಿಯಲ್ಲಿ) ಅಹಲ್ಯೆ,

ಅಹಲ್ಯೆ—(ತಗ್ಗಿಸಿದ ತಲೆಯಲ್ಲಿ, ದನಿಯಲ್ಲಿ) ಪ್ರಭು

ಗೌತಮ—ಕತ್ತೆತ್ತಿ ಒಮ್ಮೆ ನೋಡು ಅಹಲ್ಯೆ.

ಅಹಲ್ಯೆ—ಇಲ್ಲ ಪ್ರಭು. ನನ್ನ ಪಾಲಿಗೆ ಇನ್ನು ಆ ನೋಟ ಭೇಟಿಗಳು ಇಲ್ಲ; ನೋಡಲಾರೆ.

ಗೌತಮ—ಏನಾದರೂ ಹೇಳುವುದಿದೆಯೆ?

ಅಹಲ್ಯೆ—ಚಿತೆಯೊಂದನ್ನು ಮಾಡಿಸಿಬಿಡು. ನಿನ್ನ ಧ್ಯಾನದಲ್ಲಿ ಈ ಮಲಿನವಾದ ದೇಹವನ್ನು ನೀಗಿ, ಹೂವಾಗಿ, ನಿನ್ನ ಚರಣಧೂಳಿಯಲ್ಲಿ ಹೊರಳಾಡುವೆನು. ಗಿಡವಾಗಿ, ಹಣ್ಣಾಗಿ, ನಿನ್ನ ನಿವೇದನವಾಗಿ, ನಿನ್ನ ರಕ್ತದ ಕಣದಲ್ಲಿ ಕಣವಾಗುವೆನು.

ಗೌತಮ—ನೀನು ಅಂತಹ ಧೀರ ಸತಿ ಎಂಬುದನ್ನು ಲೋಕವರಿತಿದೆ.

ಅಹಲ್ಯೆ—ನೀನಿಟ್ಟ ಹಸ್ತಾದವದು.

ಗೌತಮ—ಕೇಳಿಲ್ಲಿ, ನಿನ್ನನ್ನು ಎಂದಿನಂತೆ ಒಪ್ಪುವೆನು; ಕೂಡಿ ಬಾಳುವೆನು.

ಅಹಲ್ಯೆ—(ಭಯಪಟ್ಟು ಬೆರಗುವಟ್ಟು ಕತ್ತೆತ್ತಿ) ಆ!

ಗೌತಮ—ಆಗಕೂಡದೆಂಬ ಅಳುಕೆ?

ಅಹಲ್ಯೆ—ನಿನ್ನ ಮನಸ್ಸು ದೊಡ್ಡದೆಂಬುದನ್ನು ಅಹಲ್ಯೆ ಬಲ್ಲಳು. ಆದರೆ, ನಾಯಿಯುಂಡ ಹಾಳೆಯಲ್ಲಿ ದೇವರ ತಳಿಗೆಯೇ?

ಗೌತಮ—ಸ್ವಸ್ಥಳಾಗು ಅಹಲ್ಯೆ. ನಿನ್ನ ಶುದ್ಧ ಸತೀತ್ವದ ದಿವ್ಯಾಗ್ನಿಯಲ್ಲಿ ಬಿದ್ದ ಈ ಒಂದು ಕಾಣದ

ಕಳಂಕ ಸುಟ್ಟು ಭಸ್ಮವಾಯಿತು. ಅರಿತಮೇಲೂ ಹದುಗಿಸುವ ಹವ್ಯಾಸಕ್ಕೆ ಹೋಗದೆ ಧೀರಳಾಗಿ ಎದುರಿಸಿದೆ; ಹಿಂದಿನ ಪಾವಿತ್ರ್ಯತೆಗೆ, ಗೌರವಕ್ಕೆ ಹೆಚ್ಚು ಮೆರುಗು ಕೊಟ್ಟಿರುವೆ. ಮನಸ್ಸಿನಿಂದ ಶುದ್ಧಳು ನೀನು.

ಅಹಲ್ಯೆ—ಏನು ಮಾತು ಇದು !

ಗೌತಮ— ಗಂಡು ಹೆಣ್ಣಿನೊಂದರ ಆಳವನ್ನು ಅರ್ಥಮಾಡಿಕೊಂಡ ಮಾತು ಇದು. ಅಹಲ್ಯೆಯ ಅಂತಸ್ಸತ್ವವನ್ನು ಅರಿತ ಗೌತಮನು ಆಡ ಬೇಕಾದ ಮಾತು ಇದು.

ಅಹಲ್ಯೆ—ಪ್ರಭು, ನಾನು ಎಷ್ಟಾದರೂ ತುಂಬು ಹರೆಯದಲ್ಲಿ ನಿಂತ ಹೆಣ್ಣು. ಆಸೆಗಳು ಮಾಗದ ಹೆಣ್ಣು. ಅವಳು ದೇವರಾಜನೊಡನೆ ಆಡಿದಳು ಎಂದು ಲೋಕ ಹೇಳದೇ? ಅಂಥವಳನ್ನು ಕೂಡಿ ನೀನು ಬಾಳುವುದೇ?

ಗೌತಮ—ನನ್ನ ಬಾಳು ಲೋಕದ ಮಾತಿಗಾಗಿ ಅಲ್ಲ. ನನ್ನ ಬಾಳನ್ನು ಬಾಳುವವನು ನಾನು; ಲೋಕವಲ್ಲ. ಮನಸ್ಸು ಮನಸ್ಸಿನೊಡನೆ ಬೆರೆಯಲಿಲ್ಲ, ರಮಿಸಲಿಲ್ಲ, ಕಳಂಕವಾಗಲಿಲ್ಲ, ಎಂದು ನನ್ನ ಅಂತರಾತ್ಮನಿಗೆ ಅರಿವಾದಾಗ, ಯಾವ ಹೆಣ್ಣು ನನ್ನ ಜೀವನದ ಬಹು ಭಾಗದ ಪ್ರಯಾಣದಲ್ಲಿ ಸಂಗಾತಿಯಾಗಿ ನಡೆದಳೋ, ನೆರವಾದಳೋ, ಅಂತಹವಳನ್ನು ತ್ಯಜಿಸುವುದು ನನ್ನ ಧರ್ಮವಲ್ಲ.

ಅಹಲ್ಯೆ—(ಮೂಕಳಾಗಿ ನೋಡುವಳು.)

ಗೌತಮ—ಹೌದು, ನಿನ್ನ ಬಾಯಿಂದ ಮಾತು ಹೊರಡದು ನಿಜ. ಅಹಲ್ಯೆಯ ಜೀವನದಲ್ಲಿ ತ್ಯಾಗ ತುಂಬಿದೆ. ನಿನ್ನವನ ಕಲ್ಯಾಣವನ್ನು, ಅವನ ಸುಖ ಸಂಪತ್ತುಗಳನ್ನು ಚಿಂತಿಸುವುದೇ ಅದರ ಸ್ವಭಾವ. ನೀನು ಈಗ ಹೊಲೆಯಾದೆಯೆಂದು, ನನ್ನ ನಲವಿಗೆ ಸಲ್ಲದೆಂದು ಹೇಳುತ್ತಿರುವೆ. ದೇವರಾಜನು ದೇವರಾಜನಾಗಿ ಬಂದಿದ್ದರೆ ಏನಾಗುತ್ತಿತ್ತೆಂಬುದನ್ನು ನಾನು ಬಲ್ಲೆ. ಈ ಮೋಸದಲ್ಲಿ ನಿನ್ನವನೆಂದೇ ಬಗೆದೆ. ಇದರಿಂದ ನಿನ್ನ ಮನಸ್ಸು ಹೇಗೆ ಮಲಿನಗೊಂಡೀತು? ಆದೇ, ರೇಣುಕೆಯನ್ನು ನೋಡು. ಹೊಸ ಗಂಡಿನ ಚೆಲುವನ್ನು ಕಂಡು ಅವಳ ಮನಸ್ಸು ಚಲಿಸಿತು. ಅವನೊಡನೆ ನಲಿಯದಿದ್ದರೂ ನಲಿದಷ್ಟರ ಸುಖಪಟ್ಟಳು ಮಾನಸಿಕವಾಗಿ; ಜಾರೆಯಾದಳು; ಒಲಿದ ಗಂಡನ್ನು ವಂಚಿಸಿದಳು. ಆ ಅಪರಾಧಕ್ಕೆ ದಣ್ಡನ ಆವಶ್ಯಕ.

ಅಹಲ್ಯೆ—ಅರಿತಮೇಲಾದರೂ ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತವಿಲ್ಲವೆ?

ಗೌತಮ—ಅಪರಾಧಿ ನೀನಲ್ಲ. ವಂಚಿಸಿದವನೂ, ದಂಡಾರ್ಹನೂ ಇದೋ ಈ ವಾಸವನು. ಇತರರ ಸತ್ವವನ್ನು ಪರಿಕಿಸುವನಂತೆ, ತನ್ನ ಮಹತ್ವವೇ ಬತ್ತಿ ಹೋಗಿರುವಾಗ! ಏನು ಅವಿವೇಕ!

ದೇವರಾಜ—(ನಡುಗುತ್ತ ಕೈಮುಗಿವನು)

ಗೌತಮ—ಕ್ಷಮಾಯಾಚನೆ ಅಪರಾಧವನ್ನು ಮುಚ್ಚದು ವಾಸವ. ನಿನ್ನದಿದು ಅಕ್ಷಮ್ಯ (ಬೇಸರಗೊಂಡು ನೊಂದು, ದೃಢ ನಿರ್ಧಾರದಿಂದ) ಹೋಗು, ನಿರಿಂದ್ರಿಯನಾಗಿ ಬಾಳು!

ದೇವರಾಜ—(ನಿಸ್ತೇಜನಾಗಿ ಬೆದರುಗಣ್ಣುಗಳಿಂದ ನೋಡುವನು)

ಗೌತಮ—ಹೋಗು, ಇನ್ನಾದರೂ ವಿವೇಕದಿಂದ ಬಾಳು. (ಮೊಗತಿರುಹುವನು)

ದೇವರಾಜ—(ಗೌತಮನ ನಿರ್ಧಾರವನ್ನು ಕಂಡು ತನ್ನ ಬೇಡಿಕೆ ಸಫಲವಾಗದೆಂದು ನಿಶ್ಚಯಿಸಿ, ಕಳೆಗುಂದಿ, ನಿಡುಸುಯ್ದು ಹೋಗುವನು)

ಗೌತಮ—(ಬಳಸಾರಿ) ದೇವಿ

ಅಹಲ್ಯೆ—(ನೋವು ತುಂಬಿದ ಕಣ್ಣುಗಳಿಂದ ನೋಡುವಳು)

ಗೌತಮ—ನಿನ್ನ ಅನುಮಾನವನ್ನು ಕಳೆಯಲಿಲ್ಲವೇ?

ಅಹಲ್ಯೆ—ಇದು ಅನುಮಾನವಲ್ಲ ಪ್ರಭು.

ಗೌತಮ—ಮತ್ತೆ?

ಅಹಲ್ಯೆ—ನಾಡ ಶಾಸನದ ಅರಿವಿಲ್ಲದೆ ಆಚರಿಸಿದ ಅಪರಾಧವಾದರೂ ಅದು ದಂಡಾರ್ಹವಲ್ಲವೆ? ನಿನ್ನ ಇಷ್ಟಕ್ಕೆ ವಿರುದ್ಧ ನಡೆದ ಕೆಚ್ಚು ಇದಲ್ಲ. ನನ್ನ ಪಾಲಿಗೆ ಬಂದ ಕರ್ತವ್ಯವನ್ನು ಮಲಿನಗೊಳ್ಳದ ಶುದ್ಧಭಾವದಿಂದ ಮಾಡುವ ಅಪೇಕ್ಷೆ ನನಗೆ. ನಿನ್ನಪ್ಪಣೆಯಂತೆ ಎಂದಿನಂತೆ ನಿನ್ನ ಸೇವೆಗನುಕೂಲಳಾಗುವೆನಾದರೂ ಈ ಒಂದು ಕಳಂಕ ಮನಸ್ಸನ್ನು ಕೊರೆಯುತ್ತಿರುತ್ತದೆ. ಗೈವ ಗೆಯ್ಮೆಯಲ್ಲಿ ಶ್ರದ್ಧೆ ಇರದು; ಒಪ್ಪ ಆಗದು. ಆದೇ ನೋವು.

ಗೌತಮ—ಅದಕ್ಕೇನಾಗಬೇಕು?

ಅಹಲ್ಯೆ—ಏನಾದರೊಂದು ಪ್ರಾಯಶ್ಚಿತ್ತವನ್ನು ವಿಧಿಸು. ಅನುಭವಿಸಿ ಕೊಳೆಯನ್ನು ಕಳೆಯುವೆನು. ಮತ್ತೆ ಚರಣ ಶುಶ್ರೂಷೆಗೆ ನಿಲ್ಲುವೆನು.

ಗೌತಮ—ಕೇಡನ್ನು ಕೈಯೊಡ್ಡಿ ಬೇಡುವ ಧೀರಮತಿ—

ಅಹಲ್ಯೆ—ಸ್ವಸಂತೃಪ್ತಿಗಾಗಿ

ಗೌತಮ—(ಯೋಚಿಸಿ) ಅಹಲ್ಯೆ, ಕಲ್ಲಾಗು, ಮರವಾಗು, ನೀರಾಗು ಎಂದು ವಿಧಿಸಬಹುದು. ಆದರೆ ವಿವೇಕದಿಂದ ತಪ್ಪಿಗೆ ತಕ್ಕ ದಂಡನೆಯನ್ನು ನೀನೇ ಬೇಡುತ್ತಿರುವೆ; ಜನಪದಕ್ಕೆ ಹೊಸ ಉಸಿರನ್ನು ತುಂಬುತ್ತಿರುವೆ. ನೀನು ಅದೇ ಉಸಿರಾಗು; ಎಲರಾಗು. ಮಿಥಿಲೆಯ ಈ ಬನದಲ್ಲಿ ಚಲಿಸುತ್ತಿರು. ಪುರುಷೋತ್ತಮನಾವನೋ ಅವನ ದರ್ಶನ ಆದಾಗ ಮತ್ತೆ ಹೆಣ್ಣಾಗು. ಮಗನು ಶತಾನೀಕನು ಜನಕನಲ್ಲಿ ಪೌರೋಹಿತ್ಯವನ್ನು ಮಾಡುವನು. ನಾನು ಮರು ಬನದಲ್ಲಿ ತಪಸ್ಸಿನಲ್ಲಿ ನಿಲ್ಲುವೆನು. ಇದು ವ್ಯವಸ್ಥೆ. ದಿನಗಳು ಕೂಡಿ ಬಂದಾಗ ನಮ್ಮ ಬಾಳನ್ನು ಕೂಡಿಸೋಣ; ಬಾಳೋಣ.

ಅಹಲ್ಯೆ—(ದೂರದಿಂದಲೇ ನಮಿಸಿ ಹೋಗುವಳು)

ಗೌತಮ—(ಹೋದವಳತ್ತಲೇ ನೋಡುತ್ತಿದ್ದು) ಒಳ್ಳೆಯ ತಾಯ ಮಗಳು ಇವಳು; ನನ್ನ ಬಾಳಿಗೊಂದು ನೆರಳು ಇವಳು. ನನ್ನ ಧರ್ಮಾರ್ಥ ಕಾಮಗಳು ಇವಳಿಂದ ತುಂಬಿಬಂದುವು. ಅವುಗಳ ಸುಖದೊರತೆಯನ್ನೂ ಉಂಡಾಯಿತು. ಇನ್ನು ನಾಲ್ಕನೆಯದಾದ ಮೋಕ್ಷ! ಇವಳ ನೆರವಿನಲ್ಲಿ, ಓ, ಅದೇನು ಮಾತೋ! ಭಗವದಿಚ್ಛೆ! (ಸ್ಥಿರಮತಿಯಿಂದ ಬೇರೊಂದು ಕಡೆ ಹೋಗುವನು)

ತೆರೆ.

ಕರ್ಣಾಟಕ ಸಂಘ, ಮೈಸೂರು

ತಾ|| 3-8-53ನೆಯ ಸೋಮವಾರ ಮೈಸೂರಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ಸದ್ವಿದ್ಯಾ ಪಾಠಶಾಲೆಯಲ್ಲಿ ಧಾರವಾಡದ ಕರ್ಣಾಟಕ ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ|| ವಿ. ಕೃ. ಗೋಕಾಕರವರ ಉಪನ್ಯಾಸವನ್ನು ಏರ್ಪಡಿಸಲಾಗಿದ್ದಿತು. ಪ್ರೊ|| ಎಸ್. ವಿ. ರಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಗೋಕಾಕರವರು ಭಾಷಣ ಮಾಡುತ್ತಾ ಹೀಗೆ ತಿಳಿಸಿದರು:—

*"ಸ್ವತಂತ್ರ ಸಮಾಜದಲ್ಲಿ ನಿಜವಾದ ಕಲೆ ನೆಲೆಗೊಳ್ಳಬಲ್ಲದು. ಆದರೆ ಇಂದು ನಮ್ಮ ಗಮನವೆಲ್ಲ ಜೀವ ಉಳಿಸಿಕೊಳ್ಳುವಷ್ಟು ಅನ್ನದ ಕಡೆಗೇ ಇದೆ. ಯಾವ ಕಲೆಯ ವಿಧಾನವನ್ನು ಅನುಸರಿಸಿದರೂ ಮೂಲ ಸೂತ್ರದಲ್ಲಿ ಅತೃಪ್ತಿಯ ಧ್ವನಿಯು ಕೇಳಿಬರುತ್ತದೆ. ದಾರುಣವೇದನೆಯನ್ನು ಅನುಭವಿಸುತ್ತಿರುವ ಸಮಾಜದಲ್ಲಿ ಸಾಹಿತ್ಯವು ಅಶಕ್ತವಾಗಿರುತ್ತದೆ. ಸತ್ಯ, ಸೌಂದರ್ಯ ಮತ್ತು ಆನಂದ ಮೊದಲಾದ ಜೀವನದ ಮೂಲ ಮೌಲ್ಯಗಳನ್ನು ನೆಲೆಗೊಳಿಸುವ ಶಕ್ತಿಯುತ ಸಾಹಿತ್ಯವು ಜೀವನದಲ್ಲಿ ಮೂಡಿ ಬರಬೇಕು. ಇಂತಹ ಸಾಹಿತ್ಯಕ್ಕೆ ಬೆಲೆ ಇಲ್ಲದ ಕಾಲದಲ್ಲೂ ಅದರ ಉಪಾಸನೆಯಲ್ಲಿ ಸಂಸ್ಕೃತಿಯ ಜೀವಾಳವನ್ನು ಸಾಹಿತಿಯು ಉಳಿಸಿಕೊಳ್ಳುತ್ತಾನೆ – ಪ್ರಳಯ ಕಾಲದಲ್ಲಿ ಬುದ್ಧಿಯನ್ನು ಸ್ಥಿರವಾಗಿಟ್ಟುಕೊಂಡು ಮನುಜವಂಶವನ್ನು ರಕ್ಷಿಸಿದ "ನೋವಾಸ್ ಆರ್ಕ್" (Noah's Ark)ನಲ್ಲಿನ ಧೀರನಂತೆ. ಯಾವ ಲೋಕದಲ್ಲಿ ವಿಷಮ ಗಾಳಿ ಬೀಸಿದೆಯೋ, ವಿಷಮ ಸ್ಪರ್ಧೆಗೆ ಹೆಚ್ಚಿನ ಪ್ರೋತ್ಸಾಹ ಇದೆಯೋ ಅಲ್ಲಿ ರೇಸ್‌ಕೋರ್ಸಿನ ಜೀವನ ಸಾಗುತ್ತದೆ. ಇಂತಹ ಸಮಯದಲ್ಲಿ ಯಾವ ಅಧಿಕಾರವಿಲ್ಲದೇ ಹೋದರೂ ಬಾಳಿನ ಮಾಧುರ್ಯ ಮತ್ತು ಪವಿತ್ರತೆಗಳನ್ನು ಸಾಹಿತಿಯು ಕಾಯ್ದುಕೊಳ್ಳುತ್ತಾನೆ. ಚಿರಂತನ ಮೌಲ್ಯಗಳ ಕಡೆಗೆ ಗಮನವಿಟ್ಟು, ತನ್ನ ಸ್ವಂತ ಭಾವ ಸಂಸ್ಕಾರವನ್ನು ಉಳಿಸಿಕೊಂಡು ಶಬ್ದ ಶಕ್ತಿಯ ಸಾಫಲ್ಯಕ್ಕಾಗಿ ಸಾಧನೆ ಮಾಡುತ್ತಾನೆ. 'ಎಲ್ಲ ಕೆಟ್ಟ ಕಾಲವೂ ಬದಲಾಯಿಸಲೇ ಬೇಕು. ಪುನರುದ್ಧಾರ ಅಗತ್ಯವಷ್ಟೇ ಅಲ್ಲ, ಅನಿವಾರ್ಯವೂ ಹೌದು' ಎಂಬ ನಿಸ್ಸಂದೇಹವಾದ ಭಾಷೆ ಬಳಸಿದಾಗ ಸಾಹಿತ್ಯದ ಗೌರವಸ್ಥಾನ ಉಳಿದು ಬರುತ್ತದೆ. ಮನರಂಜನೆಯ ಸಾಹಿತ್ಯಕ್ಕೆ ಎಲ್ಲ ಕಾಲಕ್ಕೂ ಆಯಾ ಕಾಲಾನುಗುಣವಾದ ಸ್ಥಾನ ದೊರಕುತ್ತದೆ. ಷೇಕ್ಸ್‌ಪಿಯರನ ನಾಟಕಗಳಾಗುತ್ತಿದ್ದ ರಂಗಮಂಟಪದ ಪಕ್ಕದಲ್ಲಿ ನಡೆಯುತ್ತಿದ್ದ ಕುಣಿತಕ್ಕೆ ಹೆಚ್ಚು ಜನ ಸೇರುತ್ತಿದ್ದರು. ಮನರಂಜನೆಯೇ ಮೂಲ ಉದ್ದೇಶವಾದಾಗ ತಾವು ಕೊಟ್ಟ ಬೆಲೆಗೆ ಹೆಚ್ಚು ಸುಖವನ್ನು ಬಯಸುವುದು ಸ್ವಾಭಾವಿಕ. ಅದಿಲ್ಲದೆ ಕಲೆಯ ಶ್ರೇಷ್ಠ ಮೂಲ ಮೌಲ್ಯಗಳನ್ನು ಉದ್ಧರಿಸಬೇಕಾದರೆ ಅಥವಾ

---

*ಪ್ರಿನ್ಸಿಪಾಲ್ ಶ್ರೀ ವಿ.ಕೃ. ಗೋಕಾಕ್ ಅವರ ಉಪನ್ಯಾಸದ ಸಂಗ್ರಹ

'ಸತ್ಯವೇ ಶಕ್ತಿ' (Right is might) ಅನ್ನುವ ಸಮಾಜವನ್ನು ಕಟ್ಟಬೇಕಾದರೆ ಈ ಮನೋರಂಜನೆಯ ಸಾಹಿತ್ಯವು ಉಪಯೋಗಕ್ಕೆ ಬರಲಾರದು. ಎ. ಈ. ಅವರು ಕೇಳಿದ ಮೂಲಪ್ರಶ್ನೆಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ("What relation have Politics of time to a Politics of Eternity? When shall Right have its appropriate might?") ವರ್ತಮಾನದ ರಾಜ್ಯಶಾಸ್ತ್ರಕ್ಕೂ ಚಿರಂತನ ಸಮಾಜ ವ್ಯವಸ್ಥೆಗೂ ಇರುವ ಸಂಬಂಧವೇನು? ಸತ್ಯಕ್ಕೆ ಅದರ ಪ್ರಮಾಣದ ಶಕ್ತಿ ಬರುವುದು ಯಾವಾಗ? ಮೊದಲಿನಿಂದಲೂ ಮಾನವ ಕುಲ ಈ ಪ್ರಶ್ನೆಯನ್ನು ಕೇಳುತ್ತಿದೆ. ಚರಿತ್ರೆಯ ಪಾಠವೇ ಇದು.

"ಬಿತ್ತಿದರೆ ಬಿತ್ತು ಅದು ಮುತ್ತು ಚಿಕ್ಕಿಯ ಕಾಳು" ಎಂದು ಹಾಡಿದ್ದಾರೆ ಕವಿವರ ಬೇಂದ್ರೆ. ಸಣ್ಣ ಕಲ್ಪನೆಗಳಿಗೆ ಸೋಲುವುದು ಬೇಡ. ವ್ಯಕ್ತಿಯು ಶ್ರೇಷ್ಠ ವಿಚಾರಗಳ ಸಂಸ್ಕಾರವನ್ನು ಮನಸ್ಸಿಗೂ ಹೃದಯಕ್ಕೂ ತುಂಬಿಕೊಂಡಾಗ ಸಮಾಜವು ಪರಿವರ್ತಿತವಾಗುತ್ತದೆ. ರಾಜಸಿಕ ಆಕಾಂಕ್ಷೆಗಳುಳ್ಳ ವ್ಯಕ್ತಿಗಳ ಸಮಾಜವು ಶಾಂತಿ ಸಮಾಜವಾಗಲಾರದು. ಮಾನವ ಸ್ವಭಾವದಲ್ಲಿ ಕ್ರಾಂತಿಯಾದಾಗ ಸಂಸ್ಕೃತಿಯ ರಕ್ಷಣೆಯು ಸಾಧ್ಯ. ಈ ಮಾರ್ಪಾಟಿನ ಕ್ರಮವನ್ನು ಸಾಹಿತ್ಯವು ಬಯಸುವವರಿಗೆ ಕೊಡಬಲ್ಲದು. ಶ್ರೇಷ್ಠ ಸಾಹಿತ್ಯದ ಗುರಿ ಎರಡು— ವ್ಯಕ್ತಿತ್ವದ ಊರ್ಧ್ವಮುಖ ಕ್ರಾಂತಿ ಹಾಗೂ ಆದರ್ಶಪ್ರಿಯರಿಗೆ ಮಾರ್ಗದರ್ಶನ.

"ಹಿಂದಿನ ಸಾಹಿತ್ಯದಲ್ಲೇ ಈ ಉಪಾಸನೆ ಇಲ್ಲವೆ?" ಎನ್ನಬಹುದು. ಆದರೆ ಈಗ ಪ್ರಾಚೀನ ಸಾಹಿತ್ಯಾಭ್ಯಾಸವು ಕಠಿಣವಾಗಿದೆ. ಆದರ ಮೂಲ ಮೌಲ್ಯಗಳನ್ನು ನೆಲೆಗೊಳಿಸುವ ಕಾರ್ಯ ಸಾಹಿತಿಯದು. ಒಂದು ಸುಂದರತಮ ಪ್ರಕೃತಿ ದೃಶ್ಯದಲ್ಲಿ ತಲ್ಲೀನನಾದ ಕವಿ ಹಾಡಿದಾಗ ಎಲ್ಲ ಕಾಲಕ್ಕೂ ಅರ್ಥವಾಗುವ ಕಾವ್ಯವಾಗಬಹುದು. ಹಚ್ಚ ಹಸುರಿನ ಮೈಸಿರಿಯಲ್ಲಿ ಪ್ರಕೃತಿಯನ್ನು ಕಂಡು ಮೈ ಮರೆತು Annhilating all thought on a green plot in green shade ಎಂದು ಹಾಡಿದಾಗ ಎಲ್ಲ ಕಾಲಕ್ಕೂ ಅದು ಅರ್ಥವಾಗುತ್ತದೆ. ದೇದೀಪ್ಯಮಾನ ನಕ್ಷತ್ರಗಳಿಂದ ತುಂಬಿದ ರಾತ್ರಿಯಲ್ಲಿ ಆಕಾಶವನ್ನೂ ಕ್ಷಿತಿಜವನ್ನೂ ಕಂಡು 'ರೇಡಿಯಂ ಕೈಗಡಿಯಾರದಂತಿದೆ" ಎಂದಾಗ ಅವನ ಕಲ್ಪನೆಗೆ ಆಧುನಿಕ ಕಾಲದ ಹಿನ್ನೆಲೆ ಅಗತ್ಯವಾಗುತ್ತದೆ. ನಿಸರ್ಗದ ಸೌಂದರ್ಯವು ಹೊಸ ಮಾತಿನಲ್ಲಿ ಮೂಡಿ ಬರಬಹುದು. ಈ ಚಮತ್ಕಾರವು ಶ್ಲಾಘನೀಯ. ಈ ಕ್ರಾಂತಿ ಸಾಹಿತ್ಯದ ಗುಣ. ನಮ್ಮ ಸಮಾಜದಲ್ಲಿ ನಿರಕ್ಷರಿಗಳು ಬಹಳ ಅನ್ನುವ ಕಾರಣದಿಂದ ಕಾವ್ಯದ ಗುಣವು ಕುಂಠಿತವಾಗಬಾರದು. ಯಾರಿಗಾದರೂ ಉದ್ದಿಶ್ಯ ಪಟ್ಟು ಕಾವ್ಯವು ತನ್ನ ಗುಣವನ್ನು ಕಳೆದುಕೊಳ್ಳಬಾರದು. ಮನುಷ್ಯನ ವ್ಯಕ್ತಿತ್ವದಲ್ಲಿ ಸೂಕ್ಷ್ಮತೆ ಎಷ್ಟು ಹೆಚ್ಚುತ್ತದೋ ಅಷ್ಟೇ ಸುಂದರಬಾಳು. ತನ್ನ ಆತ್ಮ ಪರೀಕ್ಷೆಯಿಂದ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ಕಟ್ಟಬೇಕು. ಇಂದಿನ ಬಾಳಿನಲ್ಲಿ ಹೃದಯಗಳ ಮಿಳನವಿಲ್ಲದ ಕೇವಲ ಸಂಪರ್ಕವನ್ನು ಮಾತ್ರ ಕಾಣುತ್ತಿದ್ದೇವೆ. ಶ್ರದ್ಧೆಯಿಲ್ಲದ ಅಂತಃಕರಣ ಶೂನ್ಯವಾದ ರೀತಿಯಲ್ಲಿ ಸಾಗುತ್ತಿದ್ದೇವೆ. ಸಾಹಿತ್ಯ ಕೃತಿ ಮಾನವಹೃದಯದ ಪ್ರತೀಕವಾಗಬೇಕು. ವ್ಯಕ್ತಿತ್ವದ ಸಾಧನೆ ಸಾಕ್ಷಾತ್ಕಾರಗಳ ರೀತಿಯಲ್ಲಿ ಶ್ರೇಷ್ಠ ಸಾಹಿತ್ಯದ ರುಚಿ. ಪ್ರತಿಯೊಬ್ಬನೂ ತನ್ನನ್ನು ತಾನು ಕಂಡುಕೊಂಡಾಗ ಅದರ ಸಫಲತೆ. ಅವನ ಮೂಲ ಒಲವು ಸಾಹಿತ್ಯದಲ್ಲಿ ಅಭಿವ್ಯಕ್ತವಾದಾಗ ತೃಪ್ತಿ. ಯಾವ ಸಮಾಜದಲ್ಲಿ ಇಂತಹ ತೃಪ್ತಿ ವ್ಯಕ್ತಿಗಳಿಗೆ ಲಭಿಸುವುದೋ ಅದೇ ಆದರ್ಶ ಸಮಾಜ; ಒಬ್ಬೊಬ್ಬರದು ಒಂದೊಂದು ರೀತಿಯಿರಬಹುದು. ಒಬ್ಬನ ಒಲವು ಶಬ್ದ ಉಲ್ಲಾಸದಲ್ಲಿ, ಇನ್ನೊಬ್ಬನದು ಶಬ್ದ ಸಂಯಮ. ನಿಸರ್ಗದಲ್ಲಿ ದೈವಿಕತೆಯನ್ನು ಕಾಣುವ ದೃಷ್ಟಿ ಒಬ್ಬನದಾದರೆ, ಬಡತನದಲ್ಲಿ ಧ್ಯೇಯವಾದಿಯಾಗಿ ಬಾಳುವ ಧೀರವ್ಯಕ್ತಿಯಲ್ಲಿ ಇನ್ನೊಬ್ಬ ದೈವಿಕತೆಯನ್ನು ಕಾಣುತ್ತಾನೆ. ಸಂಘರ್ಷಣೆಯಲ್ಲೇ ಅಭಿವ್ಯಕ್ತವಾಗುವ ದೈವಿಕಶಕ್ತಿ ಮೂರನೆಯವನ ಭಾಗಕ್ಕೆ ಸಿಗುತ್ತದೆ. ಅಭ್ಯಾಸದ ಆಕಾಂಕ್ಷೆ ಇರುವಾಗ ಅದರ ದಾರಿ ಸೌಂದರ್ಯೋಪಾಸನೆಯಲ್ಲೋ ಕರ್ಮ ಕುಶಲತೆಯ ಹಾದಿಯಲ್ಲೋ ಉದ್ದೀಪನೆಯನ್ನು ಪಡೆಯಬಹುದು. ನಿರಂಕುಶ ಸಮಾಜದಲ್ಲಿ ನಾವಿಂದು ಹೊಸ ಶ್ರದ್ಧೆಯೊಂದನ್ನು ಬೆಳಸಬೇಕಾಗಿದೆ. ಪಾಶ್ಚಿಮಾತ್ಯರ ಬುದ್ಧಿಯ ಹದನದ ಜೊತೆಗೆ ಶ್ರದ್ಧೆ ಬೆಳೆಯಬೇಕು. ಬುದ್ಧಿ ಒಂದು ನಿಶಿತ ಅಸ್ತ್ರ. ಅದನ್ನು ಹೇಗೆ ಉಪಯೋಗಿಸಬೇಕೆಂಬುದಕ್ಕೆ ಮಾರ್ಗದರ್ಶನ ಮಾಡುವುದು ಶ್ರದ್ಧೆ. ಮಾನವ ಕುಲವು ಶಾಂತಿ ಸಮಾಜದ ಮೂಲ ಮೌಲ್ಯಗಳಾದ ಸತ್ಯ ಸೌಂದರ್ಯ ಮತ್ತು ಆನಂದ ಇವುಗಳಲ್ಲಿ ಅಪಾರಶ್ರದ್ಧೆ ಬೆಳೆಸಿಕೊಳ್ಳುವ ಕಾಲವು ಬಂದಿದೆ. ಸಾಹಿತಿಯು ಈ ಮಾರ್ಗದಲ್ಲಿ ಮುನ್ನಡೆಯಬೇಕು.

—"ನಾ"

ಕಾಳಿದಾಸ ಮಹಾಕವಿಯ ಜೀವಿತ ಸಮಸ್ಯೆಗಳು

[೧]

ಶ್ರೀ ಟಿ. ವಿ. ವೆಂಕಟಾಚಲಶಾಸ್ತ್ರಿ, ಬಿ.ಎ., ಆನರ್ಸ್.

'ಸಮಸ್ಯೆ'— ಎನ್ನುವ ಪದವನ್ನು ಈಚೆಗೆ "ಪ್ರಬಲವಾದ ತೊಡಕು" ಎಂಬರ್ಥದಲ್ಲಿ ಬಳಸುತ್ತಿದ್ದಾರೆ. ಪೂರ್ವದಲ್ಲಿ ಇದು "ಪರೀಕ್ಷಾರ್ಥವಾಗಿ ಕೊಟ್ಟ ಪದ್ಯಪಾದ" ಎಂಬರ್ಥದಲ್ಲಿ ಬಳಸುತ್ತಿದ್ದರು. ಈ ದಿನದ ತೆಲುಗು ವಾರ್ತಾ ಪತ್ರಿಕೆಗಳ ಪರಿಭಾಷೆಯಲ್ಲಿ ಇದರರ್ಥ ಪೂರ್ತಿಯಾಗಿ ಬದಲಾವಣೆಯಾಗಿದೆ. ಆರ್ಥಿಕ ಸಮಸ್ಯೆ, ಸಾಂಘಿಕ ಸಮಸ್ಯೆ—ಮುಂತಾದ ಪದಗಳಲ್ಲಿ ಈ ಅರ್ಥಪರಿಣಾಮ ಇನ್ನೂ ಚೆನ್ನಾಗಿ ಸ್ಪಷ್ಟವಾಗಿ ಕಂಡುಬರುತ್ತಿದೆ. ವ್ಯಾವಹಾರಿಕ ಸಂಪ್ರದಾಯವನ್ನು ಅನುಸರಿಸಿ ಈ ಪದವನ್ನು ಈ ಅರ್ಥದಲ್ಲಿಯೇ ಉಪಯೋಗಿಸುತ್ತೇನೆ. ಕಾಳಿದಾಸನ ಕವಿತೆಯಲ್ಲಿ ಈ ಬಗೆಯ ಸಮಸ್ಯೆಗಳೇನಾದರೂ ಇವೆಯೋ ನೋಡೋಣ.

ಕವಿಗಳಾರೂ ತಮ್ಮ ದೇಶಕಾಲ ಪರಿಸ್ಥಿತಿಗಳನ್ನು ದಾಟಿಹೋಗಿಲ್ಲವೆಂದೂ, ಈ ಪರಿಸ್ಥಿತಿಗಳಿಗೂ ಇವರ ರಚನೆಗಳಿಗೂ ಏನೋ ಒಂದು ವಿಧವಾದ ಸಂಬಂಧ ಇದ್ದೇ ಇರುತ್ತದೆಂದು ಕೆಲವರು ಸಾಹಿತ್ಯ ವಿಮರ್ಶಕರು ಹೇಳುತ್ತಾರೆ. ಇದು ಬಹಳಮಟ್ಟಿಗೆ ನಿಜ. ಆದರೆ ಈ ದೇಶಕಾಲ ಪರಿಸ್ಥಿತಿಗಳ ಅವಗಾಹನೆಯಲ್ಲೂ, ಇವುಗಳಿಂದ ಹೊರಪಡುವ ಸಮಸ್ಯೆಗಳ ಸಮನ್ವಯದಲ್ಲೂ, ಅನೇಕ ಅಂತರಗಳಿವೆ. ಒಬ್ಬ ಕವಿ ತನ್ನ ಸಮಕಾಲೀನ ಸಮಸ್ಯೆಗಳನ್ನು ಒಂದು ತಾತ್ಕಾಲಿಕವಾದ ಸಂಕುಚಿತ ದೃಕ್ಪಥದೊಡನೆ ಪರಿಷ್ಕರಿಸಬಹುದು; ಇನ್ನೊಬ್ಬ ಕವಿ ಆ ಸಮಸ್ಯೆಗಳೆಲ್ಲವನ್ನೂ ಚೆನ್ನಾಗಿ ವಿಶಾಲದೃಷ್ಟಿಯಿಂದ ಪರಿಶೀಲಿಸಿ, ಇನ್ನೊಂದು ವಿಧವಾಗಿ ಸಮನ್ವಯಿಸಿ, ಪರಿಷ್ಕಾರಮಾರ್ಗವನ್ನು ಸೂಕ್ಷ್ಮವಾಗಿ ಸ್ಫುರಿಸುವಂತೆ ಮಾಡಬಹುದು. ೧

ಹಾಗಲ್ಲದೆ, ಕೇವಲ ನೆಲ ಸೋಂಕದ ವ್ಯಾಯಾಮ ರೀತಿಯಂಥದು ಸಾರಸ್ವತ ಮಾರ್ಗದಲ್ಲಿ ಸಾಧ್ಯವಿಲ್ಲ. ಒಂದುವೇಳೆ, ತಿಳಿದೋ ತಿಳಿಯದೆಯೋ, ರಚಯಿತೃಗಳಾರಾದರೂ ಇಂಥ ವ್ಯಾಯಮವನ್ನು ಪ್ರಾರಂಭಿಸಿದರೂ—ಇದಕ್ಕೆ ಸಾರಸ್ವತ ಗೌರವ ಸಲ್ಲದು; ನಿಜವಾಗಿ ಪಲಾಯನವಾದ (Escapism) ವಾಗಲೀ, 'ಕಲೆಗಾಗಿಯೇ ಕಲೆ' (Art for Art's Sake) ಎಂಬ ವಾದವಾಗಲೀ, ನಮ್ಮ ಸಂಸ್ಕೃತ ಸಾರಸ್ವತ ಸಂಪ್ರದಾಯದಲ್ಲಿ ಇಲ್ಲವೇ ಇಲ್ಲ. ಇಂಥ ಸರಕೆಲ್ಲ ಈಚಿನ ಪಾಶ್ಚಾತ್ಯ ಸಾಹಿತ್ಯದಿಂದ ನಮ್ಮ ದೇಶಕ್ಕೆ ಇಳಿದು ಬಂದಿತು. ಆ ದೇಶದಲ್ಲಿ ಇಂಥ ವಾದಗಳು ಹೊರಪಡಲು ಅನೇಕ ಕಾರಣಗಳಿವೆ. ಆದರೆ ಈಗ ಅದು ನಮಗೆ ಅಪ್ರಸ್ತುತ.

"ಕಾಳಿದಾಸ ಕವಿ ರಸಮಯ ಕವಿತಾ ಪ್ರತಿನಿಧಿ" ಎನ್ನುವ ಅರವಿಂದರ ಅಭಿಪ್ರಾಯವನ್ನು ಈ ಲೇಖನಗಳಲ್ಲಿ ಇದಕ್ಕೆ ಮೊದಲೇ ಬರೆದೆನು. (ಇಲ್ಲಿಗೆ ಇದು ಅನ್ವಯಿಸದು). ವಾಲ್ಮೀಕಿಯ ಕವಿತೆ ಧರ್ಮಪ್ರಧಾನವಾದುದೆಂದೂ, ವ್ಯಾಸನ ಕವಿತೆ—ಮೇಧಾಪ್ರಧಾನವಾದುದೆಂದೂ, ಕಾಳಿದಾಸನ ಕವಿತೆ ರಸಪ್ರಧಾನವಾದುದೆಂದೂ ಅರವಿಂದರ ಅಭಿಪ್ರಾಯ. ಕಾಳಿದಾಸನ ಕವಿತ್ವವನ್ನು ಕುರಿತು ಅವರು Aesthetic ಎನ್ನುವ ಪದವನ್ನು ಬಳಸಿದ್ದಾರೆ. "ರಸಮಯ" ಎನ್ನುವ ಪದ ಈ ಇಂಗ್ಲೀಷ್ ಪದಕ್ಕೆ ಸರಿಹೋಗುತ್ತದೆ. ಆದರೂ ಈ ಇಂಗ್ಲೀಷ್ ಪದಕ್ಕೆ ಪಾಶ್ಚಾತ್ಯ ಸೌಂದರ್ಯ ಸಿದ್ಧಾಂತಗಳಲ್ಲಿ ಅನೇಕ ಅರ್ಥಚ್ಛಾಯೆಗಳುಂಟಾಗುತ್ತಾ ಬಂದಿವೆ. 'ರಸ' ಪದಕ್ಕೆ ಕಾವ್ಯಾನುಭೂತಿಜನ್ಯವಾದ 'ಆನಂದ' ವೆಂದರ್ಥ. ನಮ್ಮ ಆ ಅಲಂಕಾರಿಕರು ಆನಂದಾನುಭೂತಿಯು ಪ್ರಧಾನ ಕಾವ್ಯಪ್ರಯೋಜನವೆಂದು ಒತ್ತಿ ಹೇಳಿದರೂ, ಇವುಗಳ ನಿರ್ವಚನದಲ್ಲಿ ಸಾಂಘಿಕ ಪ್ರಯೋಜನವಾದ ಧರ್ಮಸೂತ್ರವು ಅಂತರ್ಗರ್ಭಿತವಾಗಿಯೇ ಇದೆ. ಅಲಂಕಾರ ಶಾಸ್ತ್ರರಚನಾ ಕಾಲದಲ್ಲಿ ಧರ್ಮಾಧರ್ಮಗಳನ್ನು ಕುರಿತು, ವಿಧಿ ನಿಷೇಧಗಳನ್ನು ಕುರಿತು ಈ ಹೊತ್ತಿನವರಿಗಿರುವ ಅನುಮಾನಗಳಾಗಲೀ, ಅಭಿಪ್ರಾಯ ಭೇದಗಳಾಗಲೀ ಇರುವಂಥವಲ್ಲ. ಒಂದು ಸಾಧಾರಣವಾದ ಧರ್ಮಸೂತ್ರದ ಸರಣಿಯನ್ನನುಸರಿಸಿ ಆ ಕಾಲದಲ್ಲಿ ಎಲ್ಲರೂ ಆಲೋಚಿಸುವವರಾಗಿದ್ದರು. ಆ ಕಾರಣದಿಂದಲೇ, ಧರ್ಮಾಧರ್ಮ ದೃಷ್ಟ್ಯಾ ರಸಾನುಭೂತಿಯಲ್ಲಿ ಬರುವ ಮಾರ್ಪಾಟುಗ

ಳನ್ನು ಕುರಿತ ಚರ್ಚೆ ಅಲಂಕಾರ ಶಾಸ್ತ್ರದಲ್ಲಿ ಅಷ್ಟು ಪ್ರಧಾನವಾಗಿ ಕಾಣಬರದು.

ಆದರೆ ಒಂದೊಂದು ಸಮಯದಲ್ಲಿ ಈ ಧರ್ಮಾಚರಣೆಯಲ್ಲಿ ಕೆಲವು ಲೋಪಗಳು ಸಂಭವಿಸುವುದೂ, ಆಯಾ ಕಾಲಗಳಲ್ಲಿನ ಕಾವ್ಯಗಳಲ್ಲಿ ಆ ಧಾರ್ಮಿಕದೃಷ್ಟಿ ಸೂಕ್ಷ್ಮವಾಗಿ ಬಂದಿರುವುದೂ, ಸಂಸ್ಕೃತ ಸಾಹಿತ್ಯದಲ್ಲಿಯೂ ಕೂಡ ಅಲ್ಲಲ್ಲಿ ಸಕೃತ್ತಾಗಿ ಕಾಣಿಸುತ್ತಿದೆ. ಕಾಳಿದಾಸನ ಕವಿತೆ ಪ್ರಧಾನತಃ ರಸಮಯವೇ ಆದರೂ ಇವುಗಳಲ್ಲಿ ಧರ್ಮಸಮಸ್ಯೆ ವ್ಯಂಗ್ಯವಾಗಿ ಸ್ಫುರಿಸುತ್ತಲೇ ಇರುವುದು.

ಕಾಳಿದಾಸನ ಕೃತಿಗಳೆಲ್ಲದರಲ್ಲೂ — ತತ್ರಾಪಿ — ರಘುವಂಶ ಕುಮಾರಸಂಭವಗಳಲ್ಲಿ, ವಿಕ್ರಮೋರ್ವಶೀಯ — ಅಭಿಜ್ಞಾನ ಶಾಕುಂತಲಗಳಲ್ಲಿ ಮಾತ್ರವೇ ಈ ಸಮಸ್ಯಾಧ್ವನಿಯು ಚೆನ್ನಾಗಿ ಕೇಳಿಬರುತ್ತಿದೆ. ಕಾಳಿದಾಸನ ಕೃತಿಗಳಲ್ಲಿ ಕಾಣುವ ಸಮಸ್ಯೆಗಳನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. ಒಂದು — ಜೀವನ ಭೋಗ ಸಮಸ್ಯೆ; ಎರಡು — ಪ್ರೇಮಭಾವ ಸಮಸ್ಯೆ. ಈ ಎರಡೂ ಕಾಳಿದಾಸನ ಕೃತಿಗಳಲ್ಲಿ ಪರಸ್ಪರ ಸಮ್ಮಿಳಿತವಾಗಿ ಕಾಣಬಹುದಾದರೂ, ಒಂದೊಂದು ಕಾವ್ಯದಲ್ಲಿ ಇವುಗಳಲ್ಲಿ ಒಂದೊಂದು ಪ್ರಸ್ಫುಟವಾಗಿ ಧ್ವನಿಸಿರುವುದರಿಂದ, ಇವೆರಡು ಸಮಸ್ಯೆಗಳನ್ನೂ ವರ್ಗೀಕರಿಸುತ್ತಿದ್ದೇನೆ.

ಒಟ್ಟಿನಲ್ಲಿ — ಕಾಳಿದಾಸನ ಕಾವ್ಯಗಳೆಲ್ಲದರಲ್ಲಿಯೂ, — ಅವುಗಳಲ್ಲಿ ರಘುವಂಶ ಶಾಕುಂತಲಗಳಲ್ಲಿ — ಈ ಜೀವಿತ ಭೋಗಸಮಸ್ಯೆ ಮತ್ತಷ್ಟು ಸ್ಪಷ್ಟವಾಗಿ ಕಂಡುಬರುತ್ತದೆ. ಇಂದ್ರಿಯ ಗೋಚರವಾದ ಸೌಂದರ್ಯವು ಕಾಳಿದಾಸನ ಕವಿತೆಯಲ್ಲಿ ಪ್ರತಿಫಲಿಸಿದಷ್ಟು, ಮಹೋಜ್ವಲವಾಗಿ ಮತ್ತಿತರ ಸಂಸ್ಕೃತ ಕವಿಗಳಲ್ಲಿ ಎಲ್ಲಿಯೂ ಸ್ಫುರಿಸದು. ಇದು ಈ ಕವಿತೆಯಲ್ಲಿರುವ ಪ್ರತ್ಯೇಕ ಗುಣ.

ರಘುವಂಶದಲ್ಲಿ ಇಂದುಮತಿಯ ಮರಣಾನಂತರದಲ್ಲಿ, ವಸಿಷ್ಠನು ಅಜನನ್ನು ಸಂತವಿಸುವ ಸಮಯದಲ್ಲಿ, ಶರೀರಧಾರಿಗಳಿಗೆ ಮರಣವೇ ಪ್ರಕೃತಿಯೆಂದೂ, ಜೀವಿತವೇ ವಿಕೃತಿಯೆಂದೂ ಪ್ರಬೋಧಿಸುತ್ತಾನೆ. ಆನಂತರ — "ಕ್ಷಣವಾದರೂ ಉಸಿರಾಡುತ್ತ ಜೀವಿಸಲು ಸಾಧ್ಯವಾಗುವ ವ್ಯಕ್ತಿ ತುಂಬ ಅದೃಷ್ಟವಂತನಲ್ಲವೇ" — ಎಂದು ವಸಿಷ್ಠನು ಅಜನೊಡನೆ ಹೇಳಿ ಒಕ್ಕಣಿಸುತ್ತಿದ್ದಾನೆ. ಇಂದುಮತಿಯ ಮರಣ ಕಾರಣದಿಂದ ಅಜನನ್ನು ಕುರಿತು ವಸಿಷ್ಠನು ಹೇಳಿದ ಈ ಸೂಕ್ತಿಗಳು ತುಂಬ ಸಂದರ್ಭೋಚಿತವಾಗಿ ಸರಿಹೋಗಿದೆ. ಆದರೆ ಸೂಕ್ಷ್ಮವಾಗಿ ಕಾಳಿದಾಸನ ಕವಿತೆಯನ್ನು ಪರಿಶೀಲಿಸಿದವರಿಗೆ ಈ ಎರಡನೇ ವಾಕ್ಯವು ವಸಿಷ್ಠಸೂಕ್ತಿಯಾಗಿಯೇ ಅಲ್ಲದೆ ಕವಿಹೃದಯಾಂತರ್ಗತ ಭಾವವಾಗಿ ಸ್ಫುರಿಸಿಯೇ ತೀರುತ್ತದೆ. ನಿಜವಾಗಿ ಈ ವಾಕ್ಯವನ್ನು ಕಾಳಿದಾಸ ಕವಿಗೆ ಜೀವಿತಸೌಂದರ್ಯಾನುಭೂತಿಯ ಮೇಲಿರುವ ಮಮಕಾರವೆಲ್ಲಕ್ಕೂ ಪ್ರತಿನಿಧಿಯಾಗಿ ತೆಗೆದುಕೊಳ್ಳಬಹುದು. ಆದರೆ — ಮರಣವೇ ಜೀವಿತಪ್ರಕೃತಿಯಾದುದರಿಂದ ಹಿಂದು ಮುಂದು ನೋಡದೆಯೇ ಭೋಗಲಾಲಸೆಯಲ್ಲಿ ಮೈಮರೆತು ಹೋಗುವುದೇ ಕಾಳಿದಾಸನ ಅಭಿಪ್ರಾಯವೆಂದು ತಿಳಿಯಬಾರದು. ನಿಜವಾಗಿ ಇಂಥ ಉನ್ಮತ್ತಲಾಲಸೆಯಿಂದುಂಟಾಗುವ ತೊಂದರೆಗಳೆಲ್ಲವನ್ನೂ, ಈ ಮಹಾಕವಿ ಸಾಕಲ್ಯವಾಗಿ ಪರಿಶೀಲಿಸಿದವನೇ; — ಆದ್ದರಿಂದಲೇ ಧರ್ಮಪರರಾದ ರಘುವಂಶೀಯರಲ್ಲಿ ಉದಯಿಸಿದ ಅಗ್ನಿವರ್ಣನಲ್ಲಿ ಈ ಉನ್ಮತ್ತ ಭೋಗಲಾಲಸೆಯ ಕಾರಣದಿಂದುಂಟಾದ ದುಷ್ಫಲಿತಗಳೆಲ್ಲವುಗಳನ್ನೂ ವರ್ಣಿಸದೆಯೇ ಕಾಳಿದಾಸನು ತನ್ನ ಕಾವ್ಯವನ್ನು ಸಮಾಪ್ತಿಮಾಡಲೇ ಇಲ್ಲ. ಈ ರೀತಿಯಾಗಿ ಅಗ್ನಿವರ್ಣನಲ್ಲಿ ಉಂಟಾದ ದುಷ್ಫಲಿತಗಳಿಂದ ಕವಿ ಭೋಗಲಾಲಸಾದಿ ದೋಷಗಳು ಪಾಠಕರ ಹೃದಯಗಳಲ್ಲಿ ಅಚ್ಚೊತ್ತುವಂತೆ ಧ್ವನಿಸುವಂತೆ ಮಾಡಿದ್ದಾನೆ. ಅಷ್ಟೇ ಅಲ್ಲದೆ ಕವಿಯು ಕಂಠೋಕ್ತಿಯಾಗಿ ಈ ವಿಷಯವನ್ನು ಖಂಡಿಸಲಿಲ್ಲ. ಒಂದು ಕಡೆಯಲ್ಲಿ ಮಾತ್ರ — "ಸ್ವಾದುಭಿಸ್ತು ವಿಷಯೈರ್ಹತಸ್ತತೋ ದುಃಖಮಿಂದ್ರಿಯಗಣೋ ನಿವಾರ್ಯತೇ" ಎಂದು ಮಾತ್ರ ಹೇಳುತ್ತಾನೆ. "ಸ್ವಾದುಗಳಾದ ವಿಷಯಗಳಿಂದ ಆಕರ್ಷಿತವಾದ ಇಂದ್ರಿಯ ಸಮೂಹವನ್ನು ಪುನಃ ಹಿಂತಿರುಗಿಸುವುದು ತುಂಬ ದುಷ್ಕರ" ಎಂದಿದರ ಅರ್ಥ. ಇಷ್ಟು ತಟಸ್ಥವಾಗಿ ಹೇಳಿದ ಕವಿಯ ಸ್ವೀಯೋಕ್ತಿಯನ್ನು ಹಿಡಿದು, ಜೀವಿತ ಸೌಂದರ್ಯಾನುಭೂತಿಯ ಮೇಲೆ ಕವಿಗಿರುವ ಆಸಕ್ತಿ, ಅನಾಸಕ್ತಿಗಳು ಮನೋಹರವಾದ ಸಮ್ಮೇಳನದಿಂದ ಪಾಠಕರಿಗೆ ಸ್ಫುರಿಸುತ್ತಲಿವೆ.

"ಅಭಿಜ್ಞಾನ ಶಾಕುಂತಲ"ದಲ್ಲಿ ಈ ಸಮಸ್ಯೆ ಮತ್ತಷ್ಟು ಸ್ಪಷ್ಟವಾಗಿ ಕಂಡುಬರುತ್ತಿದೆ. ಈ ನಾಟಕದಲ್ಲಿ ಪಾಠಕರಿಗೆ ಅನೇಕ ವಿಧವಾಗಿ ವ್ಯಂಗ್ಯಗಳು ಧ್ವನಿಸುತ್ತವೆ. ಒಂದು ವಿಧವಾಗಿ ನೋಡಿದರೆ ಇದು ಭೋಗಪರನಾದ ದುಷ್ಯಂತನ ಜೀವಿತಕ್ಕೂ, ಅನಾಸಕ್ತ

ರಾದ ಅರಣ್ಯವಾಸಿಗಳ ಜೀವಿತಕ್ಕೂ ಇರುವ ತಾರತಮ್ಯವನ್ನು ಚಿತ್ರಿಸುವ ರೂಪಕದ ಹಾಗೆ ಕಂಡುಬರುತ್ತದೆ. ಶಕುಂತಲೆ ತಾಪಸ ಕನ್ಯೆ. ತಾಪಸಧರ್ಮಾಚರಣೆಯು ಈಕೆ ಇಡುವ ಪ್ರತಿ ಅಡಿಯಲ್ಲಿಯೂ ಧ್ವನಿಸುತ್ತಿರುತ್ತದೆ. ಇನ್ನು ದುಷ್ಯಂತನ ಪಂಥವೇ ಬೇರೆ. ಇವನು ಬಹು ಭಾರ್ಯಾಸಕ್ತನು. ಅಂತಃಪುರದಲ್ಲಿ, ಇವನಿಂದ ಒಂದುಸಾರಿ ಅತ್ಯಾದರಣೆಗೊಂಡು, ಆ ತರುವಾಯ ಉಪೇಕ್ಷಿತಳಾದ ಹಂಸಪದಿಕೆ ವ್ಯಂಗ್ಯವಾಗಿ ಇವನನ್ನು ಕುರಿತು ಹಾಡಿದ ಹಾಡಿನಿಂದಲೇ ಇವನ ಭೋಗಪರಾಯಣತೆ ಪಾಠಕರಿಗೆ ಚೆನ್ನಾಗಿ ತಿಳಿದುಹೋಗುತ್ತದೆ.

ವ್ಯಾಸ ಭಾರತದಲ್ಲಿನ ದುಷ್ಯಂತನಿಗೂ, ಕಾಳಿದಾಸ—ಶಾಕುಂತಲದಲ್ಲಿನ ದುಷ್ಯಂತನಿಗೂ ಎಲ್ಲಿಯೂ ಹೋಲಿಕೆ ಕಂಡುಬರದು. ಭಾರತದ ದುಷ್ಯಂತನು ಆಶ್ರಮದಿಂದ ತಿರುಗಿಬಂದ ತರುವಾಯ, ಮುಖ್ಯವಾಗಿ ಶಕುಂತಲೆಯ ವಿಚಾರವನ್ನೇ ಮರೆತುಬಿಡುತ್ತಾನೆ. ಆದರೂ, ಅಶರೀರವಾಣಿಯು ಆತನಿಗೆ ಆಸರೆಯಾಗಿ ನಿಂತು "ಶಕುಂತಲೆಯು ನಿನ್ನ ಭಾರ್ಯೆಯಲ್ಲವೇ!" ಎಂದು ಎಚ್ಚರಿಸುವುದು. ಪ್ರಭುಗಳು ಅಡ್ಡದಾರಿ ಹಿಡಿದಾಗ ಅಶರೀರವಾಣಿ ಅವರೆನ್ನಚ್ಚರಿಸುವುದೂ, ಮತ್ತೆ ಅವರು ಸರಿಯಾದ ಮಾರ್ಗದಲ್ಲಿ ಬಂದು ಬೀಳುವುದೂ, ಆ ಕಾಲದಲ್ಲಿ ಒಂದು ರೂಢಿಯಾಗಿದ್ದಿರಬಹುದು!

ಆದರೆ ಕಾಳಿದಾಸನು ಮಾತ್ರ ದುರ್ವಾಸ ಶಾಪವೃತ್ತಾಂತವೊಂದನ್ನು ಕಲ್ಪಿಸಿ, ದುಷ್ಯಂತನ ಸ್ವಭಾವಕ್ಕೆ ಬಹಳಮಟ್ಟಿಗೆ ಮೆರಗುಕೊಟ್ಟಿದ್ದಾನೆ. ಆದರೂ ಆತನ ಬಹು ಭಾರ್ಯಾಸಕ್ತಿಗೆ ಮಾತ್ರ ಎಲ್ಲಿಯೂ ಲೋಪ ಬರಲೆಡೆಗುಡಲಿಲ್ಲ. ಪತಿಯು ತಿರಸ್ಕರಿಸಿದರೂ, ತಪಸ್ವಿನಿಯಾಗಿ ಆತನನ್ನೇ ಅನುಸರಿಸುತ್ತ ಕಾಲ ತಳ್ಳಿದ ಶಕುಂತಲೆಯ ಹತ್ತಿರ ನಿಲ್ಲುವಾಗ—ದುಷ್ಯಂತನು ದೀವಿಟಿಗೆಯ ಮುಂದೆ ದೀಪದಂತೆ ತಳಮಳಿಸುತ್ತಾನೆ.— ಈ ವಿಧವಾದ ಶಕುಂತಲಾ ದುಷ್ಯಂತರ ತಾರತಮ್ಯ ಪ್ರದರ್ಶನ ವ್ಯಂಗ್ಯದಿಂದ ಕವಿ ಭೋಗಪರಾಯಣತೆಯಲ್ಲಿರುವ ಲೋಪಗಳನ್ನು ಬೆರಳೆತ್ತಿ ತೋರಿಸುತ್ತಿದ್ದಂತೆಯೇ ಕಂಡುಬರುತ್ತದೆ.

ಅಭಿಜ್ಞಾನ ಶಾಕುಂತಲವನ್ನು ಮತ್ತೊಂದು ವಿಧವಾಗಿ ಕೂಡ ಪರಿಶೀಲಿಸಬಹುದು. ಕಾಳಿದಾಸ ಮಹಾಕವಿಯ ಕಾಲನಿರ್ಣಯವು ಇಲ್ಲಿಯವರೆಗೆ ಸ್ಪಷ್ಟವಾಗಿ ತಿಳಿದು ಬರಲಿಲ್ಲವಾದರೂ, ಈತನು ತನ್ನ ನಿವಾಸ ಭೂಮಿಯು ಸರ್ವಸಂಪತ್ ಸಮೃದ್ಧವಾಗಿದ್ದ ಕಾಲದಲ್ಲಿ ಜನಿಸಿದವನಾಗಿದ್ದಿರಬಹುದೆಂದಾದರೂ ಪಾಠಕರಿಗೆ ಸ್ಪಷ್ಟವಾಗಿಯೇ ತೋರುತ್ತದೆ. ವಿಮರ್ಶಕರನೇಕರು ಗುಪ್ತಸಾಮ್ರಾಜ್ಯವು ಸರ್ವೋಚ್ಚಸ್ಥಿತಿಯಲ್ಲಿದ್ದಾಗ ಕಾಳಿದಾಸ ಕವಿ ಉದ್ಭವಿಸಿರಬಹುದೆಂದು ಹೇಳಿದ್ದಾರೆ:— ಯಾವುದು ಹೇಗಿದ್ದರೂ ಕಾಳಿದಾಸನ ಕವಿತೆಯಲ್ಲಿ, ಭಾರತದೇಶ ಚರಿತ್ರೆಯಲ್ಲಿ, ಸರ್ವಸಮೃದ್ಧವಾದೊಂದು ಸ್ವರ್ಣಯುಗವು ಪ್ರತಿಭವಿಸಿದ ವಿಷಯದಲ್ಲಿ ಅಭಿಪ್ರಾಯ ಭೇದವಿದ್ದಂತೆ ಕಾಣುತ್ತದೆ.

ಆದರೆ ಕಾಳಿದಾಸ ಕವಿ ಆ ಕಾಲದಲ್ಲಿ ಮಿತಿಮೀರಿದ ಭೋಗಾಸಕ್ತಿಯಲ್ಲಿ ವೈಮರೆತ ತಾತ್ಕಾಲಿಕ ನಾಗರಿಕ ಜೀವಿತವನ್ನು ವ್ಯಂಗವಾಗಿ ಅಧಿಕ್ಷೇಪಿಸುತ್ತ ತನ್ನ ಕಾವ್ಯ ನಾಟಕರಚನೆಗುಪಕ್ರಮಿಸಿದಂತೆ ಕಂಡುಬರುತ್ತದೆ. ಅಭಿಜ್ಞಾನ ಶಾಕುಂತಲದಲ್ಲಿ ಆಶ್ರಮ–ನಗರ ಜೀವಿತಗಳ ತಾರತಮ್ಯ ಪರಿಶೀಲನೆ ಚೆನ್ನಾಗಿ ಸೂಕ್ಷ್ಮವಾಗಿ ಸಾಗಿದೆ. ಇದಕ್ಕೆ ಶಕುಂತಲೆಯ ಸಂಗಡ ಹೊರಟುಬಂದ ಕಣ್ವಶಿಷ್ಯರ ಸೂಕ್ತಿಗಳನ್ನಾಧರಿಸಬಹುದು. ಇವರಿಬ್ಬರೂ ಕೇವಲ ಆಶ್ರಮವಾಸಿಗಳು. ಮೊತ್ತಮೊದಲಾಗಿ ಕಣ್ವನ ಆಜ್ಞಾನುಸಾರವಾಗಿಯೇ ಇವರು ದುಷ್ಯಂತನ ನಗರಕ್ಕೆ ಬಂದಂತೆ ಕಾಣುತ್ತಾರೆ. ಇವರಿಬ್ಬರ ಶ್ಲೋಕಗಳು ನಾಗರಿಕ ಜೀವನದಲ್ಲಿರುವ ಭೀಭತ್ಸವನ್ನು ಚೆನ್ನಾಗಿ ವಿವರಿಸುತ್ತವೆ.

"ಮಹಾಭಾಗಃ ಕಾಮಂ ನರಪತಿರಭಿನ್ನಸ್ಥಿತಿರಸೌ
ನ ಕಶ್ಚಿತ್ ವರ್ಣಾನಾಮಪಥಮಪಕೃಷ್ಟೋಽಪಿ ಭಜತೇ
ತಥಾಪೀದಂ ಶಶ್ವತ್ಪರಿಚಿತವಿವಿಕ್ತೇನ ಮನಸಾ
ಜನಾಕೀರ್ಣಂ ಮನ್ಯೇ ಹುತವಹಪರೀತಂ ಗೃಹಮಿವ"

ಇದು ಕಣ್ವಶಿಷ್ಯರಲ್ಲಿ ಮೊದಲಿನವನೆಂದ ಶ್ಲೋಕ. ಇದರ ಅಭಿಪ್ರಾಯವಿದು. "ಈ ನರಪತಿ ಮಹಾನುಭಾವನು. ಇವನು ಒಂದು ಕ್ಷಣವಾದರೂ ಎಚ್ಚರದಪ್ಪದೆ ತನ್ನ ರಾಜಧರ್ಮವನ್ನು ನಿರ್ವಹಿಸುತ್ತಿದ್ದಾನೆ. ವರ್ಣಗಳಲ್ಲಿ ಅಧಮವರ್ಣಸ್ಥರು ಕೂಡ ಕೆಟ್ಟಮಾರ್ಗ ಹಿಡಿಯಲು ಹೋಗುವುದಿಲ್ಲ. ಆದರೂ ವಿವಿಕ್ತ ಮನಸ್ಸಿನಿಂದ ಇದೆಲ್ಲವನ್ನೂ ಪರಿಶೀಲಿಸುತ್ತಿರುವ ನನಗೆ ಈ ಜನಾಕೀರ್ಣವಾದ ನಗರವು ಅಗ್ನಿಸಂಸರ್ಗವಾದ ಭವನದಂತೆ ಭಾಸಿಸುತ್ತದೆ!" ನಗರವು ಅಗ್ನಿಪರೀತವಾದ ಗೃಹದಂತೆ ಇರುವುದೆಂಬ ಈ ಉಪಮಾನದಿಂದ ಕಾಳಿದಾಸನೆಷ್ಟು ಸೂಕ್ಷ್ಮವಾಗಿ ನಾಗರಿಕ ಜೀವನದ

ಭೀಭತ್ಸತೆಯನ್ನು ನಮ್ಮ ಕಣ್ಣಿಗೆ ಕಟ್ಟುತ್ತಿದ್ದಾನೆಯೋ ಊಹಿಸಿಕೊಳ್ಳಬಹುದು.

ಎರಡನೆಯ ಶಿಷ್ಯನೆಂದ ಶ್ಲೋಕ ಕೂಡ ಆಶ್ರಮ ಜೀವಿತಕ್ಕೂ, ನಾಗರಿಕಜೀವಿತಕ್ಕೂ ಇರುವ ತಾರತಮ್ಯವನ್ನು ಸ್ಪಷ್ಟವಾಗಿ ಪ್ರತಿಫಲಿಸುತ್ತಿದೆ.

" ಅಭ್ಯಕ್ತಮಿವ ಸ್ನಾತಃ,
ಶುಚಿರಶುಚಿಮಿವ, ಪ್ರಬುದ್ಧ ಇವ ಸುಪ್ತಮ್
ಬದ್ಧಮಿವ ಸ್ವೈರಗತಿ
ರ್ಜನಮಿಹ ಸುಖಸಂಗಿನಮವೈಮಿ "

ಸ್ನಾನ ಮಾಡಿದವನಿಗೆ ಶರೀರವೆಲ್ಲ ತೈಲದಿಂದ ಲೇಪಿಸಿಕೊಂಡ ವ್ಯಕ್ತಿ, ಶುಚಿಯಾದವನಿಗೆ ಅಶುಚಿಯಾದ ಮನುಷ್ಯ, ಎಚ್ಚರವಾಗಿರುವವನಿಗೆ ನಿದ್ದೆ ಹೋಗುವವನು, ಸ್ವೇಚ್ಛಾವಿಹಾರಿಗೆ ಖೈದಿ—ಕಂಡುಬರುವಂತೆ ನನಗೀ ಸುಖಾಸಕ್ತರಾದ ಜನರು ಕಾಣಬರುತ್ತಿದ್ದಾರೆಂದು ಇದರ ಭಾವ. ಇಲ್ಲಿ ಕವಿ ಆಶ್ರಮವಾಸಿಗಳಾಗಿ ನಿರ್ಲಿಪ್ತರಾದ ಜನರಿಗೂ, ನಾಗರಿಕರಾಗಿ ಸುಖಲಿಪ್ತರಾದ ಜನರಿಗೂ ತಾರತಮ್ಯವನ್ನು ತೋರಿಸುವುದಕ್ಕೆ ನಾಲ್ಕು ಉಪಮಾನಗಳನ್ನು ಉಪಯೋಗಿಸಿದ್ದಾನೆ. ಈ ನಾಲ್ಕು ಉಪಮಾನಗಳನ್ನು ಬಳಸಿರುವುದರಲ್ಲಿ ತುಂಬ ಅಂತರಾರ್ಥವಿದೆ. ಇವು ಸುಖನಿರ್ಲಿಪ್ತರ ಶಾರೀರಿಕ ಮಾನಸಿಕ ಪರಿಸ್ಥಿತಿಗಳನ್ನು ತುಂಬ ಸೂಕ್ಷ್ಮವಾಗಿ ಪ್ರದರ್ಶಿಸುವ ಉಪಮಾನಗಳು. ಇವೆರಡು ಶ್ಲೋಕಗಳೇ ಅಲ್ಲದೆ ಅಖಂಡವಾಗಿ ಅಭಿಜ್ಞಾನ ಶಾಕುಂತಲವೆಲ್ಲ ನಾಗರಕ ಜೀವನದ ಮೇಲೆ ಒಂದು ವ್ಯಂಗ್ಯಾವಹೇಳನವಾಗಿ ತೆಗೆದುಕೊಳ್ಳಬಹುದು.

ಇದಕ್ಕೆ ಮೊದಲು ಕಾಳಿದಾಸನ ಪ್ರಬಂಧಗಳಲ್ಲಿ ಕಾಳಿದಾಸ ಕವಿತೆಯಲ್ಲಿ ಕಂಡುಬರುವ ಅನಾಸಕ್ತಿ, ಜೀವಿತವನ್ನೆದುರುಗೊಳ್ಳದ ವೈರಾಗಿ ಧೋರಣೆಯಲ್ಲವೆಂದೂ, ಇವನ ಜೀವಿತ ಭೋಗಾಸಕ್ತಿಯಲ್ಲಿಯೇ ಅಂತರ್ಲೀನವಾದ ನಿರ್ಲಿಪ್ತತೆ ಕೂಡ ಇರುವುದೆಂದೂ ಸೂಚಿಸಿದ್ದೇನೆ. (ಇಲ್ಲಿಗೆ ಇದು ಅನ್ವಯಿಸದು). ಈ ದೃಷ್ಟಿಯಲ್ಲಿ ಅವಲೋಕಿಸಿದರೇನೆಯೆ ಕಾಳಿದಾಸ ಜೀವಿತ ಸೌಂದರ್ಯಭುಕ್ತಿಯಲ್ಲಿರುವ ಪರಿಪೂರ್ಣತೆ ಚೆನ್ನಾಗಿ ಅವಗಾಹನವಾಗುತ್ತದೆ. ಆದರೆ ಕಾಳಿದಾಸನ ಕವಿತೆಯಲ್ಲಿ ಒಂದು ವೈಚಿತ್ರ್ಯ ಕಂಡುಬರುತ್ತದೆ. ಈ ಕವಿ ತನ್ನ ಕಾಲದಲ್ಲಿರುವ ವಿಶೃಂಖಲ ಭೋಗಾನುಭೂತಿಯಲ್ಲಿರುವ ದೋಷಗಳನ್ನು ವ್ಯಂಗ್ಯವಾಗಿ ಧ್ವನಿಸುತ್ತಿರುತ್ತಾನೆಂದುಕೊಂಡಿದ್ದೇವೆ. ಆದರೂ ಕೇವಲ ವೈರಾಗಿ ಧರ್ಮವನ್ನು ಉಪದೇಶಿಸದೆ ತನ್ನ ಕವಿತೆಯಲ್ಲಿ ಸರ್ವತ್ರ ಜೀವಿತ ಭೋಗ ಸೌಂದರ್ಯವನ್ನು ಪ್ರತಿಫಲಿಸುತ್ತಿರುತ್ತಾನೆ. ಈ ವಿಧವಾದ ರಕ್ತಿ ವಿರಕ್ತಿಗಳ ಸಮದೃಷ್ಟಿ ಸಮನ್ವಯವು ಕಾಳಿದಾಸನಿಗೊಂದು ಅತಿಸೌಂದರ್ಯಾಪಾದನೆಯನ್ನುಂಟುಮಾಡಿದೆ.

ಕಾಳಿದಾಸ ಕವಿತೆಯಲ್ಲಿ ಪ್ರೇಮಭಾವ ಪರಿಶೀಲನೆ, ಅದಕ್ಕೆ ಸಂಬಂಧಿಸಿದ "ಸಮಸ್ಯೆ"ಗಳು ಕೂಡ ಧ್ವನಿಸುತ್ತಿವೆ ಎಂದೆಂದುಕೊಂಡಿದ್ದೇವೆ. ಈ ಕಾಲದಲ್ಲಿ 'ಪ್ರೇಮ' ಎಂಬ ಪದಕ್ಕೆ ತುಂಬ ಚಿತ್ರವಿಚಿತ್ರವಾದ ಅರ್ಥವಿಭೇದಗಳೇರ್ಪಟ್ಟಿವೆ. ಕೇವಲ ಶಾರೀರಕ ಕಾಮನವೇ ಮೊದಲುಗೊಂಡು ಶಾರೀರಕ ಮಾನಸಿಕ ಮಿಶ್ರವಾದ ಅನೇಕ ವಿಧ ಮಾನಸಿಕ ಪ್ರವೃತ್ತಿಗಳೆಲ್ಲಕ್ಕೂ ಒಂದೇ ಮಂತ್ರವಾಗಿ ನಮ್ಮ ಬರಹಗಾರರು ಈ ಪದವನ್ನು ಬಳಸುತ್ತಿದ್ದಾರೆ. ಕಾಳಿದಾಸ ಕವಿತೆಯಲ್ಲಿ ಈ ಸಮಸ್ಯಾಪರಿಶೀಲನೆ ತುಂಬ ಸೂಕ್ಷ್ಮವಾಗಿ ನಡೆದಿದೆ. ಇವನ ಕಾವ್ಯಗಳೆಲ್ಲವಲ್ಲಿಯೂ ಈ ಪ್ರೇಮಭಾವ ಪರಿಶೀಲನೆ ಒಂದು ವಿಧವಾದ ಕ್ರಮಿಕ ಪರಿಣತಿಯನ್ನು ಹೊಂದಿದಂತೆ ಕಂಡುಬರುತ್ತದೆ. ಆಯಾ ಕಾವ್ಯಗಳಲ್ಲಿಯೂ, ನಾಟಕಗಳಲ್ಲಿಯೂ ಈ ಪರಿಣಾಮವು ಹೇಗೆ ಬೆಳೆದುಬಂದಿದೆಯೋ ಮುಂದೆ ನೋಡೋಣ.

ಬೀಗಡೆ ಸುಬ್ರಹ್ಮಣ್ಯಯ್ಯರವರು*

ಶ್ರೀಮತಿ ತಿರುಮಲೆ ರಾಜಮ್ಮ ತಾತಾಚಾರ್ಯ ಶರ್ಮನ್

ಭಾಗವತೋತ್ತಮರೆನಿಸಿ ಪ್ರಖ್ಯಾತರಾದ ವಾಗ್ಗೇಯಕಾರರಲ್ಲಿ ಮೊದಲು ನಮ್ಮ ನೆನಪಿಗೆ ಬರುವವರು ತ್ಯಾಗರಾಜರು. ಕರ್ಣಾಟಕ ಪದ್ಧತಿಯಲ್ಲಿ ಸಂಗೀತ ರಚನೆಗೆ ತೊಡಗಿದವರಲ್ಲಿ ಅಗ್ರತಾಂಬೂಲವು ಅವರಿಗೇ ಸಲ್ಲುತ್ತದೆ. ಸಮಾನವಾಗಿ ಅದೇ ರಚನೆಯಲ್ಲಿ ಆ ಸಾಲಿಗೆ ಬರುವವರು ಕೆಲವರು ಮಾತ್ರ. ಸಂಖ್ಯಾಪ್ರಮಾಣವನ್ನು ಬಿಟ್ಟು ಇನ್ನೆಲ್ಲ ಗುಣಗಳಿಂದ ಆ ರಚನೆಯನ್ನು ಹೋಲುವ ಪ್ರತಿಭಾನ್ವಿತರಲ್ಲಿ ಗಣ್ಯರಾದವರು

* ನೋ ೨ನೇ ತಾ|| ಆಕಾಶವಾಣಿಯಲ್ಲಿ ಪ್ರಸಾರ ಮಾಡಿದ ಭಾಷಣ.

ಪಟ್ಣಂ ಸುಬ್ರಹ್ಮಣ್ಯಯ್ಯರವರು. ಅವರ ನೂರಾರು ಕೃತಿಗಳು ಒಂದನ್ನು ಮೀರಿಸಿ ಮತ್ತೊಂದು ಕಲಾಭಿಮಾನಿಗಳನ್ನು ಮೆಚ್ಚಿಸಿವೆ. 'ತ್ಯಾಗಯ್ಯನವರ ರಚನೆಗೆ ಸರಿದೂಗುವ ರಚನೆ ಇನ್ನೊಂದಿಲ್ಲ' ಎಂದು ಜನರಾಡಿಕೊಳ್ಳುವ ಮಾತು ಸುಳ್ಳಾಗಿಸಲೆಂದೇ ಈ ರಚನೆ ಸಿದ್ಧವಾಯಿತೋ ಅನ್ನುವಮಟ್ಟಿಗಿದೆ ಹೋಲಿಕೆ, ಹೊಂದಿಕೆ. ಅವರ ಕೃತಿಗಳನ್ನು ಹಾಡುತ್ತಿದ್ದರೆ 'ಎಂತಹ ಅಪೂರ್ವ ರಚನೆ? ತ್ಯಾಗಯ್ಯ ಮಹಾನುಭಾವ' ಎಂದು ನುಡಿದು ಬಿಟ್ಟು 'ವೆಂಕಟೇಶ' ಅಂಕಿತವನ್ನು ಕೇಳಿದೊಡನೆ 'ಓಹೋ ಇದು ಪಟ್ಣಂರವರದು' ಎಂದರಿತುಕೊಂಡ ಸಂದರ್ಭಗಳೆಷ್ಟೋ ಉಂಟು. ಈ ಹೋಲಿಕೆಯನ್ನು ಕುರಿತು ಆ ಕಾಲದಲ್ಲಿದ್ದು ಅವರ ಗಾಯನವನ್ನು ಅನೇಕ ಸಲ ಕೇಳಿ ಆನಂದಿಸಿದ್ದ ಶೂಲಮಂಗಲಂ ವೈದ್ಯನಾಥ ಭಾಗವತರು ಹೀಗೆ ಹೇಳಿದ್ದಾರೆ:—

'ನಾನು ಪಟ್ಣಂರವರ ಕಛೇರಿಗಳನ್ನು ಮದರಾಸು, ತಿರುವಾಂಕೂರು, ಶೂಲಮಂಗಲಂಗಳಲ್ಲಿ ಅನೇಕ ಸಲ ಕೇಳಿದ್ದೇನೆ. ತ್ಯಾಗಯ್ಯನವರ ಕೃತಿಗಳನ್ನು ಅವರು ಮೂಲತಃ ಹೇಗೆ ಹಾಡುತ್ತಿದ್ದರೋ ಹಾಗೆಯೇ ಹಾಡುತ್ತಿದ್ದರು. ಆ ಹಾಡಿಕೆಯ ಶುದ್ಧ ಸ್ವರೂಪ, ನಯ, ನಾಜೂಕುಗಳನ್ನು ತ್ಯಾಗರಾಜರೇ ಪ್ರತ್ಯಕ್ಷ ಕೇಳಿದ್ದರೆ ಬಹು ಸಂತೋಷಪಡುತ್ತಿದ್ದರು ಅಂದುಕೊಂಡಿದ್ದೇನೆ. ಆ ರಚನಾ ವಿಶೇಷವೇನು? ವೈಭವವೇನು? ರಹಸ್ಯವೇನೆಂಬುದನ್ನು ಪೂರ್ಣವಾಗಿ ಗ್ರಹಿಸಿದ್ದರಾದಕಾರಣ ಅವರೇ ಇವರು ಅನ್ನುವವರೆಗೆ ತದ್ವತ್ ಆಗಿತ್ತು ಹಾಡುಗಾರಿಕೆ. ಪಟ್ಣಂರವರ ಕೃತಿಗಳನ್ನು ಕೇಳಿದಾಗ ನಿಜವಾಗಿಯೂ ಅವರ ಮೇಲೆ ತ್ಯಾಗರಾಜರ ಪೂರ್ಣ ಅನುಗ್ರಹವಿತ್ತು, ಆಶೀರ್ವಾದವಿತ್ತು ಎಂದು ಬಲ್ಲವರೆಲ್ಲ ಹೇಳುವರು. ಲಕ್ಷಣಕ್ಕೂ ಇವರ ಕೃತಿಗಳು ಉದಾಹರಣೆ. ಲಕ್ಷ್ಯಕ್ಕೂ ಉದಾಹರಣೆ.

ಪಟ್ಣಂ ಸುಬ್ರಹ್ಮಣ್ಯಯ್ಯರ ಗುರುಗಳು ಮಾನಂಬೂಚವಾಡಿ ವೆಂಕಟಸುಬ್ಬಯ್ಯನವರು. ಅವರು ತ್ಯಾಗರಾಜರ ಶಿಷ್ಯರು. ಒಂದು ತಲೆಮಾರು ಈಚಿನವರಾದರೂ ಪಟ್ಣಂರವರನ್ನು ತ್ಯಾಗರಾಜರ ಪಟ್ಟಶಿಷ್ಯರೆಂದರೂ ತಪ್ಪಿಲ್ಲ. ಅವರ ಹೃದಯವನ್ನೂ ಮನೋಧರ್ಮವನ್ನೂ, ತಪಸ್ಸಿದ್ಧಿಯನ್ನೂ ಗ್ರಹಿಸಿದವರೆಂದರೆ ಇವರೇ. ಘನ ವಿದ್ವಾಂಸರು ಕೂಡಾ ಈ ಕೃತಿ ಯಾರದು ಅವರದೋ? ಇವರದೋ ಎಂದು ಭ್ರಾಂತರಾಗಿದ್ದಾರೆ."

ಈ ಭ್ರಾಂತಿಯು ಎಷ್ಟೇ ಸಹಜವಾಗಿರಲಿ ಅವರೇ ಇವರು ತ್ಯಾಗಯ್ಯನವರ ಪುನರವತಾರವೇ ಇವರು ಎಂದು ಒಂದೇ ಸಲಕ್ಕೆ ಒಪ್ಪಿಕೊಂಡುಬಿಡೋಣವೇ? ಹಾಗೆ ಹೇಳುವುದಾದರೆ ಅವರಿಗೆ ಬೇರೆ ವ್ಯಕ್ತಿತ್ವವೇ ಇಲ್ಲವೆಂದು ತೀರ್ಮಾನವೇ? ಈ ತೀರ್ಮಾನಕ್ಕೆ ಬರುವ ಮೊದಲು ಅವರ ಸ್ವಂತವಾದುದೇನಾದರೂ ಇರಬಹುದೇ ಎಂದು ಪರಿಶೀಲಿಸುವುದು ಅವರ ಪರಿಚಯವನ್ನು ಸರಿಯಾಗಿ ಮಾಡಿಕೊಳ್ಳುವ ವಿಧಾನ. ವ್ಯಕ್ತಿಯಿಂದ ವ್ಯಕ್ತಿಯು ರೂಪಸ್ವಭಾವಗಳಿಂದ ಎಷ್ಟು ಮಾತ್ರ ಭಿನ್ನವೋ ಜೀವಿತದ ಆಶ್ರಯದಲ್ಲಿಯೂ ಅಷ್ಟೇ ಭಿನ್ನ. ಆಶಯ ಸಾಧನೆಗೆ ಮತ್ತೊಬ್ಬರ ಆದರ್ಶವು ಎಷ್ಟು ಮಾತ್ರ ಪರಿಗ್ರಾಹ್ಯವೋ ಅಷ್ಟೇ. ಈ ಮಿತಿಯನ್ನರಿಯದವರನ್ನು ಕೇವಲ ಅನುಕರಣಪಟುಗಳೆಂದು ಹೇಳಬೇಕಾದೀತು. ಪಟ್ಣಂರವರು ದೈವಭಕ್ತರೂ, ಗುರುಭಕ್ತರೂ ಆದಂತೆ ಆತ್ಮವಿಶ್ವಾಸಿಗಳೂ ಅಹುದು. ಅವರಿಗೆ ಎಷ್ಟು ಮಾತ್ರ ಅನುಸರಣೆಯು ಅಗತ್ಯವಾಯಿತೋ ಎಲ್ಲಿ ಸ್ವತಂತ್ರ ಮನೋಧರ್ಮವು ಮುಂದಾಗಿ ಬಂದಿತೋ ಅದು ಕೆಲವು ಕಡೆ ಸ್ಪಷ್ಟವಾಗಿದೆ. ಗೀತ ರಚನೆಯಲ್ಲಿ ತ್ಯಾಗಯ್ಯನವರ ಸುಲಭ ಮಾರ್ಗವು ಪಟ್ಣಂರವರಿಗೆ ಮಾತ್ರವಲ್ಲ; ಇನ್ನೂ ಕೆಲವರಿಗೆ ಅನುಸರಣೀಯವಾಗಿದೆ. ಎಷ್ಟೇ ಆ ರೀತಿಯನ್ನನುಸರಿಸಿದ್ದರೂ "ನಾದೋಪಾಸಕರು ಸ್ವತಂತ್ರರು" ಎಂದ ತ್ಯಾಗರಾಜರ ಮಾತನ್ನು ಮೀರಿ ಯಾರಾಗಲಿ ರಚನೆಗೆ ತೊಡಗಿಲಾರರು.

ನಾದೋಪಾಸಕರಾಗಿ ಪರಮಾತ್ಮನ ಅನುಗ್ರಹವನ್ನು ಬಯಸಿ ಆತ್ಮನಿವೇದನೆಯಿಂದ ಆತ್ಮೋದ್ಧಾರವಾಗಿಸಿದವರೆಲ್ಲಾ ಒಂದಿಷ್ಟೂ ಮರೆಮಾಚದೆ ತಮ್ಮೆಲ್ಲ ಸ್ಥಿತಿಗಳನ್ನೂ ಹೊರಗೆಡವಿದ್ದಾರೆ. ಅವು ಕೆಲವು ಮಾತುಗಳಾಗಿ ರಾಗಗಳಾಗಿ ವ್ಯಕ್ತವಾದುವು. ಅಂತರಂಗಕ್ರಿಯೆ ಚಿಂತೆ, ಭ್ರಾಂತಿ, ಕಾತುರ, ಕೌತುಕ, ವಿಸ್ಮಯ ಹರ್ಷಗಳ ಉದ್ವಿಗ್ನತೆಯಲ್ಲಿ ಆ ಮಾತುಗಳು ಆ ರಾಗಗಳು ಅವರಿಗೆ ಒಂದು ಸಮಾಧಾನವನ್ನು ಕೊಟ್ಟವು. ತ್ಯಾಗರಾಜರ ಒಂದು ವರ್ಣನೆಯೋ ಒಂದು ಮೊರೆಯೋ ಒಂದು ಆಕ್ಷೇಪಣೆಯೋ ಒಂದು ತತ್ವವೋ ಅವೆಲ್ಲಕ್ಕೂ ಶ್ರೀ ರಾಮನೇ ಲಕ್ಷ್ಯ. ನೇರವಾಗಿ ಪರಮಾತ್ಮನನ್ನೇ ಸಂಬೋಧಿಸಿಯೂ ಆತ್ಮಸಂಬೋಧಿಯಾಗಿಯೂ ಮಾಡಿರುವ ಅವರ ರಚನೆಯ ಇಂಗಿತ ಭಾವಗಳ ಪ್ರಭಾವ ಪಟ್ಣಂರವರನ್ನು ಬಹುವಾಗಿ ಆಕರ್ಷಿಸಿರಬೇಕು. ಆ ಪರಿಣಾಮವಾಗಿ ಅದೇ ರೀತಿಯಲ್ಲಿ ಅವರ ರಚನೆಯು ಸಾಗುತ್ತ ಬಂದಿದೆ. ಇಂಗಿತಕ್ಕೆ ಇಂಗಿತ, ಭಾವಕ್ಕೆ

ಭಾವ, ಮಾತಿಗೆ ಮಾತು, ಬೆರೆತು ಹಾಡಿರುವ ಸಂದರ್ಭಗಳು ಕೆಲವಾದರೂ ಉಂಟು.

'ಸರಿವಾರಿಲಲೋ ಚೌಕಜೆಸೇವು' ಎಂಬ ಮಾತನ್ನು 'ಸರಿವಾರಿಲಲೋ ಚೌಕ ಜೇಯುವಲದು' ಎಂದು ಬಳಸಿದ್ದಾರೆ. 'ಕೋರಿನವರಮೊಸಗು ಮಯ್ಯ' 'ತೊಲಿನೇಜೇಸಿನ' ಕೀರ್ತನೆಗಳ ಸಾಹಿತ್ಯವನ್ನು ನೋಡಿ. 'ನೇನೆಂದು ವೆದಕುದುರಾ, ನಿನು ಜೆಪ್ಪ ಕಾರಣಮೇಮಿ ಮನಸಾ' ಈ ಕೃತಿಗಳ ಸಾಹಿತ್ಯದಲ್ಲಿನ ಭಾವ 'ಪಲುಮಾರು ದುರ್ಭಾಷಿಯೈ' ಎಂಬ ಮಾತು ಉದಾಹರಣೆಗೆ ಸಾಕಾಗಿದೆ.

ಮಾತು ರೀತಿ ಒಂದೇ ಆದಮೇಲೆ ಇನ್ನೇನು ವ್ಯತ್ಯಾಸ ಎಂದರೆ ಅದು ಕೆಲವುಕಡೆ ಮಾತ್ರವೇ, ಗೀತ ಶೈಲಿಯಲ್ಲಿ, ಧಾಟಿಯಲ್ಲಿ ಈ ಸಾಮ್ಯವು ಚೆನ್ನಾಗಿ ತೋರಿ ಬಂದಿದೆ. 'ರಾಮಬಾಣ'ಕೃತಿಯ ಚರಣದ ನಡಿಗೆಯನ್ನೂ, 'ಇಂಕಾ ದಯರಾಲೇದಾ' ಕೃತಿಯ ಚರಣದ ನಡಿಗೆಯನ್ನೂ ಹೋಲಿಸಿ ನೋಡಿ. ಸಂಗೀತ ಸಾಹಿತ್ಯಗಳೆರಡರ ಶೈಲಿಯಲ್ಲೂ ಬಹುಮಟ್ಟಿಗೆ ಅಲ್ಲಲ್ಲಿ ಈ ಹೋಲಿಕೆ ಇದ್ದರೂ ಇದನ್ನು ಮೀರಿ ಸ್ವಯಂ ಪ್ರಭಾವ ಮುದ್ರೆಯಿಂದ ಇನ್ನೂ ಸುಂದರವಾದ ಕೆಲವು ಕೃತಿಗಳು ಅವರಿಂದ ರಚಿತವಾಗಿವೆ.

ಇವರೂ ರಾಮಭಕ್ತರು. ತ್ಯಾಗರಾಜರು ಅನನ್ಯ ಭಾವದಿಂದ ಭಕ್ತಿಯ ಪರಮಾವಧಿಯನ್ನು ಮುಟ್ಟಿದರು. ಆದರೂ ಸಂತೃಪ್ತರಾಗಲಿಲ್ಲ, 'ನೀ ಭಕ್ತಿ ಭಾಗ್ಯ ಸುಧಾ ನಿಧಿನೀದೇದೇ ಜನ್ಮಮುಕ್ತಿ, 'ರಾಮಭಕ್ತಿ ಸಾಮ್ರಾಜ್ಯ ಮೇಮಾನವುಲ ಕಬ್ಬೆನೋ' ಎಂದು ಹಾರೈಸಿದ್ದಾರೆ. ಭಕ್ತಿಭಾವ ವಿಹ್ವಲರಾಗಿ ಒಂದೊಂದುವೇಳೆ ದೈನ್ಯದಲ್ಲಿ ತಮ್ಮ ವ್ಯಕ್ತಿತ್ವವನ್ನೇ ಮರೆತು ಕರುಣಾರಸ ಪ್ರವಾಹ ವನ್ನೇ ಹರಿಸಿಬಿಟ್ಟರು, ಕರುಣೆಯೇ ಪ್ರಧಾನವಾಗಿ ಇನ್ನೆಲ್ಲ ರಸಗಳು ಅದಕ್ಕೆ ಪೋಷಕವಾಗಿ ಹೊಂದಿಕೊಳ್ಳುತ್ತವೆ, ತಮ್ಮ ಆರಾಧ್ಯ ದೈವವನ್ನೂ ಕುರಿತು ಮೇಲಿಂದ ಮೇಲೆ ಪ್ರಶ್ನೆಗಳನ್ನು ಹಾಕುತ್ತ ಬಂದಿದ್ದಾರೆ. ಉತ್ತರಕ್ಕಾಗಿ ಕಾಯಲಿಲ್ಲ. ಅವಕಾಶವನ್ನೂ ಕೊಡಲಿಲ್ಲ.

ಇದೇ ರೀತಿಯಲ್ಲಾದ ಪಟ್ಣಂರವರ ರಚನೆಯನ್ನು ನೋಡೋಣ ಅದೇ ಉದ್ದೇಶ ಭಾವಗಳು ಬೇರೆಬೇರೆ ಮಾತುಗಳಿಂದ ಬಂದಂತಿವೆ, ಆದರೂ ಮನಸ್ಸಿನಮೇಲೆ ಉಂಟಾಗುವ ಪರಿಣಾಮದಲ್ಲಿ ಏನೋ ಒಂದು ವ್ಯತ್ಯಾಸವು ಕಾಣುತ್ತದೆ, ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವರು ವರ್ಣಿಸುವಾಗ, ಬಿನ್ನೈಸುವಾಗ. ಬೇಡುವಾಗ ಎಲ್ಲಿಯೂ ಖಿನ್ನತೆಯು ತೋರಿಬಂದಿಲ್ಲ. ಎಲ್ಲೆಡೆಯಲ್ಲಿಯೂ ಸಂಯಮಕ್ಕೆ ಬದ್ಧರಾಗಿರುವುದೇ ಅವರ ಒಂದು ವಿಶಿಷ್ಟತೆ, 'ಅಂದರಾನಿ ಪೊಂಡಾಯೆ' ಎಂದು ವಿಫಲ ಪ್ರಯತ್ನಕ್ಕೆ ವಿಚಾರಪಡುವಷ್ಟು ಸುಲಭ ದೌರ್ಬಲ್ಯವು ಅವರನ್ನಂಟದೆ ದಿಟ್ಟತನವೇ ಅಲ್ಲಲ್ಲಿ ಎದ್ದು ಕಾಣುತ್ತದೆ. ಅನನ್ಯಭಾವದಿಂದ ತನ್ನ ವ್ಯಕ್ತಿತ್ವವನ್ನೇ ಮರೆತುಬಿಡಲು ಅವರಿಗೆ ಸಾಧ್ಯವಾಗಲಿಲ್ಲವೇನೋ, ಅಷ್ಟು ದೈನ್ಯಕ್ಕೆ ಅವರು ವಶರಾಗಲಿಲ್ಲ, ವಿನಯದಿಂದ ಅಭಿಮಾನದಿಂದ ನನ್ನನ್ನು ಆದರಿಸು ಎಂದು ಪ್ರಾರ್ಥಿಸಿದ್ದಾರೆ.

> " ಅಭಿಮಾನಮೆನ್ನಡು ಗಲ್ಗುರಾಮು
> ಅಮರೇಂದ್ರವಂದಿತಪಾದ'ನಾಪೈ ॥
> ಇಭರಾಜ ವರದ ನಾಪೈ ನೀಕಿಂತ ಕೋಪಮೇಲನಯ್ಯ ?
> ಅನ್ನ ವಸ್ತ್ರಮುಲಕೇಮಿ ದ್ರೋವಯುನಿ
> ಎನ್ನಡೈನ ನಿನ್ನಡಿಗಿನಾನಾ
> ಕನ್ನತಂಡ್ರಿ ನೀವೇಯನಿ ನಮ್ಮಿತಿನಿ
> ಕರುಣಗಲ್ಗಿತೆ ಚಾಲುನನಿ ಯುಂಡಗಾ
> ತಿನ್ನಗಾ ನಾದು ಚೈ ವಿಡಿನಾಡಚೂಚಿತೇ ನನ್ನು ಬ್ರೋಚ
> ವಾರೆವರಯ್ಯಾ ? "

ದೈನ್ಯವನ್ನು ಹಿಂದಿಟ್ಟುಕೊಂಡು ವಿನಯ ಗಾಂಭೀರ್ಯಗಳು ಮುಂದೆಬಂದು ಪ್ರಶ್ನೆಮಾಡುತ್ತಿವೆ,

> ' ಮನಸುನ ನೆರನಮ್ಮಿತಿ ನೀ ಮಹಿಮಲು ವಿನಿ ನೇ ಸತತಮು ॥
> ಅನಯಮು ನನ್ನೆಟ್ಲೈನ ಆದರಿಂಚಿ ಬ್ರೋತುವನುಚು ॥

ಹೇಗಾದರೂ ನನ್ನನ್ನು ಆದರಿಸಿ ಕಾಪಾಡುವೆಯೆಂದು ನೆರೆನಂಬಿದ್ದೇನೆ, ನಾನೆಷ್ಟೇ ಅಪರಾಧಗಳನ್ನು ಮಾಡಿದ್ದರೂ ಅಂದು ಕಾಕಾಸುರನನ್ನು ಮನ್ನಿಸಿದಂತೆ ಮನ್ನಿಸುವೆಯೆಂದು ನಂಬಿದ್ದೇನೆ.

ಈ ಕೃತಿಗಳಿಗಾಗಿಯೇ ಬೇಗಡೆ ರಾಗವು ಹುಟ್ಟಿತೋ! ಇಲ್ಲ ಬೇಗಡೆಗಾಗಿ ಈ ಕೃತಿಗಳು ಆಗಿ ಬಂದುವೋ ಎನ್ನುವಷ್ಟು ಸೊಗಸಾಗಿ ಬಂದಿದೆ ರಾಗ ಭಾವ, ಈ ಕೃತಿಗಳನ್ನು ರಚಿಸಿ ಹಾಡಿದ ಮೇಲೆಯೇ ಅವರಿಗೆ 'ಬೇಗಡೆ ಸುಬ್ರಹ್ಮಣ್ಯಯ್ಯರ್' ಎಂಬ ಅಡ್ಡ ಹೆಸರು ಬಂದಿತೋ, ಇಲ್ಲ ಆ ಹೆಸರನ್ನು ಹೊಂದಿ ಅದಕ್ಕಾಗಿ ಈ ಕೃತಿಗಳನ್ನು ರಚಿಸಬೇಕಾಯಿತೋ! ಎಂತಾದರೂ ಬೇಗಡೆಯಲ್ಲಿ ಇವು ಕೃತಿ ರತ್ನಗಳು.

ಸ್ವಾಧೀನರಾಗಿಯೇ ಇದ್ದು ಒಂದು ಸಂಯಮ ಸ್ಥಿತಿಯಲ್ಲಿ ಭಕ್ತಿಯ ಸುಖಾನುಭವಮಾಡುತ್ತ ಸಂತುಷ್ಟರಾಗಿ ಪರಮಾತ್ಮನಲ್ಲಿ ತನ್ನ ಬಾಧ್ಯತೆಯನ್ನು ಭದ್ರಪಡಿಸಿ

ಕೊಳ್ಳುವ ಪ್ರಯತ್ನ ಅವರದು. ರಸೋದಧಿಯ ಮಹಾ ತರಂಗಗಳನ್ನು ತ್ಯಾಗರಾಜರೆಬ್ಬಿಸಿದರೆ, ಪಟ್ಣಂರವರು ವಿಸ್ಮಯ ಪ್ರಪಂಚದ ಅನುಭವವನ್ನು ಮಾಡಿಕೊಡುತ್ತಾರೆ. 'ಸಂಕಲ್ಪಮೇಟಿದೋ ಮನಸಾ' ಬ್ರಹ್ಮಕೈ ತೆಲುಸುನೋ ತೆಲಿಯದೊ? ಎಂದು ಅವರೇ ವಿಸ್ಮಯಗೊಂಡಿದ್ದಾರೆ, ವಿಸ್ಮಯ ವಿನೀತ ಭಾವಪೂರಿತ ರಚನೆ ಅವರದು.

'ನೇಜೇಸಿನ ನೇರಮುಲಿಟ್ಟೆದನಿ ನೀವೇ ನಾತೋ ದೆಲುಪುಮು ರಾಮಾ ನೀವುಗಾಕ ವೇರೆದೈವ ಮುನ್ನದನಿ ನೇನೆಂಚಿ ನಿನು ಮರಚಿತಿನಾ?' ಎಂಬ ಪೂರ್ಣಚಂದ್ರಿಕೆಯ ಕೃತಿಯಲ್ಲಿಯೂ

'ಅಪರಾಧಮುಲನ್ನಿಯು ಮನ್ನಿಂಚಿ ಆದರಿಂಪುಮಯ್ಯ' ಎಂಬ ಲತಾಂಗಿಯ ಕೃತಿಯಲ್ಲಿಯೂ ಈ ವಿನೀತ ವಿಸ್ಮಯ ವಿಧಾನವು ರಂಜಿಸಿದೆ. ತ್ಯಾಗಯ್ಯನವರಿಗೆ ಭಕ್ತಿಭಾವಾನುಗುಣವಾಗಿ ಶಕ್ತಿರಾಗಗಳು ಹೆಚ್ಚಾಗಿ ಬೇಕಾಯಿತು, ವಿಸ್ಮಯದಲ್ಲಿ ರಮಿಸುವ ಪಟ್ಣಂರವರಿಗೆ ಗಂಭೀರ ರಾಗಗಳೇ ಹೆಚ್ಚಾಗಿ ಬೇಕಾಯಿತು. ಅವರ ಕೃತಿಗಳಲ್ಲಿ ಕರುಣ, ವೀರ, ಅದ್ಭುತ, ಶಾಂತಿ ರಸಗಳು ಸಮಾನವಾಗಿ ಪಾಲುಗೊಂಡಿವೆ. ಸಾಮಾನ್ಯವಾಗಿ ವಕ್ರ ರಾಗಗಳಲ್ಲೂ ಅಪೂರ್ವ ರಾಗಗಳಲ್ಲೂ ಇವರಿಗೆ ಅಭಿಮಾನ ಪರಿಶ್ರಮಗಳು ವಿಶೇಷವಾಗಿದ್ದಿರಬಹುದು. ಅವರ ಕೃತಿಗಳೆಲ್ಲಾ ಆ ರಾಗಗಳಲ್ಲಿಯೇ ಇವೆ. ಇದನ್ನು ನೋಡಿದರೆ ಅವರು ಸ್ವಭಾವತಃ ಧೀರರೊ, ಸರಸಿಗಳೊ ಆಗಿದ್ದರೆಂದು ಭಾವಿಸಬಹುದು. ಈ ಸರಸೋಕ್ತಿಗಳು ಅದನ್ನು ಪುಷ್ಟೀಕರಿಸುತ್ತವೆ.

'ಪರಿದಾನ ಮಿಚ್ಚಿತೇ ಪಾಲಿಂತುವೇಮೋ . . . .
ನೀಕು ಕರುಣಗಲ್ಗಕಯುನ್ನ ಕಾರಣಮೇಮಯ್ಯ ॥
ರೊಕ್ಕಮಿಚ್ಚುಟಕುನೇ ಮುಕ್ಕಂಟಿ ಚೆಲಿಗಾನು.
ಚಕ್ಕನಿ ಜೆಲಿನಿಂಮೊಸಗ ಜನಕರಾಜುಡುಗಾನು
ಮಿಕ್ಕಲಿ ಸೈನ್ಯಮಿಾವ ಮರ್ಕಟೇಂದ್ರುಡು ಗಾನು'

ಈ ಬಗೆಯ ನಯವಾದ ಹಾಸ್ಯಕ್ಕೆ ಬಿಲಹರಿಯ ರಾಗವು ಎಷ್ಟು ಚೆನ್ನಾಗಿ ಒಪ್ಪಿದೆ, ಇದು ನಿಜವಾದ ಕೌಶಲವೆಂದು ಯಾರುತಾನೆ ಹೇಳದಿರಲು ಸಾಧ್ಯ?

'ನೀನು ಪಕ್ಷಪಾತಿಯಲ್ಲವೇ' ಎಂದು ಧ್ವನಿಸುವ ಮಾತುಗಳಲ್ಲಿ

'ಇದಿನ್ಯಾಯಮಾ ಶ್ರೀರಾಮಚಂದ್ರ
ಇಂಚುಕೈನ ತನಪಾಡನಿಲೇದಯ'
ಅಲ ಏನುಗ್ರಾ ನೀಕೇಮಿ ತಾತನಾ?
ಕೋತುಲರಾಜು ನೀತೋ ಕೊಡಬುಟ್ಕೆನಾ?
ಅಬಲರಾಯಿ ನೀಕೇಮಿ ಅತ್ತನಾ?
ಬಾಗದೆಲ್ಪುಮಯ್ಯ ಶ್ರೀ ವೇಂಕಟೇಶಾ'

ಎಂದು ಆಕ್ಷೇಪಿಸುವಷ್ಟು ಸಲಿಗೆಯನ್ನು ಮಾಳವಿಯು ಒಪ್ಪಿದ್ದಾಳೆ. ಯಾವ ಸಂದರ್ಭವಾಗಲಿ ಪರಮಾತ್ಮನ ಪ್ರಸಂಗವಲ್ಲದೆ ಮತ್ತೊಂದು ಮಾತಿಲ್ಲ, ಸ್ವಯಂ ಸ್ಫೂರ್ತಿಯಿಂದಾದ ಕೆಲವು ಕೃತಿಗಳಂತೂ ಕಲೆಗೆ ಒಪ್ಪವಿದ್ದಂತಿವೆ.

ತ್ಯಾಗಯ್ಯನವರಂತೆ ಪಾರಮಾರ್ಥಿಕ ದೃಷ್ಟಿಯು ಪ್ರಧಾನವಾಗಿದ್ದುದರಿಂದಲೇ ಇಂತಹ ರಚನೆ ಅವರಿಗೆ ಸಾಧ್ಯವಾಯಿತಲ್ಲದೆ ಅನ್ಯಥಾ ಅಲ್ಲ. ಸಂಗೀತ ಸಾಹಿತ್ಯಗಳನ್ನು ಆಶ್ರಯಿಸಿದರಲ್ಲದೆ ಅವುಗಳನ್ನುದ್ಧರಿಸಲು ಬಗೆದವರಲ್ಲ. ಕೀರ್ತಿಯನ್ನಂತೂ ಬಯಸಲೇ ಇಲ್ಲ. ಉದ್ದೇಶಿಸದೆಯೇ ಉದ್ಧಾರ ಕಾರ್ಯವು ಸಾಗುತ್ತಲೇ ಇದೆ, ಎಷ್ಟು ಹಾಡಿದರೂ, ಕೇಳಿದರೂ ಇನ್ನೂ ಹೊಸಹೊಸದಾಗಿಯೇ ಇವೆ ಆ ಕೃತಿಗಳು.

ಇಂತವರ ಜೀವಿತಕಾಲದಲ್ಲಿ ಎಂತೆಂತಹ ಘಟನೆಗಳೋ ನಡೆದಿರಬೇಕು. ಎಷ್ಟು ಹಾಡಿದರೋ, ಎಷ್ಟು ತಿರುಗಿದರೋ, ಎಷ್ಟು ವಿದ್ಯಾದಾನ ಮಾಡಿದರೋ ಈ ಅಂಶಗಳನ್ನು ಅಗತ್ಯವಾಗಿ ತಿಳಿಯಬೇಕು. ವಿಪುಲವಾಗಿ ತಿಳಿಯದಿದ್ದರೂ ಕೆಲವು ಉಲ್ಲೇಖಗಳಲ್ಲಿ ಕೆಲವಂಶಗಳು ತಿಳಿದುಬಂದಿವೆ.

ಮಹಾವೈದ್ಯನಾಥಯ್ಯರು ಕುನ್ನಕ್ಕುಡಿ ಕೃಷ್ಣಯ್ಯರು ತಿರುಕ್ಕೋಡಿ ಕಾವಲ್ ಕೃಷ್ಣಯ್ಯರು ಮುಂತಾದವರೆಲ್ಲ ಪಟ್ಣಂರವರ ಸಮಕಾಲೀನರು. ತಿರುವಾಡಿ ಪ್ರಣತಾರ್ಥಿಹರಸ್ವಾಮಿ ದೇವಾಲಯದ ಪೂರ್ವದ್ವಾರದಲ್ಲಿ ಮಹಾವೈದ್ಯನಾಥಯ್ಯರ ಮನೆ, ಪಶ್ಚಿಮದ್ವಾರದಲ್ಲಿ ಪಟ್ಣಂರವರ ಮನೆ.

ರಾಮನಾಡಿನ ಭಾಸ್ಕರ ಸೇತುಪತಿ ಮಹಾರಾಜರು ಕಲಾಪಕ್ಷಪಾತಿಗಳು. ಮಹಾವೈದ್ಯನಾಥಯ್ಯರ್ರು ಸುಬ್ರಹ್ಮಣ್ಯಯ್ಯರು ಕುನ್ನಕ್ಕುಡಿ ಕೃಷ್ಣಯ್ಯರು ಈ ತ್ರಿಮೂರ್ತಿಗಳನ್ನೂ ಒಂದುದಿನ ಒಂದೇಕಡೆ ಸೇರಿಸಿ ಒಂದೇ ವೇದಿಕೆಯಿಂದ ಅವರ ಗಾಯನವನ್ನು ಕೇಳಬಯಸಿದರು. ಮಹಾವೈದ್ಯನಾಥರು ತೋಡಿ ರಾಗವನ್ನಾರಂಭಿಸಿದರು. ಇನ್ನಿಬ್ಬರು ಗಾಯಕರೋ ಆಲಾಪನೆಯನ್ನಂದಿಕೊಂಡು ಒಬ್ಬರನ್ನೊಬ್ಬರು ಮಿಾರಿಸಿದರು. 'ಗಾನಲೋಲ ಕರಣ' ಪಲ್ಲವಿ ಮೊದಲಾಯಿತು. ಮೂವರೂ ತಂತಮ್ಮ ಕಲೋಪಾಸನೆಯ

ತಪಸ್ಸಿನ ಪೂರ್ಣಾನಂದ ಫಲವನ್ನು ದಾನಮಾಡಿ ಧನ್ಯರಾದರು. ಅಂದಿನ ಗಾನ ದೇವಗಾನ, ಮಹಾಮಹಾ ವಿದ್ವಾಂಸರೆಲ್ಲ ದಿಗ್ಭ್ರಾಂತರಾದರು. ಯಾರು ಹೆಚ್ಚು ಎಂಬ ಪ್ರಶ್ನೆ ಎದ್ದು ಮಹಾವೈದ್ಯನಾಥರೋ ಪಟ್ಣಂರವರೋ ಮೊದಲಿನವರದು ದೇವಗಾನ; ಎರಡನೆಯವರದು ಭೂಸ್ವರ್ಗಗಾನ ಎಂಬುದಾಗಿ ಕೊಂಡಾಡಿದರಂತೆ. ಅವರವರ ಕ್ಷೇತ್ರದಲ್ಲಿ ಅವರವರು ಹೆಚ್ಚೆಂದು ಅಂದು ವಿದ್ವಾಂಸರೆಲ್ಲ ಅರಿತರು. ನಿಜವಾದ ಕಲಾವಿದರು ತಮ್ಮ ಔದಾರ್ಯದಿಂದ ಇನ್ನೊಬ್ಬ ಕಲಾವಿದನನ್ನು ಗೌರವಿಸುವುದು ಒಂದು ಹಿರಿತನ. ಇಂತಹ ಸಂದರ್ಭವೊಂದು ನಡೆಯಿತು. ನಾದಸ್ವರ ವಿದ್ವಾಂಸರಲ್ಲಿ (ಶಿವಕೊಳಂದು) ಮಹಾನಿಪುಣ. ಒಮ್ಮೆ ತಿರುವಾಂಕೂರು ಆಸ್ಥಾನಕ್ಕೆ ಆತನಿಗಾಹ್ವಾನ ಬಂದಿತ್ತು. ಒಂದು ದಿನ ಬೆಳಗಿನಝಾವ. ಶಿವಕೊಳಂದು ವಸಂತರಾಗವನ್ನಾರಂಭಿಸಿದ. ನಾದತರಂಗಗಳು ಆಕಾಶದಲ್ಲಿ ತೇಲಿಕೊಂಡುಹೋದುವು. ಅರಮನೆಗೆ ಸಮೀಪದ ಮನೆಯೊಂದರಲ್ಲಿ ಆಹ್ವಾನಿತರಾಗಿ ಹೋಗಿದ್ದ ಪಟ್ಣಂರವರು ಮಲಗಿದ್ದರು. ವಸಂತರಾಗ ತರಂಗಗಳು ಕಿವಿಸೋಕಿದುವು. ಅವರು ಎಚ್ಚತ್ತು ನಾದ ಬರುವ ದಿಕ್ಕನ್ನು ಹಿಡಿದು ಹೊರಟರು. ಶಿವಕೊಳಂದುವನ್ನು ಕಂಡು ತಮ್ಮ ಸಂತೋಷವನ್ನು ಪ್ರಕಟಿಸಿ ರಾಜಸನ್ಮಾನವಾಗಿ ಹಿಂದೆ ತಮಗೆ ಅಲ್ಲಿನ ಮಹಾರಾಜರು ಕೊಟ್ಟಿದ್ದ ಶಾಲುವನ್ನು ಆತನಿಗೆ ಹೊದಿಸಿಬಿಟ್ಟರು.

ಕರ್ಣಾಟಕ ಸಂಗೀತಕ್ಕೆ ರಾಜಪೋಷಣೆ ಇತ್ತು. ಆ ಕಲೆಯನ್ನು ಬೆಳೆಸಿದ ಕೀರ್ತಿಯು ಬಹುಭಾಗ ರಾಮನಾಡಿನ ಪಾಂಡಿರೈ ದೊರೆಗಳಿಗೆ ಸಲ್ಲಬೇಕು, ಪಟ್ಣಂರವರು ಮಹಾಪ್ರತಿಭಾಶಾಲಿಗಳೆಂದು ಅವರು ತಿಳಿದಿದ್ದರು. ಬೇಕೆನಿಸಿದಾಗ ತಿರುವಾಯೂರಿಗೆ ಬಂದು ಗಾಯನವನ್ನು ಕೇಳುತ್ತಿದ್ದರು. ಹೀಗೆ ಬಂದುಹೋಗುತ್ತಾ ರಾಮನಾಡು ಶ್ರೀನಿವಾಸಯ್ಯಂಗಾರ್ ಎಂಬ ತರುಣರನ್ನು ಅವರು ಕರೆತಂದು ಪಟ್ಣಂರವರ ಶಿಷ್ಯರನ್ನಾಗಿ ಮಾಡಿದರು. ಇವರೇ ಪ್ರಖ್ಯಾತರಾದ ಪೂಜಿ ಅಯ್ಯಂಗಾರ್ಯರು,

ಒಂದುದಿನ ಪಟ್ಣಂರವರ ಮನೆಯಲ್ಲಿ ಮಹಾಸಭೆ. ಪಾಂಡಿರೈ ದೊರೆಗಳ ಸಮ್ಮುಖದಲ್ಲಿ, ಪಟ್ಣಂರವರು ಹಾಡಿದರು. ಪೂಜಿ ಅಯ್ಯಂಗಾರ್ಯರು ತಂಬೂರಿ ಶ್ರುತಿ ಕೊಟ್ಟರು. ತಿರುಗೋಕರ್ಣಂ ನಾರಾಯಣಸ್ವಾಮಿ ಅಯ್ಯರ ಪಿಟೀಲು, ತುಕಾರಾಂ ಮೃದಂಗ, ನಾರಾಯಣಸ್ವಾಮಿ ಅಯ್ಯರ ಘಟವಾದ್ಯ, ಅಂದು ಕಲ್ಯಾಣೀ ರಾಗವನ್ನು ಕೇಳಿ ಮಹಾವೈದ್ಯನಾಥಯ್ಯರು ಪಟ್ಣಂರವರನ್ನು ಬಹುವಾಗಿ ಮೆಚ್ಚಿ ಹೊಗಳಿದರು, ಇಂತಹ ಸಂದರ್ಭಗಳೆಷ್ಟೋ ಇವೆ. ಅವರು ಮೈಸೂರಿಗೂ ಬಂದಿದ್ದರು. ಆಗ ವಿದ್ವಾಂಸರೆಲ್ಲ ಸೇರಿ ಕನ್ನಡ ಗೌಳವನ್ನು ವಿಸ್ತಾರ ಮಾಡಿ ಪಲ್ಲವಿಹಾಡಬೇಕೆಂದು ಕೇಳಿದರು. ಪಟ್ಣಂರವರು ಮಹಾಸ್ಫೂರ್ತಿಯಿಂದ ಆ ರಾಗವನ್ನಾಲಾಪಿಸಿ ಪಲ್ಲವಿಹಾಡಿದರು. ಆ ಗಾಯನಕ್ಕೆ ವಿದ್ವಾಂಸರೆಲ್ಲ ಮರುಳಾಗಿ ವಿಶೇಷವಾಗಿ ಪಟ್ಣಂರವರನ್ನು ಗೌರವಿಸಿದರು. _ ಅನೇಕ ತಿಲ್ಲಾನಗಳನ್ನೂ ಅವರು ಮಾಡಿದ್ದಾರೆ, ಅನೇಕ ಶಿಷ್ಯರಿಗೆ ವಿದ್ಯಾದಾನಮಾಡಿದ್ದಾರೆ.

ಅವರು ಸದಾ ಸಂತುಷ್ಟರು. ಜೀವಿತ ಕಾಲದಲ್ಲಿ ಉದ್ದೇಶವು ನೆರವೇರುವುದು ಎಲ್ಲರಿಗೂ ಲಭ್ಯವಲ್ಲ, ಅವರಿಗಿನ್ನೇನುಬೇಕು. ಸಾರ್ಥಕ ಜನ್ಮಗಳಾಗಿ ಕಲೆಗೆ ಸಲ್ಲಿಸಿದ ಸೇವೆಗಾಗಿ ಅವರನ್ನು ಸ್ಮರಿಸಿ ಅವರ ರಚನೆಯನ್ನು ಸವಿಯುತ್ತಿದ್ದರೆ ಸಾಕು. ನಮ್ಮ ಕೃತಜ್ಞತೆ ಅವರಿಗೆ ಸಂದಂತಾಯಿತು.

ವಚನ ಪದ್ಯ

ಎನಿತು ಬಿತ್ತಿದರು ಫಲವಿಲ್ಲವಲ್ಲ,
ಬರುವ ಬೆಳೆಯೆಲ್ಲವನು ಮುಳ್ಳು ಕಳೆ ತುಡುಗಣಿಯೆ ತಿಂಬವಲ್ಲ
ಇಂತೆಂದು ನೀ ಬಿತ್ತುವುದನೇ ಬಿಡುವರೇನ ?

ಹೊಲ ಪಾಳುಬಿದ್ದು, ಹೊಲಸು ಬೆಳೆದಿದ್ದರದರಿಂದಲಾರಿಗಪಮಾನ ?
ಹೊಲದೊಡೆಯನಾರು ? ಒಕ್ಕಲಿಗನೇ ಅವನು ?
ಎಂದೆಂದು ಕಂಡವರು ಕೇಳಿದರೆ ನಾಹೇಳಲೇನ ?

ಸುತ್ತ ಬೇಲಿಯ ಕಟ್ಟಿ, ಮುಳ್ಳೆಲ್ಲವನು ಕಿತ್ತು,
ಹೊಲವಿದನು ಹಸನಾಗಿಸಾ, ತಳಮೇಲ ಉತ್ತು ;
ನನ್ನೆದೆಯನಿದನು ನಿನ್ನ ಕಯ್ಯೊಲವಮಾಡಿಕೊಳ್ಳಿ
ನೀನೊಲಿದ ಪಸಲನದರೊಳಗೆ ಬೆಳೆದುಕೊಳ್ಳ.

—ಸುಜನಾ

ಜನತೆಗೆ ವಿಜ್ಞಾನ ವರವಾಗುತ್ತಿರುವ ಸಿಲಿಕೋನ್ ಮರಳು

ಶ್ರೀ ಎಂ. ರಾಜಾರಾವ್

ಅಮೇರಿಕದ ವಿಮಾನ ದಳಕ್ಕೆ ಸೇರಿದ F-84 ಬಗೆಯ ಸುಮಾರು ಮೂವತ್ತೇಳು ವಿಮಾನಗಳು ಓಹಿಯೋ ನಗರದ ಡೇಟನ್ ವಿಮಾನ ನಿಲ್ದಾಣವನ್ನು ಬಿಟ್ಟು ಪಶ್ಚಿಮ ದಿಕ್ಕಿನಲ್ಲಿರುವ ಶಾಂತವಾದ ಹಾಗೂ ಫಲವತ್ತಾದ ಇಂಡಿಯಾನಾದ ಕಡೆ ಹಾರಿದವು. ಅವು ಹೊರಟು ಕೇವಲ ಹತ್ತು ನಿಮಿಷಗಳಾಗಿರಬಹುದಷ್ಟೆ! ಅಷ್ಟರಲ್ಲಿ ಎಂಟು ವಿಮಾನಗಳು ಇದ್ದಕ್ಕಿದ್ದಂತೆ ಸಿಟ್ಟು ಕೆಳಗೆ ಬಿದ್ದುಬಿಟ್ಟುವು. ಇದಾದ ನಾಲ್ಕು ದಿವಸಗಳ ಮೇಲೆ (ಸಂಯುಕ್ತ ಸಂಸ್ಥಾನಗಳ ಸರ್ಕಾರಕ್ಕೆ ಸೇರಿದ) ತನಿಖಾಧಿಕಾರಿಗಳೂ, ವಿಮಾನದಳದವರೂ, ಈ ದುರಂತಕ್ಕೆ ಕಾರಣವೇನೆಂದು ಹುಡುಕಲು—ವಿಮಾನದೊಳಗೆ ಗಾಳಿ ಬರಲು ಏರ್ಪಡಿಸಿದ್ದ ಕಿಟಕಿಗಳಿಗೆ ವಾತಾವರಣದ ಮಂಜು ಕವಿದು, ಒಳಗಿನ ಯಂತ್ರಗಳಿಗೆ ಗಾಳಿಯಿಲ್ಲದಂತಾಗಿ, ಒಳಗೆ ಒತ್ತಡವೇರ್ಪಟ್ಟು ಸ್ಫೋಟನಕ್ಕೆ ಎಡೆಕೊಟ್ಟಿತು ಎಂಬ ಅಂಶ ತಿಳಿಯ ಬಂದಿತು.

ಅದಾದಮೇಲೆ ವೈಮಾನಿಕ ಪ್ರವೀಣರು ಈ ಬಗ್ಗೆ ಪರಿಶೋಧನೆಯಲ್ಲಿ ಆಸಕ್ತರಾದ ರಾಸಾಯನ ಶಾಸ್ತ್ರಜ್ಞರ ಸಹಾಯಕೋರಿದರು. ಮತ್ತು ವಿದ್ಯುಚ್ಛಕ್ತಿಯಿಂದ ಕಾಸಲ್ಪಟ್ಟರೂ, ಗಾಳಿ ಬರಲು ಏರ್ಪಡಿಸಿದ ಅವಕಾಶಗಳಲ್ಲಿ ಮಂಜು ಕವಿಯದಂತೆ ಮಾಡುವ ಆದರೂ ಊರ್ಧ್ವ ವಾಯುಮಂಡಲದ ತಂಪನ್ನು ತಡೆಯಬಲ್ಲ ಹಾಗೂ ರಬ್ಬರಿನಂತೆ ಸ್ಥಿತಿಸ್ಥಾಪಕ ಶಕ್ತಿ ಪಡೆದಿರುವ ವಸ್ತು ಯಾವುದಾದರೂ ಇದೆಯೇ ಎಂದು ಪ್ರಶ್ನಿಸಿದರು. ಅದಕ್ಕೆ ಅವರ ಉತ್ತರವೂ ಸಿದ್ಧವಾಗಿಯೇ ಇತ್ತು. ಆ ವಿಶಿಷ್ಟ ಗುಣಗಳನ್ನು ಪಡೆದ ವಸ್ತುವೇ ಗಾಜಿನ ಜಾತಿಗೆ ಸೇರಿದ ಹೊಸಬಗೆಯ ಸಿಲಿಕೋನ್ ಎಂಬ ವಸ್ತುವಾಗಿತ್ತು.

ಜನ ಸಾಮಾನ್ಯರಿಗೆ ಬಹುಮಟ್ಟಿಗೆ ಕಾಣಬರುವ ಸಿಲಿಕೋನ್‌ಗೆ 'ಸಿಲಕೋನ್ ರಬ್ಬರ್' ಎಂಬ ಬೇರೊಂದು ಅಭಿಧಾನವಿದೆ. ನೋಡಲು ಇದು ಅಗಿಯುವ ಅಂಟಿನಂತಿದ್ದು, ಟೆನಿಸ್ ಚೆಂಡಿನಂತೆ ಪುಟವೆಗರುವ ಗುಣಪಡೆದಿರುತ್ತದೆ. ರಾಸಾಯನಿಕ ದೃಷ್ಟಿಯಿಂದ ಅದು ನಮಗೆ ಚಿರಪರಿಚಿತವಾದ ಗಾಜನ್ನೇ ಹೋಲುತ್ತಿದ್ದು—ಕಲ್ಲಿದ್ದಲು, ಎಣ್ಣೆ ಅಥವಾ ಗಾಳಿ ಮರಳುಗಳಿಂದ ತಯಾರಿಸಲ್ಪಡುತ್ತದೆ.

ಒಂದು ನಿಯತವಾದ ಕ್ರಮದಲ್ಲಿ ಅಣುಗಳ ಜೋಡಣೆಯಿಂದ ಈ ಸಿಲಿಕೋನ್ ರಬ್ಬರ್ ತಯಾರಾಗಿ, ದೈನಿಕ ಉಪಯೋಗದಲ್ಲಿರುವ ಗಾಜಿಗಿಂತ ಸುಮಾರು ೩೫೦ ಡಿಗ್ರಿ ಉಷ್ಣವನ್ನೂ, ಊರ್ಧ್ವ ವಾಯುಮಂಡಲ (Stratsphere)ದ ಶೀತವನ್ನೂ ತಡೆಯಬಲ್ಲದಾಗಿರುತ್ತದೆ. ಈಗ ಅಮೇರಿಕನ್ ಜೆಟ್ ವಿಮಾನಗಳ ಯಂತ್ರಗಳು ಸಿಲಿಕೋನ್ ರಬ್ಬರಿನಿಂದ ರಕ್ಷಿಸಲ್ಪಡುತ್ತವೆ.

ಸಾಧನ ಸಂಪತ್ತುಳ್ಳ ಸಿಲಿಕಾನ್ ಪಂಗಡದಲ್ಲಿ ಸಿಲಿಕೋನ್ ರಬ್ಬರ್ ಒಂದು ಬಗೆ ಮಾತ್ರ. ಇದೇ ಅಲ್ಲದೆ ನಾಲ್ಕು ವರ್ಷಗಳು ಒಂದೇ ಸಮನೆ ಬಿಸಿಲಿನಲ್ಲಿ ಕಾದರೂ ಮೆರಗು ಕಳೆದುಕೊಳ್ಳದ ಎನಾಮೆಲ್‌ಗಳೂ, ಸಾಧಾರಣ ಹತ್ತಿಯ ಬಟ್ಟೆಯನ್ನು ಹಿಂಡಿ ರಬ್ಬರ್ ತೆರೆಯಂತೆ, ನೀರು ತೊಟ್ಟಿಕ್ಕುವಂತೆ ಮಾಡುವ ವಿಕರ್ಷಕಗಳೂ ಸಿಲಿಕೋನ್ ವಸ್ತುವಿನ ರೂಪಾಂತರವಾಗಿವೆ. ಅತಿ ಎತ್ತರದಲ್ಲಿ ಹಾರಾಡುವ ವಿಮಾನಗಳ ದಿಕ್ಕು, ದೂರಗಳನ್ನು ಅಳೆಯುವ ಸಲಕರಣೆಗಳ ತಯಾರಿಕೆಯಲ್ಲಿ (—) ೧೨೦ ಡಿಗ್ರಿಯಲ್ಲಿ ಹರಿಯುವ ಸಿಲಿಕೋನ ಧವಗಳನ್ನು ಉಪಯೋಗಿಸಲಾಗುತ್ತದೆ.

ಸಿಲಿಕೋನ್ ಸಂಯುಕ್ತ ವಸ್ತುವನ್ನು ಮೊದಲ ಬಾರಿಗೆ ೧೮೬೩ರಲ್ಲಿ ಜರ್ಮನಿಯಲ್ಲಿ ತಯಾರಿಸಲಾಯಿತು. ಆದಾದಮೇಲೆ ಡಾಕ್ಟರ್ ಫೆಡರಿಕ್ ಎಸ್. ಕಿಪಿಂಗ್ ಎಂಬ ಆಂಗ್ಲ ವೈದ್ಯನು ಸುಮಾರು ನಾಲ್ವತ್ತು ವರ್ಷಕಾಲ ಸಿಲಿಕೋನ್‌ನಲ್ಲಿ ರಸಾಯನಿಕ ಪರಿಶೋಧನೆಗಳನ್ನು ನಡೆಸಿದನು. ಅದನ್ನು ಅನುಸರಿಸಿ ಆತನ ಎಷ್ಟೋ ಯೋಜನೆಗಳನ್ನು ಅಮೇರಿಕನ್ ರಸಾಯನ ಶಾಸಜ್ಞರು ಕಾರ್ಯಗತ ಮಾಡಿದರು.

ಆಮೇಲೆ ಓವೆನ್ಸ್-ಕಾರ್ನಿಂಗ್ ಎಂಬ ಶಾಸ್ತ್ರಜ್ಞ ಎಳೆ-ಗಾಜನ್ನು (Fibre Glass) ತಯಾರಿಸಿ, ಆ ಗಾಜಿನ ಎಳೆಗಳನ್ನು ಒತ್ತಟ್ಟಿಗೆ ಹಿಡಿದು, ಶಾಖವನ್ನು ತಡೆಯಬಲ್ಲ ರಾಳವಿದ್ದಿದ್ದರೆ, ಆತನ ಸಂಶೋಧನೆ

ಯನ್ನು ಉತ್ತಮವಾದ ವಿದ್ಯುತ್ ನಿರೋಧಕ (Insulation)ವಾಗಿ ಉಪಯೋಗಿಸಬಹುದೆಂದು ಸಾರಿದನು.

ಈಗ ಪ್ರಮುಖವಾದ ಎಲ್ಲಾ ವಿದ್ಯುಚ್ಛಕ್ತಿಯ ತಂತಿಗಳನ್ನು ರಾಳ ಮತ್ತು ಸಿಲಿಕೋನ್ ವಿದ್ಯುತ್ ನಿರೋಧಕಗಳು ಕಾಪಾಡುತ್ತವೆ. ಉದಾಹರಣೆಗೆ ಯುದ್ಧ ಜಹಜಿನ ಫಿರಂಗಿಗಳ ಚಲನೆಯನ್ನು ಹತೋಟಿಯಲ್ಲಿಡಲು ಇವು ಸಹಾಯ ಮಾಡುತ್ತವೆ. ಆದರೆ ಈ ವಸ್ತುವಿಗೆ ಸಾಕಷ್ಟು ಪೆಡಸು, ಮತ್ತು ಘರ್ಷಣೆಯನ್ನು ತಡೆಯಬಲ್ಲ ಶಕ್ತಿ ಸಾಲದಾಗಿರುವುದರಿಂದ ಅದನ್ನು ಇನ್ನೂ ಶಕ್ತಿಯುತವಾಗಿ ಮಾಡಲು ವಿಜ್ಞಾನಿಗಳು ಯತ್ನಿಸುತ್ತಿದ್ದಾರೆ.

ಮುಂದೆ ಬರುವ ಮೋಟಾರು ವಾಹನಗಳಿಗೆ ಸಿಲಿಕೊನ್ ಅನ್ನು ಮೃದುಚಾಲಕವಾಗಿ ಉಪಯೋಗಿಸಲು ಪ್ರಯೋಗಗಳು ನಡೆಯುತ್ತಿವೆ. ಸಿಲಿಕೋನ್ ಮೂಲವಸ್ತುವಿನ ತಯಾರಾದ ಎಣ್ಣೆಗಳು ಮಂದವಾಗದೆಯಿರುವುದರಿಂದ ಪೆಟ್ರೋಲಿಯಂಗಿಂತಲೂ ನಾಲ್ವತ್ತರಷ್ಟು ಅಧಿಕಪ್ರಮಾಣದ ಕ್ರಿಯಾಚೇತನವನ್ನು ಕೊಡುತ್ತದೆ. ಈಗಾಗಲೇ ಇದರ ಉಪಯೋಗ ಬಯಲಾಗಿ ಹಲವು ಸಂದರ್ಭಗಳಲ್ಲಿ ಎಣ್ಣೆ ಹಾಕಿದಾಗ ಆರುತಿಂಗಳು ಕೆಲಸಮಾಡುತ್ತಿದ್ದ ಯಂತ್ರಗಳು ಸಿಲಿಕೋನ್ ಎಣ್ಣೆಯಿಂದ ಮೂರು ವರ್ಷಕಾಲ ನಡೆಯುವಂತಾಗಿವೆ.

ಸಾಮಾನ್ಯವಾಗಿ ನಾವು ಉಪಯೋಗಿಸುವ ಬಣ್ಣಗಳು ಸ್ವಲ್ಪಕಾಲವಾದಮೇಲೆ ಬಿರುಕುಬಿಟ್ಟು ಕ್ರಮೇಣ ಪುಡಿಯಾಗಿ ಉದುರುಬಿಡುತ್ತವೆ. ಆದರೆ ಸಿಲಿಕೋನ ಅನ್ನು ಉಪಯೋಗಿಸಿ ತಯಾರಿಸಿದ ಬಣ್ಣಗಳು ಜಡವಾಗಿ ನಿಂತು ಬಹಳ ಕಾಲ ನಿಲ್ಲುತ್ತವೆ. ಆದರೆ ಈ ಬಣ್ಣಗಳು ಬಹಳ ಬೆಲೆಯಾಗುತ್ತವೆ ಮಾತ್ರ. ಹಡಗುಗಳಿಗೂ, ದೇವಾಲಯಗಳ (ಬಹುಮಟ್ಟಿಗೆ ಈಜಿಪ್ಟನ್ ಮಹಾದ್ವಾರಗಳಿಗೂ, ಬೀದಿಯಲ್ಲಿನ ಸಂಚಾರ ವ್ಯವಸೆಯ ಗುರುತುಗಳಿಗೂ ಈ ಬಣ್ಣಗಳನ್ನು ಉಪಯೋಗಿಸಲಾಗುತ್ತಿದೆ. ಇಷ್ಟರಲ್ಲಿಯೇ ದೊಡ್ಡದೊಡ್ಡ ಸೇತುವೆಗಳಿಗೂ ಪರೀಕ್ಷಾರ್ಥವಾಗಿ ಉಪಯೋಗಿಸಲಾಗುತ್ತದೆ. ಅಲ್ಲದೆ ತಯಾರಿಕೆಗಾರರು ಮನೆಗಳಿಗೆ ಉಪಯೋಗಿಸುವ ಬಣ್ಣಗಳಿಗೆ ಸಿಲಿಕೋನ್ ಉಪಯೋಗಿಸಿ, ನಯವಾದ ಮೇಲ್ನೋಟಕ್ಕೂ, ಸುಲಭವಾಗಿ ತೊಳೆಯಲು ಸಹಾಯವಾಗುವಂತೆಯೂ ಮಾಡುತ್ತಿದ್ದಾರೆ.

ಮೋಟಾರಿನ ಚಕ್ರಗಳನ್ನು ಕಾರ್ಖಾನೆಯ ಅಚ್ಚುಗಳಿಗೆ ಅಂಟಿಕೊಳ್ಳದಂತಾಗಲು ಒಂದು ರೀತಿಯ ಸಿಲಿಕೋನ್ ದ್ರಾವಣವನ್ನು ಉಪಯೋಗಿಸುತ್ತಾರೆ. ಇದರಿಂದ ಶೇಕಡ ಎಂಭತ್ತು ಭಾಗದ ಉಳಿತಾಯವಾಗುವುದು. ಒಂದು ವರಸೆ ಸಿಲಿಕೋನ್ ಹಚ್ಚಿದ ಕಾವಲಿಯಲ್ಲಿ, ಸುಮಾರು ಇನ್ನೂರು ಸಾರಿ ರೊಟ್ಟಿಗಳನ್ನು ಸುಡುನಷ್ಟು ಶಾಖ ಒಮ್ಮೆಗೆ ಉತ್ಪನ್ನವಾಗುತ್ತದೆ. ಪದಾರ್ಥಗಳನ್ನು ಅಂಟಿಕೊಳ್ಳದಂತೆ ನೋಡಿಕೊಳ್ಳುವ ಪೆಂಟಾಸ್ಟಿಕ್ (Pantastic) ಎಂಬ ವಸ್ತುವನ್ನು ಆಹಾರ ಶುದ್ಧಿಮಾಡಲು ಉಪಯೋಗಿಸಲಾಗುತ್ತಿದೆ. ಸಿಲಿಕೋನ್ ಮೆರುಗು ಹಚ್ಚಿದ ಮೋಟಾರ್ ಬಂಡಿಗಳಿಗೆ ಕಶ್ಮಲವು ಸುಲಭವಾಗಿ ಅಂಟುವುದಿಲ್ಲ.

ಮೇಲಿನಿಂದ ಜಿನುಗುವ ಮಳೆಯ ನೀರನ್ನು ತಡೆದು—ಭೂಮಿಯ ಮಟ್ಟದ ಮೇಲಿನ ಶಿಲ್ಪವನ್ನು ಸಾಜೂಕಾಗಿ ಉಳಿಸಲು ಮೊದಲು ಮೇಣವೇ ಮುಂತಾದ ಅಂಟುಗಳನ್ನು ಉಪಯೋಗಿಸುತ್ತಿದ್ದರು: ಅವು ಕೇವಲ ಒಂಭತ್ತು ತಿಂಗಳು ಕಾಲ ಮಟ್ಟಿಗೆ ಉಳಿಯುತ್ತಿದ್ದುವು. ಆದರೆ ಅದೇ ಸಿಲಿಕೋನ್‌ನಿಂದ ರಕ್ಷಿಸಲ್ಪಟ್ಟ ಶಿಲ್ಪಗಳು ಎಂಟು-ಹತ್ತು ವರ್ಷಗಳಿಗೂ ಮೇಲ್ಪಟ್ಟು ಬಾಳಿಕೆ ಬರುತ್ತಿದ್ದುದು ಪ್ರಯೋಗಗಳಿಂದ ಕಂಡುಬಂದಿದೆ.

ಒಳಭಾಗದ ಶೀತದ ಒತ್ತಡದಿಂದ ಮನೆಗಳ ಇಟ್ಟಿಗೆ ಸಾಲುಗಳು ಬಿರುಕು ಬಿಡುವುದನ್ನು ನಾವು ಕಂಡಿದ್ದೇವೆ. ಅದೇ ಕಾರಣದಿಂದಲೇ ಕಾಂಕ್ರಿಟ್ ರಸ್ತೆಗಳೂ ಸಹ ಬೇಗಬೇಗ ಸವೆದು ಹೋಗುತ್ತಿದ್ದುವು ಆದರೆ ಸಿಲಿಕೋನ್ ಜಲ ವಿಕರ್ಷಕವನ್ನು ಉಪಯೋಗಿಸಿದ ರಸ್ತೆಗಳು ಹತ್ತು ವರ್ಷ ಉತ್ತಮಸ್ಥಿತಿಯಲ್ಲಿದ್ದುದು—ಮಾಸಚುಸೆಟ್ಸ್‌ನಲ್ಲಿ ನಡೆಸಿದ ಒಂದು ಪ್ರಯೋಗದಿಂದ ವ್ಯಕ್ತವಾಯಿತು.

ಸಿಲಿಕೋನ್ ಜಲ ವಿಕರ್ಷಕವನ್ನು (Water repellants) ಈಗ ಉಣ್ಣೆ ಮತ್ತು ಹತ್ತಿಯ ಗಿರಣಿಗಳಲ್ಲಿ ಬಟ್ಟೆಯ ತಯಾರಿಕೆಯಲ್ಲಿ ಉಪಯೋಗಿಸುತ್ತಿದ್ದಾರೆ. ಇದರಿಂದ ಮೇಲಿಂದಮೇಲೆ ಬಟ್ಟೆ ಒಗೆಯಲ್ಪಟ್ಟರೂ ಹೆಚ್ಚು ಬಾಳಿಕೆ ಬರುವಂತಾಗುತ್ತವೆ. ಒತ್ತಾಗಿ ಸಿಲಿಕೋನ್ ಹರಡಿದ ಹತ್ತಿಯ ಬಟ್ಟೆಯ ಮೇಲೆ ನೀರಿನ ಪ್ರವಾಹವನ್ನೇ ಹರಿಸಿದರೂ, ಆ ನೀರೆಲ್ಲ ಹೊರಟುಹೋಗಿ ಒಣಬಟ್ಟೆಯಾಗಿಯೇ ಉಳಿಯುವುದು, ಹಾಗೆಂದು ಅವು ನೆಯ್ಗೆಯ

ರಂಧ್ರಗಳನ್ನೇನೂ ಮುಚ್ಚುವುದಿಲ್ಲ ಒಬ್ಬ ಮನುಷ್ಯನ 'ಸೂಟ್'ಗೆ ಸುಮಾರು ಒಂದೂ ಕಾಲು ರೂಪಾಯಿ ಬೆಲೆಯಷ್ಟು ಸಿಲಿಕೋನ್ ಸಾಕಾಗುತ್ತವೆ.

ಈಗ ಸಿಲಿಕೋನ್ ಹೊದಿಕೆಯ ಮಳೆಕೋಟು ಗಳು, ಮಂಜಿನ ಕೋಟುಗಳು, ಕೊಡೆಗಳು ಮಾರಾಟಕ್ಕೆ ಬಂದಿವೆ. ಬೇಗನೆ ಒಣಗುವ ಛತ್ರಿಗಳು, ಈಜುವ ಉಡುಪುಗಳು, ಮೋಟಾರ್ ಹೊದಿಕೆಗಳು ಇಷ್ಟರಲ್ಲೇ ಮಾರುಕಟ್ಟೆಯಲ್ಲಿ ಹೊರಬೀಳಲಿವೆ. ಮಕ್ಕಳ ಕಾಲುಗಳನ್ನು ಒದ್ದೆಯಿಂದ ತಡೆಯಲು ಸಾಧಕವಾಗುವಂತಹ ಪಾದರಕ್ಷೆಗಳು ಇನ್ನೂ ತಯಾರಾಗಬೇಕಾಗಿವೆ.

೧೯೪೫ರಲ್ಲಿ ವಿಸ್‌ಕಾನ್‌ಸಿನ್ ಪಟ್ಟಣಕ್ಕೆ ಸೇರಿದ—ಮೀನು ಹಿಡಿಯುವುದರಲ್ಲಿ ಆಸಕ್ತನಾದ ರಿಚರ್ಡ್ ಟಾಲ್‌ಬಟ್ ಎಂಬಾತ ಸಿಲಿಕೋನ್ ಸವರಿದ ಒಣಗಿದ ನೊಣಗಳನ್ನು ಗಾಳಕ್ಕೆ ಉಪಯೋಗಿಸಲು ತಾನು ಮೊದಲು ಉಪಯೋಗಿಸುತ್ತಿದ್ದ ಬರೇ ಕೊಬ್ಬಿಗಿಂತ ಚೆನ್ನಾಗಿ ತೇಲುವುದು ಕಂಡುಬಂದಿತು. ಆತ ಆ ದ್ರವಕ್ಕೆ ಸಿಲಿಕೋಟ್ ಎಂದು, ಹೆಸರಿಟ್ಟು ಒಣಗಿದ ನೊಣಗಳಿಗೆ ಅದ್ದನ್ನು ಉಪಯೋಗಿಸುವಂತೆ ಮಾಡಿದ. ಮತ್ತು ಗಾಳವನ್ನು ಕಾಪಾಡಲು ಸಿಲಿಕೋನ ಮುಲಾಮನ್ನು ತಯಾರಿಸಿದ.

ಆತನ ಹೆಂಡತಿ ಮೇಲಿಂದಮೇಲೆ ಮಕ್ಕಳ ಬಟ್ಟೆಗಳನ್ನು ಒಗೆಯುತ್ತಿದ್ದು, ಒಂದು ದಿನ ತನ್ನ ಗಂಡ ತಯಾರಿಸಿದ ಮುಲಾಮನ್ನು ಕೈಗೆ ಸವರಲು, ಅದುವರೆಗೆ ಒರಟಾಗಿ ನವೆಯಾಗುತ್ತಿದ್ದ ಆಕೆಯ ಕೈಗಳು ಗುಣಮುಖವಾಯಿತು. ಅನಂತರ ಆಕೆ ಅದನ್ನು ಮಕ್ಕಳ ಚರ್ಮದ ಮೇಲೆದ್ದ ಗುಳ್ಳೆಗಳಿಗೆ ಸವರಲು ಅವು ಮಾಯವಾದವು. ಈ ವಿಷಯ ಸುತ್ತಮುತ್ತಲ ತಾಯಂದರಿಗೆ ತಿಳಿಯಲು ಸ್ವಲ್ಪಕಾಲದಲ್ಲೇ ಟಾಲ್‌ಬಟ್‌ನ ಮನೆಯ ತುಂಬ ಮಕ್ಕಳ ಸಹಿತರಾದ ತಾಯಂದಿರು ಮಕ್ಕಳ ಚಿಕಿತ್ಸೆಗಾಗಿ ಹಾಜರಾದರು.

ಅದಾದಮೇಲೆ ಟಾಲ್‌ಬಟ್ ಸಿಲಿಕೋಟ್ ಮುಲಾಮನ್ನು ತಯಾರಿಸಿ ಪ್ರಯೋಗಾರ್ಥವಾಗಿ ವಿಶ್ವವಿದ್ಯಾಲಯಕ್ಕೆ ಕಳುಹಿಸಲು, ಅದನ್ನು ಪರೀಕ್ಷಿಸಿದ ವೈದ್ಯರು ನಡೆಸಿದ ೬೧ ಪ್ರಯೋಗಗಳಲ್ಲಿ ೫೮ ಪ್ರಯೋಗಗಳು ಯಶಸ್ವಿಯಾಗಿ, ಚಿಕಿತ್ಸೆಗೆ ಗುರಿಯಾದ ಮಕ್ಕಳು ಗುಣಮುಖವಾದುದನ್ನು ಸ್ಥಿರಪಡಿಸಿದರು.

ಈಗ ಟಾಲ್‌ಬಟ್ ಉನ್ನತ ಸಿಲಿಕೋನ್ ವ್ಯಾಪಾರೋದ್ಯಮಿಯಾಗಿದ್ದಾನೆ.

ಈ ವಿಜ್ಞಾನದ ಬೆಳವಣಿಗೆಯ ವೈಖರಿಯನ್ನು ನೋಡಿದರೆ ಬಹುಮುಖವಾದ ಉಪಯುಕ್ತತೆ ಪಡೆದ ಮಾಂತ್ರಿಕವಾದ ರಾಸಾಯನ ಪದಾರ್ಥವಾದ ಸಿಲಿಕೋನ್ ಜನತೆಗೆ ವಿಜ್ಞಾನ ಬಹುಮಾನವಾಗಿತ್ತಿರುವ ಉಪಯುಕ್ತ ವಸ್ತುವಾಗಿದೆ.

(ರೀಡರ್ಸ್ ಡೈಜೆಸ್ಟ್ ಪತ್ರಿಕೆಯಿಂದ)

ಸ್ವೀಕಾರ

*ಜಗತ್ತುಗಳ ಹುಟ್ಟು ಸಾವು:—(ಖಭೌತ ವಿಜ್ಞಾನ ಪ್ರವೇಶಿಕೆ) ಬರೆದವರು: ಶ್ರೀ ಆರ್. ಎಲ್. ನರಸಿಂಹಯ್ಯನವರು; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಕಿರೀಟಾಕಾರದ ಅಷ್ಟಪತ್ರ; ಪುಟ; XIV + ೨೬೮. ಬೆಲೆ. ಸಾಮಾನ್ಯ ಪ್ರತಿ ರೂ. ೪-೮-೦, ಕ್ಯಾಲಿಕೋ ಪ್ರತಿ ರೂ. ೬-೦-೦.

*ಭೀಷ್ಮಚರಿತೆ:—(ಭೀಷ್ಮರ ಕಥೆ) ಬರೆದವರು: ದಿ॥ ಚ. ವಾಸುದೇವಯ್ಯನವರು; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಕಿರೀಟಾಕಾರದ ಅಷ್ಟಪತ್ರ; ಪುಟ; ೨೧೧. ಬೆಲೆ. ಸಾಮಾನ್ಯ ಪ್ರತಿ: ರೂ. ೩-೪-೦ ಕ್ಯಾಲಿಕೊ ಪ್ರತಿ: ರೂ. ೪-೧೨-೦

*ಉಮರನ ಒಸಗೆ:— (ಕವಿತೆ) ಬರೆದವರು: ಶ್ರೀ ಡಿ. ವಿ. ಜಿ. ಅವರು; ಪ್ರಕಾಶಕರು: ಕಾವ್ಯಾಲಯ, ಮೈಸೂರು; ಕಿರೀಟಾಕಾರದ ಅಷ್ಟಪತ್ರ; ಪುಟ; ೧೪೦. ಬೆಲೆ. ಸಾಮಾನ್ಯ ಪ್ರತಿ: ರೂ. ೧-೧೨-೦, ಉತ್ತಮ ಪ್ರತಿ: ರೂ. ೩-೦-೦

ಸಂಸ್ಕೃತಿ :— ಬರೆದವರು: ಶ್ರೀ ಡಿ. ವಿ. ಜಿ. ಅವರು; ಪ್ರಕಾಶಕರು : ಕಾವ್ಯಾಲಯ, ಮೈಸೂರು; ಕಿರೀಟಾಕಾರದ ಅಷ್ಟಪತ್ರ; ಪುಟ : ಸಾಮಾನ್ಯ ಪ್ರತಿ ರೂ. ೧-೫-೦, ಕ್ಯಾಲಿಕೋ ಪ್ರತಿ ರೂ. ೨-೮-೦

*ಭಾರತೀಯ ಕಾವ್ಯ ಮೀಮಾಂಸೆ :—(ವಿಮರ್ಶೆ) ಬರೆದವರು: ಶ್ರೀ ತೀ. ನಂ. ಶ್ರೀಕಂಠಯ್ಯ ಅವರು; ಪ್ರಕಾಶಕರು: ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು; ಡೆಮ್ಮಿ ಎಂಟರ ಆಕಾರ; ಪುಟ; xxii + ೪೨೪. ಬೆಲೆ. ರೂ. ೩-೮-೦

ವೀರಶೈವ ಮಹಾಪುರುಷರು:— (ಭಾಗ ೮) (ಜೀವನ ಚರಿತ್ರೆ) ಬರೆದವರು: ಆಸ್ಥಾನ ವಿದ್ವಾನ್ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು; ಪ್ರಕಾಶಕರು; ಶರಣ ಸಾಹಿತ್ಯ ಕಾರ್ಯಾಲಯ, ಬಳೇಪೇಟೆ, ಬೆಂಗಳೂರು; ಕಿರೀಟಾಕಾರದ ಅಷ್ಟಪತ್ರ; ಪುಟ; ೨೫೯. ಬೆಲೆ. ರೂ. ೫-೦-೦

ಕನ್ನಡ ನುಡಿ

ಸಂಪುಟ ೧೬] ಆಗಸ್ಟ್ ೧೯೫೩ [ಸಂಚಿಕೆ ೮

ಪರಿಷತ್ತಿನಲ್ಲಿ ಹೊಸ ನೇಮಕಗಳು

ಶ್ರೀ ಸಿ. ಕೆ. ನಾಗರಾಜರಾಯರು ಗೌ॥ ಕಾರ್ಯದರ್ಶಿಗಳ ಸ್ಥಾನಕ್ಕೂ ಶ್ರೀ ಎಚ್. ಎಸ್. ಸೀತಾರಾಮ್ ಅವರು ಗೌ॥ ಕೋಶಾಧಿಕಾರಿಗಳ ಸ್ಥಾನಕ್ಕೂ ರಾಜೀನಾಮೆ ಕೊಟ್ಟದ್ದರಿಂದ ಅವರ ರಾಜೀನಾಮೆಗಳನ್ನು ಪರಿಷತ್ತಿನ ಅಧ್ಯಕ್ಷರು ವಿಷಾದದಿಂದ ಅಂಗೀಕರಿಸಿ ಶ್ರೀ ಎ. ಎನ್. ಮೂರ್ತಿರಾವ್, ಎಂ.ಎ., ಅವರನ್ನು ಗೌ॥ ಕಾರ್ಯದರ್ಶಿಗಳನ್ನಾಗಿಯೂ, ರಾಜಸೇವಾಸಕ್ತ ಡಿ. ಸಿ. ಸುಬ್ಬರಾಯಪ್ಪ, ಬಿ.ಎ.,ಬಿ.ಎಲ್., ಅವರನ್ನು ಗೌ॥ ಕೋಶಾಧಿಕಾರಿಗಳನ್ನಾಗಿಯೂ ನೇಮಕ ಮಾಡಿದ್ದಾರೆ.

ಶ್ರೀ ಸಿ. ಕೆ. ನಾಗರಾಜರಾಯರು ಹಿಂದೆ ಗೌ॥ ಕಾರ್ಯದರ್ಶಿಗಳಾಗಿಯೂ, ಗೌ॥ ಕೋಶಾಧಿಕಾರಿಗಳಾಗಿಯೂ, ಮತ್ತೆ ಗೌ॥ ಕಾರ್ಯದರ್ಶಿಗಳಾಗಿಯೂ ಬಹುವಿಧದಲ್ಲಿ ಪರಿಷತ್ತಿನ ಸೇವೆಯನ್ನು ಮಾಡಿರುತ್ತಾರೆ. ಶ್ರೀ ಎಚ್. ಎಸ್. ಸೀತಾರಾಮ್ ಅವರು ಹೋದ ವರ್ಷ ಗೌ॥ ಕೋಶಾಧಿಕಾರಿಗಳಾಗಿ ನೇಮಕವಾಗಿ ಇದುವರೆಗೂ ಉತ್ಸಾಹದಿಂದ ಕೆಲಸಗಳನ್ನು ಮಾಡಿದ್ದಾರೆ. ಈ ಇಬ್ಬರು ಮಹನೀಯರು ಪರಿಷತ್ತಿಗೆ ಮಾಡಿರುವ ಸೇವೆಗಾಗಿಯೂ ಉಪಕಾರಕ್ಕಾಗಿಯೂ ನಾವು ಬಹಳ ಕೃತಜ್ಞರಾಗಿದ್ದೇವೆ.

ಹೊಸದಾಗಿ ಗೌ॥ ಕಾರ್ಯದರ್ಶಿಗಳಾಗಿ ನೇಮಕವಾಗಿರುವ ಶ್ರೀ ಎ. ಎನ್. ಮೂರ್ತಿರಾಯರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿರುತ್ತಾರೆ. ಅವರು ದೊಡ್ಡ ಪಂಡಿತರು ಮತ್ತು ಕನ್ನಡದಲ್ಲಿ ಒಳ್ಳೆಯ ನುರಿತ ಲೇಖಕರು. 'ಯೋಧನ ಪುನರಾಗಮನ' 'ಸಾಕ್ರೆಟೀಸನ ಕೊನೆಯ ದಿನಗಳು', 'ಹವಳದ್ವೀಪ', 'ಆಷಾಢಭೂತಿ', 'ಹಗಲುಗನಸುಗಳು', 'ಪಾಶ್ಚಾತ್ಯ ಸಣ್ಣಕಥೆಗಳು' ಮೊದಲಾದ ಗ್ರಂಥಗಳನ್ನು ರಚಿಸಿ ಪ್ರಖ್ಯಾತರಾದವರು. ಅವರು ಒಳ್ಳೆಯ ವಿಮರ್ಶಕರು ಮತ್ತು ಭಾಷಣಕಾರರು. ಗೌ॥ ಕೋಶಾಧಿಕಾರಿಗಳಾಗಿ ನೇಮಕವಾಗಿರುವ ರಾಜಸೇವಾಸಕ್ತ ಡಿ. ಸಿ. ಸುಬ್ಬರಾಯಪ್ಪನವರು ಹಿಂದೆ ಹಲವುವರ್ಷಗಳ ಕಾಲ ಪರಿಷತ್ತಿನ ಗೌ॥ ಕೋಶಾಧಿಕಾರಿಗಳಾಗಿದ್ದವರು, ಪರಿಷತ್ತಿನ ನಿಕಟಸಂಬಂಧವನ್ನು ಪಡೆದಿರುವ ಮಹನೀಯರು, ಮತ್ತು ಮೈಸೂರು ಸರ್ಕಾರದಲ್ಲಿ ಅಂಡರ್ ಸೆಕ್ರಟರಿಗಳಾಗಿದ್ದು ನಿವೃತ್ತಿ ಹೊಂದಿದ ಮಾನ್ಯರು. ಹಲವು ಸಮಿತಿಗಳಲ್ಲಿಯೂ ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಸದಸ್ಯರಾಗಿ ಅಥವಾ ಅಧ್ಯಕ್ಷರಾಗಿ ಇದ್ದು ಸೇವೆಯನ್ನು ಮಾಡುತ್ತಿರುವ ನಾಡಿನ ಮುಖಂಡರು.

ಈ ಇಬ್ಬರು ಮಾನ್ಯರ ಅಧಿಕಾರಾವಧಿಯಲ್ಲಿ ಪರಿಷತ್ತು ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಬರಲೆಂದು ಹಾರೈಸುತ್ತೇವೆ.

ಬಳ್ಳಾರಿ ಜಿಲ್ಲೆ ಮತ್ತು ಮೈಸೂರು ಪ್ರಾಂತ

ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳು ಅಕ್ಟೋಬರ್ ಮೊದಲನೆಯ ತಾರೀಕಿನಿಂದ ಮೈಸೂರು ಪ್ರಾಂತಕ್ಕೆ–ಸೇರುವುದನ್ನು ಸಂತೋಷಪೂರ್ವಕವಾಗಿ ಸ್ವಾಗತಿಸುತ್ತೇವೆ. ಅದೇ ದಿನದಲ್ಲಿ ಸ್ಥಾಪಿತವಾಗುವ ಆಂಧ್ರಪ್ರಾಂತಕ್ಕೂ ಶುಭಾಶಯಗಳನ್ನು ಕೋರುತ್ತೇವೆ. ಭಾಷಾವಾರು ಪ್ರಾಂತರಚನೆಯಲ್ಲಿ ಬರುವ ತೊಡಕುಗಳೂ ಕಹಿಪ್ರಕರಣಗಳೂ ಜಗಳಗಳೂ ಈಗ ಎಲ್ಲರಿಗೂ ಮನದಟ್ಟಾಗಿ, ಎಲ್ಲವನ್ನೂ ಸೌಹಾರ್ದದಿಂದಲೂ ಶಾಂತರೀತಿಯಿಂದಲೂ ಬಗೆಹರಿಸಿಕೊಳ್ಳಬೇಕೆಂಬ ವಿವೇಕೋದಯವಾಗಿ ಸಂತೋಷ ವಾತಾವರಣದಲ್ಲಿಯೇ ಈ ಮಾರ್ಪಾಟುಗಳಾಗುತ್ತಿರುವುದು ನಮಗೆ ತೃಪ್ತಿಯನ್ನುಂಟುಮಾಡಿದೆ.

ಪಂಪಾಕ್ಷೇತ್ರ ಮತ್ತು ಆ ಕ್ಷೇತ್ರದ ಪರಮಸ್ವಾಮಿ ವಿರೂಪಾಕ್ಷ ಕನ್ನಡನಾಡಿನೊಳಕ್ಕೆ ಸೇರ್ಪಡೆಯಾಗುವುದು ಕನ್ನಡಿಗರ ಭಾಗ್ಯೋದಯ. ಹರಿಹರ, ರಾಘವಾಂಕ, ಲಕ್ಕಣ್ಣ ದಂಡೇಶ ಮೊದಲಾದ ಕನ್ನಡ ಕವಿಗಳು ಆ ಕ್ಷೇತ್ರವನ್ನೂ, ಅದರ ಮಹಿಮೆಯನ್ನೂ ಅದರ ಸ್ವಾಮಿಯನ್ನೂ ತಮ್ಮ ಕೃತಿಗಳಲ್ಲಿ ಬಹುಪರಿಯಾಗಿ ವರ್ಣಿಸಿದ್ದಾರೆ. ಎರಡನೆಯದಾಗಿ, ವಿಜಯನಗರ ರಾಜ್ಯದ ಹುಟ್ಟು ಮತ್ತು ಬೆಳೆವಣಿಗೆಗಳಿಗೆ ಕನ್ನಡಿಗರು ಕಾರಣರಾದವರು; ವಿಜಯನಗರದ ರತ್ನಸಿಂಹಾಸನ

ಮೈಸೂರ ಅರಸರ ಕೈಸೇರಿತೆಂಬುದು ಇತಿಹಾಸ ಪ್ರಸಿದ್ಧ ವಾದ ವಿಷಯ. ಈಗ ಮೈಸೂರು ಪ್ರಾಂತದಲ್ಲಿ ಆ ಭಾಗಗಳೆಲ್ಲ ಸೇರುವುದು ಸಹಜವಾಗಿದೆ. ಕನ್ನಡ ತಾಯಿಯ ಮಕ್ಕಳು ತಮ್ಮ ತಾಯಿಯ ಬಳಿಗೆ ಬಂದಂತಾಯಿತಲ್ಲದೆ ಬೇರೆ ಏನೂ ಇಲ್ಲ.

ಕನ್ನಡನಾಡು ಹಲವು ಮತಗಳವರಿಗೆ ಹಲವು ಭಾಷೆಗಳವರಿಗೆ ಆಶ್ರಯವನ್ನು ಕೊಟ್ಟುಕೊಂಡುಬಂದಿದೆ; ಮುಂದೆಯೂ ಇದೇ ಸಂಪ್ರದಾಯವನ್ನು ಅದು ಬೆಳಸಿಕೊಂಡು ಹೋಗುವುದರಲ್ಲಿ ಸಂದೇಹವಿಲ್ಲ. ಮೈಸೂರು ಪ್ರಾಂತದ ಗಡಿಯಾಚೆ ಇರುವ ಕನ್ನಡಿಗರು ಮತ್ತೆ ಬಂದು ಸೇರಲಿ; ಇತರರೂ ಅವರಿಗಿಷ್ಟವಿದ್ದರೆ ಬಂದು ಸೇರಲಿ. ಎಲ್ಲರೂ ಭರತಮಾತೆಯ ಪುತ್ರರು ತಾನೇ. ಸೌಹಾರ್ದದಿಂದ ಬಾಳಿ ಬದುಕಿ ನಾಡಿನ ಐಕಮತ್ಯವನ್ನು ಬೆಳಗೋಣ.

ಈ ಬಾರಿ ಬಳ್ಳಾರಿ ಜಿಲ್ಲೆಯ ತಾಲ್ಲೂಕು ಸ್ಥಳಗಳಲ್ಲೆಲ್ಲ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿ ಕರ್ಣಾಟಕ ಪ್ರಾಂತದ ಅಂಕುರಾರ್ಪಣ ಮಹೋತ್ಸವದಲ್ಲಿ ಕನ್ನಡಿಗರೆಲ್ಲ ಭಾಗಿಗಳಾಗಲಿ ಎಂದು ಹಾರೈಸುತ್ತೇವೆ.

ಸಾಹಿತ್ಯ ಪರೀಕ್ಷೆಗಳು

೧೯೫೩ರ ಸಾಹಿತ್ಯ ಪರೀಕ್ಷೆಗಳಿಗೆ ಅಪೇಕ್ಷಾಪತ್ರಗಳನ್ನು ಮತ್ತು ಪರೀಕ್ಷಾ ಶುಲ್ಕವನ್ನು ಪರಿಷತ್ತಿಗೆ ಕಳಿಸಿಕೊಡಬೇಕಾದ ಅವಧಿಯನ್ನು ತಾ|| ೩೧-೮-೫೩ ರಿಂದ ೩೦-೯-೫೩ರ ವರೆಗೆ ಮುಂದುವರಿಸಲಾಗಿದೆ. ಅನಂತರ ಬಂದ ಅಪೇಕ್ಷಾಪತ್ರಗಳನ್ನು ಸ್ವೀಕರಿಸಲಾಗುವುದಿಲ್ಲ.

ಸ್ವೀಕಾರ

ವೀರಶೈವ ಸಾಹಿತ್ಯ ಮತ್ತು ಇತಿಹಾಸ:— (ಭಾಗ ೧) (ಸಾಹಿತ್ಯ ಚರಿತ್ರೆ ಮತ್ತು ದರ್ಶನ) ಬರೆದವರು: ಆಸ್ಥಾನ ವಿದ್ವಾನ್ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳು; ಪ್ರಕಾಶಕರು; ಶರಣ ಸಾಹಿತ್ಯ ಕಾರ್ಯಾಲಯ, ಬಳೇಪೇಟೆ, ಬೆಂಗಳೂರು ೨. ಕಿರೀಟಾಕಾರದ ಅಷ್ಟಪತ್ರ; ಪುಟ; ೧೫೨+೨೦. ಬೆಲೆ. ರೂ. ೨-೦-೦

***ಸ್ನೇಹದ ಕಾಣಿಕೆ:**— (ಸಾಮಾಜಿಕ ಕಿರು ಕಾದಂಬರಿ) ಬರೆದವರು: ಶ್ರೀ ಎಂ. ವಿ. ಸೀತಾರಾಮಯ್ಯನವರು; ಪ್ರಕಾಶಕರು; ಎಂ. ವಿ. ಸೀತಾರಾಮಯ್ಯ, ಎಂ.ಎ., ಗವೀಪುರಂ. ಬೆಂಗಳೂರು ೪; ಕಿರೀಟಾಕಾರದ ಅಷ್ಟಪತ್ರ; ಪುಟ; ೧೦೫. ಬೆಲೆ: ರೂ. ೧-೪-೦

***ಜರತಾರಿ ಜಗದ್ಗುರು:**— (ಸಾಮಾಜಿಕ ಕಾದಂಬರಿ) ಬರೆದವರು: ಶ್ರೀ ಬಸವರಾಜ ಕಟ್ಟೀಮನಿ ಅವರು; ಪ್ರಕಾಶಕರು; ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು ೨; ಕಿರೀಟಾಕಾರದ ಅಷ್ಟಪತ್ರ; ಪುಟ; ೩೧೨. ಬೆಲೆ. ರೂ. ೩-೧೨-೦

ಸ್ವಪ್ನವಾಸವದತ್ತ ನಾಟಕ ವಿಮರ್ಶೆ;—(ವಿಮರ್ಶೆ) ಬರೆದವರು: ಶ್ರೀ ಪಂಡಿತ ಅವರು; ಪ್ರಕಾಶಕರು: ಶ್ರೀರಂಗ ಅವರು; ವಾಣೀವಿಲಾಸ ಮೊಹಲ್ಲಾ, ಮೈಸೂರು; ಕಿರೀಟಾಕಾರದ ಅಷ್ಟಪತ್ರ; ಪುಟ; ೩೫. ಬೆಲೆ. ರೂ. ೦-೮-೦

***ಭಾರತ ಪ್ರಜಾರಾಷ್ಟ್ರ ಕೀರ್ತನ ಪದ್ಯಮಾಲಿಕೆ:**— (ಪದ್ಯ) ಬರೆದವರು: ಶ್ರೀ ಎಂ. ಆರ್. ನರಸಿಂಹಯ್ಯನವರು; ಕಿರೀಟಾಕಾರದ ಅಷ್ಟಪತ್ರ; ಪುಟ; ೨೪. ಬೆಲೆ. ರೂ. ೦-೪-೦

***ಚಾಣಕ್ಯ ಸಾಹಸಂ:**— (ಪದ್ಯ) ಬರೆದವರು: ಶ್ರೀ ಡಿ. ಕೃಷ್ಣಭಟ್, ವಿದ್ವಾನ್; ಪ್ರಕಾಶಕರು; ವಿಠಲ ಪ್ರಕಾಶನ; ವಿಟ್ಲ; [illegible] ಕ. ಕಿರೀಟಾಕಾರದ ಅಷ್ಟಪತ್ರ; ಪುಟ; ४೦. ಬೆಲೆ. ರೂ. ೧-೦-೦

***ಭರತೇಶನ ದಿಗ್ವಿಜಯ:**—(ಭರತೇಶನ ದಿಗ್ವಿಜಯ ಕಥೆ) ಬರೆದವರು: ಶ್ರೀ ಶಮನ ಅವರು; ಪ್ರಕಾಶಕರು; ಸ್ವರ್ಣಸಾಹಿತ್ಯ ಬೆಂಗಳೂರು; ಕಿರೀಟಾಕಾರದ ಅಷ್ಟಪತ್ರ; ಪುಟ; ೧೪೪. ಬೆಲೆ. ರೂ. ೧-೪-೦

ಸಚಿತ್ರ ಕಸೂತಿ - ಕಲೆ:— (ಯಂತ್ರದ ಹಾಗೂ ಕೈಯ ಕಸೂತಿ) ಬರೆದವರು: ಶ್ರೀ ಸರೋಜಿನಿ ಮಹಿಷಿ ಅವರು; ಪ್ರಕಾಶಕರು; ಶ್ರೀ ಸಿ. ಡಿ. ಹಳಪೇಟೆ, ಗಾಂಧೀ ಚೌಕ, ಧಾರವಾಡ. ಕಿರೀಟಾಕಾರದ ಅಷ್ಟಪತ್ರ; ಪುಟ; ೧೬೩. ಬೆಲೆ. ರೂ. ೨-೮-೦

ಈ ಪರಿಯ ಸೊಬಗು:-- (ಕಾದಂಬರಿ) ಬರೆದವರು: ವಿ. ಎಂ. ಇನಾಂದಾರ್ ಪ್ರಕಾಶಕರು; ಲಲಿತ ಸಾಹಿತ್ಯ ಮಾಲೆ, ಧಾರವಾಡ; ಕಿರೀಟಾಕಾರದ ಅಷ್ಟಪತ್ರ; ಪುಟ; ೧೮೨. ಬೆಲೆ. ರೂ. ೨-೦-೦.

ಗೀಚುಗೆರೆ:— (ಕಥಾಸಂಗ್ರಹ) ಬರೆದವರು: ಶ್ರೀ ರಾಮಚಂದ್ರ ಕೊಟ್ಟಲಗಿ ಅವರು; ಪ್ರಕಾಶಕರು; ಲಲಿತ ಸಾಹಿತ್ಯಮಾಲೆ, ಧಾರವಾಡ, ಕಿರೀಟಾಕಾರದ ಅಷ್ಟಪತ್ರ; ಪುಟ; ೧೦೩. ಬೆಲೆ ರೂ. ೧-೪-೦

* ಈ ಗುರುತು ಹಾಕಿರುವ ಪುಸ್ತಕಗಳ ವಿಮರ್ಶೆ ಕನ್ನಡ ನುಡಿಯಲ್ಲಿ ಮುಂದೆ ಪ್ರಕಟಿಸಲಾಗುವುದು.

'ಕನ್ನಡ ನುಡಿ'ಯಲ್ಲಿ ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ಪುಸ್ತಕದ ಎರಡು ಪ್ರತಿಗಳನ್ನು ಕಳಿಸಬೇಕು. ಒಂದು ಪ್ರತಿ ಕಳಿಸಿದರೆ 'ಕನ್ನಡ ನುಡಿ'ಯಲ್ಲಿ ಸ್ವೀಕಾರ ಮಾತ್ರ ಪ್ರಕಟಿಸಲಾಗುವುದು.

ಶಿ ಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨.

ಪರಿಷತ್ತು ನಡಸುತ್ತಿರುವ 'ಕಾವ' ಮತ್ತು 'ಜಾಣ' ಪರೀಕ್ಷೆಗಳನ್ನು
ಹೈದರಾಬಾದು ಸರ್ಕಾರದವರು ಅಂಗೀಕರಿಸಿ ಹೊರಡಿಸಿರುವ ಆರ್ಡರು

GOVERNMENT OF HYDERABAD

No. 3460/GAD-S/53-Ed/53 Dated the 18th May 1953

NOTIFICATION

The Rajpramukh has been pleased to recognize the 'Kava' and 'Jana' examinations of Kannada Sahitya Parishad, Bangalore, as equivalent to the VII Class and Matriculation Examinations respectively subject to the conditions that the candidates who have passed the 'Kava' examination will first be examined, before they are appointed as teachers in Primary schools, in Arithmetic, History and Geography of the standard of class VI and that the candidates who have passed the 'Jana' examination be appointed as Kannada teachers in Middle or High School and not for other posts for which ordinary Matriculates are required.

(Sd.) BHARAT CHAND KHANNA,
Dy. Secretary to Govt. (Services).

Reg. No. M. 3975

Licenced to Post without Prepayment. License No.6

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ, ಬೆಂಗಳೂರು ೨

ಪರಿಷತ್ತಿನ ಪ್ರಕಟನೆಗಳು

೧.	ಕನ್ನಡ ಬಾವುಟ (ಮೂರನೆಯ ಮುದ್ರಣ)	೨	೦	೦
೨.	ಪಂಪ ಭಾರತದ ಕಥೆ (ವಚನ)	೧	೪	೦
೩.	ಪಂಪ ಭಾರತದ ನಿಘಂಟು	೧	೦	೦
೪.	ಪಂಪ ರಾಮಾಯಣದ ಕಥೆ (ವಚನ)	೦	೧೨	೦
೫.	*ಪಂಪ ರಾಮಾಯಣ (೪ನೆಯ ಆಶ್ವಾಸ)	೦	೮	೦
೬.	ಪಂಪ ರಾಮಾಯಣದ ನಿಘಂಟು	೦	೮	೦
೭.	*ತೊರವೆಯ ರಾಮಾಯಣ (ಬಾಲಕಾಂಡ ಸಂಧಿ ೧೩–೧೬)	೦	೩	೯
೮.	ಸೀತಾಪರಿತ್ಯಾಗ (ಜೈಮಿನಿ ಭಾರತದಿಂದ)	೦	೧೨	೬
೯.	ಜೇಮ್ಸ್ ಏಬ್ರಾಮ್ ಗಾರ್‌ಫೀಲ್ಡನ ಚರಿತ್ರೆ : ಕ್ಯಾಲಿಕೊ ಪ್ರತಿ	೧	೮	೦
	(ನಾಲ್ಕನೆಯ ಮುದ್ರಣ) ಸಾದಾ ಪ್ರತಿ	೧	೦	೦
೧೦.	ಜ್ಯೋತಿರ್ವಿನೋದಿನಿ	೨	೦	೦
೧೧.	ಹರಿದಾಸರ ಕೃತಿಗಳು (ಸ್ವರಪ್ರಸ್ತಾರ ಸಹಿತ)	೦	೧೫	೦
೧೨.	ಹೂಮಾಲೆ	೦	೧೦	೦
೧೩.	ಕನ್ನಡ ನಾಡಿನ ಚರಿತ್ರೆ: ಭಾಗ ೧ (೨ನೆಯ ಮುದ್ರಣ)	೧	೮	೦
	ಭಾಗ ೨	೧	೧೪	೦
	ಭಾಗ ೩	೧	೦	೦
೧೪.	ವಡ್ಡಾರಾಧನೆ	೨	೮	೦
೧೫.	ಜೈಮಿನಿ ಭಾರತದ ಕನ್ನಡ ಗದ್ಯಾನುವಾದ (ಅಶ್ವಮೇಧಿಕ ಪರ್ವ)	೨	೪	೦
೧೬.	*ಹರಿಶ್ಚಂದ್ರನ ರಾಜ್ಯಸಮರ್ಪಣ	೦	೪	೦
೧೭.	ಸರ್ವೋದಯ	೦	೫	೦
೧೮.	ಸೋಮೇಶ್ವರ ಶತಕ	೧	೪	೦
೧೯.	ಸಂಕಲನ	೦	೧೦	೦
೨೦.	ಕುಮಾರವ್ಯಾಸದರ್ಶನ	೦	೨	೦
೨೧.	ಕನ್ನಡದಲ್ಲಿ ಸುಧಾರಣೆಗಳು	೦	೬	೦
೨೨.	ಅರುಂಧತಿ	೦	೪	೦
೨೩.	ಚಂದ್ರಹಾಸೋಪಾಖ್ಯಾನ	೦	೧೨	೦
೨೪.	ದೂತವಾಕ್ಯ	೦	೪	೦
೨೫.	ಶಿವಶರಣರ ಕೃತಿಗಳು (ಸ್ವರಪ್ರಸ್ತಾರ ಸಹಿತ)	೨	೦	೦
೨೬.	ಹರಿದಾಸ ಸಾಹಿತ್ಯ– ಇಂಗ್ಲಿಷ್ ಉಪೋದ್ಘಾತದೊಡನೆ	೧೦	೦	೦
	,, ಇಂಗ್ಲಿಷ್ ಉಪೋದ್ಘಾತವಿಲ್ಲದ ಪ್ರತಿ	೮	೦	೦
೨೭.	ಕವಿಜಿಹ್ವಾಬಂಧನಂ	೦	೧೨	೦

*ಪ್ರತಿಗಳು ಮುಗಿದಿವೆ.

ಪುಸ್ತಕಗಳನ್ನು ಕೊಳ್ಳುವವರಿಗೆ ಕೆಳಗೆ ಕಂಡಂತೆ ರಿಯಾಯಿತಿ (ಕಮಿಷನ್) ಕೊಡಲಾಗುವುದು.

ರೂ. ೧೫/ ಮತ್ತು ಮೇಲ್ಪಟ್ಟು ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ ಸೇ. ೧೦ ರಂತೆ,

ರೂ. ೫೦/ ಮತ್ತು ಮೇಲ್ಪಟ್ಟು ಕೊಳ್ಳುವವರಿಗೆ ಸೇ. ೧೫ ರಂತೆ,

ರೂ. ೧೦೦/ ಮತ್ತು ಮೇಲ್ಪಟ್ಟು ಕೊಳ್ಳುವವರಿಗೆ ಸೇ. ೨೦ ರಂತೆ.

ಶ್ರೀಕಂಠಯ್ಯ ಅಚ್ಚುಕೂಟ–ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೨. ೧೧೨೫